# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾಯ್ದೆ



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು-570 006

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾಯ್ದೆ - 1994

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು - 570 006

# ಕರ್ನಾಟಕ ರಾಜ್ಯ ಪತ್ರ

## ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ಪತ್ರಿಕೆ**

**ಭಾಗ-೪ ಸೆಕ್ಷನ್ ೨-ಬಿ**

ಬೆಂಗಳೂರು, ಶುಕ್ರವಾರ, ನವೆಂಬರ್ ೧೧, ೧೯೯೪ ನಂ. ೬೫೪

**(ಕಾರ್ತೀಕ ೨೦, ಶಕ ವರ್ಷ ೧೯೧೬)**

## ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯ

### ಅಧಿಸೂಚನೆ

ಸಂಖ್ಯೆ : ಲಾ 9 ಎಲ್‌ಜಿಎನ್92, ಬೆಂಗಳೂರು, ದಿನಾಂಕ 11 ಮೇ ನವೆಂಬರ್, 1994

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಅಧಿನಿಯಮ, 1992ಕ್ಕೆ 8ನೇ ನವೆಂಬರ್ 1994ರಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಅದನ್ನು 1994ರ ಕರ್ನಾಟಕ ಅಧಿನಿಯಮ ಸಂಖ್ಯೆ 46 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.



# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾಯ್ದೆ 1992

## ಪರಿವಿಡಿ

ವಿಷಯ ಸೂಚಿ


| ಅಧ್ಯಾಯ | ಕಲಂ | ವಿಷಯ | ಪುಟ ಸಂಖ್ಯೆ |
|---|---|---|---|
| ಅಧ್ಯಾಯ-I | ಕಲಂ-1 | ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ | 7-9 |
| | ಕಲಂ-2 | ಪರಿಭಾಷೆಗಳು | |
| ಅಧ್ಯಾಯ-II | ಕಲಂ-3 | ವಿಶ್ವವಿದ್ಯಾನಿಲಯದ ಸ್ಥಾಪನೆ ಮತ್ತು ನಿಗಮನ | 9-5 |
| | ಕಲಂ-4 | ವಿಶ್ವವಿದ್ಯಾನಿಲಯದ ಉದ್ದೇಶಗಳು | |
| | ಕಲಂ-5 | ವಿಶ್ವವಿದ್ಯಾನಿಲಯದ ಅಧಿಕಾರಿಗಳು | |
| | ಕಲಂ-6 | ವಿಶ್ವವಿದ್ಯಾನಿಲಯವು ಎಲ್ಲಾ ವರ್ಗಗಳು, ಜಾತಿಗಳು ಮತ್ತು ಪಂಥಗಳಿಗೆ ಸೇರಿದವರಿಗೆ ಮುಕ್ತವಾಗಿರತಕ್ಕುದು. | |
| ಅಧ್ಯಾಯ-III | ಕಲಂ-7 | ವಿಶ್ವವಿದ್ಯಾನಿಲಯದ ಅಧಿಕಾರಿಗಳು | 16-21 |
| | ಕಲಂ-8 | ಕುಲಪತಿ | |
| | ಕಲಂ-9 | ಪ್ರೊ. ಚಾನ್ಸಲರು | |
| | ಕಲಂ-10 | ಉಪಕುಲಪತಿ | |
| | ಕಲಂ-11 | ಕುಲಸಚಿವರು | |
| | ಕಲಂ-12 | ಡೀನರು | |
| | ಕಲಂ-13 | ಪರೀಕ್ಷಾ ಕುಲಸಚಿವರು | |
| | ಕಲಂ-14 | ಹಣಕಾಸು ಅಧಿಕಾರಿ | |
| | ಕಲಂ-15 | ನಿರ್ದೇಶಕರು | |
| | ಕಲಂ-16 | ಇತರ ಅಧಿಕಾರಿಗಳು | |

| | | | |
|---|---|---|---|
| **ಅಧ್ಯಾಯ-IV** | ಕಲಂ-17 | ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳು | **21-24** |
| | ಕಲಂ-18 | ವ್ಯವಸ್ಥಾಪನಾ ಮಂಡಲಿ | |
| | ಕಲಂ-19 | ವಿದ್ಯಾವಿಷಯಕ ಪರಿಷತ್ | |
| | ಕಲಂ-20 | ಹಣಕಾಸು ಸಮಿತಿ | |
| | ಕಲಂ-21 | ಇತರ ಪ್ರಾಧಿಕಾರಗಳು | |
| **ಅಧ್ಯಾಯ-V** | ಕಲಂ-22 | ಪರಿನಿಯಮಗಳು | **24-28** |
| | ಕಲಂ-23 | ಪರಿನಿಯಮಗಳನ್ನು ರಚಿಸುವ ಬಗ್ಗೆ | |
| | ಕಲಂ-24 | ಆಧ್ಯಾದೇಶಗಳು | |
| | ಕಲಂ-25 | ವಿನಿಮಯಗಳು | |
| **ಅಧ್ಯಾಯ-VI** | ಕಲಂ-26 | ವಾರ್ಷಿಕ ವರದಿ | **28-29** |
| | ಕಲಂ-27 | ವಾರ್ಷಿಕ ಲೆಕ್ಕ ಪತ್ರಗಳು, ಮುಂತಾದವು | |
| **ಅಧ್ಯಾಯ-VII** | ಕಲಂ-28 | ಉದ್ಯೋಗಿಗಳ ಸೇವಾ ಷರತ್ತುಗಳು | **29-30** |
| | ಕಲಂ-29 | ಮಧ್ಯಸ್ಥಗಾರಿಕೆ ನ್ಯಾಯಾಧಿಕರಣ | |
| | ಕಲಂ-30 | ಭವಿಷ್ಯನಿಧಿ ಮತ್ತು ನಿವೃತ್ತಿ ವೇತನ ನಿಧಿಗಳು | |
| **ಅಧ್ಯಾಯ-VIII** | ಕಲಂ-31 | ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳು ಮತ್ತು ನಿಕಾಯಗಳ ರಚನೆಗೆ ಸಂಬಂಧಿಸಿದ ವಿವಾದಗಳು | **31-60** |
| | ಕಲಂ-32 | ಆಕಸ್ಮಿಕ ರಿಕ್ತತೆಗಳನ್ನು ಭರ್ತಿ ಮಾಡುವುದು | |
| | ಕಲಂ-33 | ರಚನೆ, ರಿಕ್ತತೆ, ಇತ್ಯಾದಿಗಳಲ್ಲಿ ದೋಷವಿದೆಯೆಂಬ ಕಾರಣ ಮಾತ್ರದಿಂದಲೇ ಕೃತ್ಯಗಳು ಮತ್ತು ವ್ಯವಹರಣೆಗಳು ಅಮಾನ್ಯವಾಗತಕ್ಕುದಲ್ಲ. | |
| | ಕಲಂ-34 | ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ | |
| | ಕಲಂ-35 | ಪ್ರಥಮ ಉಪಕುಲಪತಿಯವರ ನೇಮಕಾತಿ | |
| | ಕಲಂ-36 | ಪ್ರಥಮ ಕುಲಸಚಿವರ ನೇಮಕಾತಿ | |
| | ಕಲಂ-37 | ಪ್ರಥಮ ಹಣಕಾಸು ಅಧಿಕಾರಿಯ ನೇಮಕಾತಿ | |
| | ಕಲಂ-38 | ಪ್ರಥಮ ಉಪಕುಲಪತಿಯವರ ತಾತ್ಕಾಲಿಕ ಅಧಿಕಾರಗಳು | |
| | ಕಲಂ-39 | ಅನುಸೂಚಿಯನ್ನು ತಿದ್ದುಪಡಿ ಮಾಡಲು ಅಧಿಕಾರ | |





| | |
|---|---|
| ಕಲಂ-40 | ತೊಂದರೆಗಳನ್ನು ನಿವಾರಿಸಲು ಅಧಿಕಾರ |
| ಕಲಂ-41 | ಪರಿನಿಯಮಗಳು, ಅಧ್ಯಾದೇಶಗಳು ಮತ್ತು ವಿನಿಮಯಗಳನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸುವುದು ಮತ್ತು ವಿಧಾನ ಮಂಡಲದ ಮುಂದೆ ಮಂಡಿಸುವುದು. |
| ಕಲಂ-42 | ಶಾಸನ, ಸುಗ್ರೀವಾಜ್ಞೆ ಇತ್ಯಾದಿಗಳ ಮುಂದುವರೆದ ಭಾಗ |
| | ವಿಶ್ವವಿದ್ಯಾನಿಲಯದ ಉದ್ದೇಶಗಳು |
| | **ಮೊದಲನೆಯ ಅನುಸೂಚಿ** **(4ನೇ ಪ್ರಕರಣವನ್ನು ನೋಡಿ)** |
| ಪರಿನಿಯಮ ೦೧ | ವಿಶ್ವವಿದ್ಯಾನಿಲಯದ ಮೊದಲನೇ ಪರಿನಿಯಮಗಳು |
| | **ಎರಡನೇ ಅನುಸೂಚಿ** **(23ನೇ ಪ್ರಕರಣವನ್ನು ನೋಡಿ)** |
| ಪರಿನಿಯಮ ೦೨ | ಉಪಕುಲಪತಿಯವರ ಅಧಿಕಾರಗಳು ಮತ್ತು ಪ್ರಕಾರ್ಯಗಳು |
| ಪರಿನಿಯಮ ೦೩ | ಕುಲಸಚಿವರು |
| ಪರಿನಿಯಮ ೦೪ | ಡೀನರು |
| ಪರಿನಿಯಮ ೦೫ | ಪರೀಕ್ಷಾ ಕುಲಸಚಿವರು |
| ಪರಿನಿಯಮ ೦೬ | ಹಣಕಾಸು ಅಧಿಕಾರಿ |
| ಪರಿನಿಯಮ ೦೭ | ನಿರ್ದೇಶಕರು |
| ಪರಿನಿಯಮ ೦೮ | ವ್ಯವಸ್ಥಾಪನ ಮಂಡಲಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು |

ಪರಿನಿಯಮ ೧೯ ವ್ಯವಸ್ಥಾಪನ ಮಂಡಲಿಯ ಸಭೆಗೆ ಗಣಪೂರ್ತಿ

ಪರಿನಿಯಮ ೨೦ ವಿದ್ಯಾವಿಷಯಕ ಪರಿಷತ್ತಿನ ಅಧಿಕಾರಗಳು

ಪರಿನಿಯಮ ೨೧ ಹಣಕಾಸು ಸಮಿತಿಯ ಅಧಿಕಾರಗಳು

ಪರಿನಿಯಮ ೨೨ ಉಪಾಧ್ಯಾಯರು ಮುಂತಾದವರ ನೇಮಕಾತಿ

ಪರಿನಿಯಮ ೨೩ ಒಪ್ಪಿ ಯೋಜನೆಗಳಿಗನುಸಾರವಾಗಿ ನೇಮಕಾತಿಗಳು

ಪರಿನಿಯಮ ೨೪ ಬೋಧಕೇತರ ಮತ್ತು ಲಿಪಿಕ ಸಿಬ್ಬಂದಿಯ ನೇಮಕಾತಿ

ಪರಿನಿಯಮ ೨೫ ಮಾನ್ಯತೆ ಪಡೆದ ಉಪಾಧ್ಯಾಯರು

ಪರಿನಿಯಮ ೨೬ ಸಮಿತಿಗಳು

ಪರಿನಿಯಮ ೨೭ ವಿಶ್ವವಿದ್ಯಾನಿಲಯದ ಉಪಾಧ್ಯಾಯರು ಮತ್ತು ಇತರ ವಿದ್ಯಾವಿಷಯಕ ಸಿಬ್ಬಂದಿಯ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ನಡಾವಳಿ ಸಂಹಿತೆ

ಪರಿನಿಯಮ ೨೮ ವಿಶ್ವವಿದ್ಯಾನಿಲಯದ ಇತರ ಉದ್ಯೋಗಿಗಳ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ನಡಾವಳಿ ಸಂಹಿತೆ

ಪರಿನಿಯಮ ೨೯ ವಿಶ್ವವಿದ್ಯಾನಿಲಯದ ಉದ್ಯೋಗಿಗಳನ್ನು ತೆಗೆದು ಹಾಕುವುದು

ಪರಿನಿಯಮ ೩೦ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ಕಾಪಾಡುವುದು.



**1994 ಕರ್ನಾಟಕ ಅಧಿನಿಯಮ ಸಂಖ್ಯೆ : 46**

(1994ರ ನವೆಂಬರ್ ಹನ್ನೊಂದನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಅಧಿನಿಯಮ, 1992**

(1994ರ ನವೆಂಬರ್ ಎಂಟನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆಯನ್ನು ಪಡೆಯಲಾಗಿದೆ)

ರಾಜ್ಯದ ಶಿಕ್ಷಣ ಮಾದರಿಯಲ್ಲಿ ಮುಕ್ತ ವಿಶ್ವವಿದ್ಯಾನಿಲಯ ಮತ್ತು ದೂರ ಸಂಪರ್ಕ ಮಾಧ್ಯಮ ಶಿಕ್ಷಣ ಪದ್ಧತಿಯನ್ನು ಪ್ರಾರಂಭಿಸಲು ಮತ್ತು ಉತ್ತೇಜನ ನೀಡಲು ಮತ್ತು ಅಂಥ ಪದ್ಧತಿಗಳ ಗುಣಮಟ್ಟವನ್ನು ಸಮನ್ವಯಗೊಳಿಸಲು ಮತ್ತು ನಿರ್ಧರಿಸಲು ರಾಜ್ಯ ಮಟ್ಟದಲ್ಲಿ ಒಂದು ಮುಕ್ತ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಮತ್ತು ನಿಗಮಿತಗೊಳಿಸಲು ಒಂದು ಅಧಿನಿಯಮ.

ಇದರಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಒಂದು ಮುಕ್ತ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವುದು ಯುಕ್ತವಾಗಿರುವುದರಿಂದ

ಭಾರತ ಗಣರಾಜ್ಯದ ನಲವತ್ತ ಮೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ

## ಅಧ್ಯಾಯ - 1

## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ :-**

(1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯ ಅಧಿನಿಯಮ, 1992 ಎಂದು ಕರೆಯತಕ್ಕುದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯಿಸತಕ್ಕದು.

(3) ಇದು ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಂದು ಜಾರಿಯಲ್ಲಿ ಬರತಕ್ಕುದು.

**2.** ಪರಿಭಾಷೆಗಳು :- ಈ ಅಧಿನಿಯಮದಲ್ಲಿ ಮತ್ತು ಇದರ ಅಡಿಯಲ್ಲಿ ರಚಿಸಲಾದ ಪರಿನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು

(ಎ) "ವಿದ್ಯಾ ವಿಷಯಕ ಪರಿಷತ್ತು" ಎಂದರೆ ವಿಶ್ವವಿದ್ಯಾನಿಲಯದ ವಿದ್ಯಾ ವಿಷಯಕ ಪರಿಷತ್ತು ;

(ಬಿ) "ವ್ಯವಸ್ಥಾಪನಾ ಮಂಡಲಿ" ಎಂದರೆ ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಲಿ.

(ಸಿ) "ಕಾಲೇಜು" ಎಂದರೆ ವಿಶ್ವವಿದ್ಯಾನಿಲಯದಿಂದ ಸ್ಥಾಪಿತವಾದ ಅಥವಾ ನಿರ್ವಹಿಸಲಾದ ಅಥವಾ ವಿಶ್ವವಿದ್ಯಾನಿಲಯದ ವಿಶೇಷಾಧಿಕಾರಿಗಳಿಗೆ ಹಕ್ಕುಳ್ಳ ಒಂದು ಕಾಲೇಜು ಅಥವಾ ಇತರ ವಿದ್ಯಾವಿಷಯಕ ಸಂಸ್ಥೆ.

(ಡಿ) "ದೂರಸಂಪರ್ಕ ಮಾಧ್ಯಮ ಶಿಕ್ಷಣ" ಎಂದರೆ ಬಾನುಲಿ ಪ್ರಸಾರ, ದೂರದರ್ಶನ ಪ್ರಸಾರ, ಶಿಕ್ಷಣ ಮಾಧ್ಯಮ ಅಥವಾ ಮುದ್ರಿತ ಮಾಧ್ಯಮ, ಸಂಕಿರಣಗಳು, ಸಂಪರ್ಕ ಕಾರ್ಯಕ್ರಮಗಳು ಅಥವಾ ಅಂಥ ಯಾವುದೇ ಎರಡು ಅಥವಾ ಹೆಚ್ಚು ಮಾಧ್ಯಮಗಳ ಸಂಯೋಜನೆಯಿಂದ ಯಾವುದೇ ಸಂಪರ್ಕ ಮಾಧ್ಯಮದ ಮೂಲಕ ಶಿಕ್ಷಣ ನೀಡುವ ಪದ್ಧತಿ.

(ಇ) "ಉದ್ಯೋಗಿ" ಎಂದರೆ ವಿಶ್ವವಿದ್ಯಾನಿಲಯದಿಂದ ನೇಮಿತನಾದ ಯಾವೊಬ್ಬ ವ್ಯಕ್ತಿ ಮತ್ತು ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಮತ್ತು ಇದು ಆಡಳಿತಾತ್ಮಕ ಸಿಬ್ಬಂದಿ ವರ್ಗವನ್ನು ಒಳಗೊಳ್ಳುತ್ತದೆ.

(ಎಫ್) "ಹಣಕಾಸು ಸಮಿತಿ" ಎಂದರೆ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ.

(ಜಿ) "ಪ್ರಾದೇಶಿಕ ಕೇಂದ್ರ" ಎಂದರೆ ಯಾವುದೇ ಪ್ರದೇಶದಲ್ಲಿರುವ ಅಧ್ಯಯನ ಕೇಂದ್ರಗಳ ಕಾರ್ಯವನ್ನು ಸಮನ್ವಯಗೊಳಿಸುವ ಮತ್ತು ಮೇಲ್ವಿಚಾರಣೆ ನಡೆಸುವ ಮತ್ತು ವ್ಯವಸ್ಥಾಪನಾ ಮಂಡಲಿಯಿಂದ ಅಂಥ ಕೇಂದ್ರಗಳಿಗೆ ಪ್ರದತ್ತವಾಗಬಹುದಾದಂಥ ಇತರ ಪ್ರಕಾರ್ಯಗಳನ್ನು ನೆರವೇರಿಸುವ ಉದ್ದೇಶಕ್ಕಾಗಿ ವಿಶ್ವವಿದ್ಯಾನಿಲಯದಿಂದ ಸ್ಥಾಪಿತವಾದ ಅಥವಾ ನಿರ್ವಹಿಸಲಾದ ಒಂದು ಕೇಂದ್ರ.

(ಎಚ್) "ವಿನಿಯಮಗಳು" ಎಂದರೆ ತತ್ಕಾಲದಲ್ಲಿ ಜಾರಿಯಲ್ಲಿರುವ, ಈ ಅಧಿನಿಯಮದ ಅಡಿಯಲ್ಲಿ ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರಗಳಿಂದ ರಚಿತವಾದ ವಿನಿಯಮಗಳು ;



(ಐ) "ಪರಿನಿಯಮಗಳು" ಮತ್ತು "ಅಧ್ಯಾದೇಶಗಳು" ಎಂದರೆ, ಅನುಕ್ರಮವಾಗಿ, ತತ್ಕಾಲದಲ್ಲಿ ಜಾರಿಯಲ್ಲಿರುವ ವಿಶ್ವವಿದ್ಯಾನಿಲಯದ ಪರಿನಿಯಮಗಳು ಮತ್ತು ಅಧ್ಯಾದೇಶಗಳು.

(ಜೆ) "ವಿದ್ಯಾರ್ಥಿ" ಎಂದರೆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಮತ್ತು ಇದು ವಿಶ್ವವಿದ್ಯಾನಿಲಯದ ಯಾವುದೇ ಅಧ್ಯಯನ ಕ್ರಮವನ್ನು ಮುಂದುವರಿಸುವುದಕ್ಕಾಗಿ ಭರ್ತಿಯಾದ ಯಾವೊಬ್ಬ ವ್ಯಕ್ತಿಯನ್ನು ಒಳಗೊಳ್ಳುತ್ತದೆ.

(ಕೆ) "ಅಧ್ಯಯನ ಕೇಂದ್ರ" ಎಂದರೆ ಸಲಹೆ ನೀಡುವ, ವಕೀಲಿ ನಡೆಸುವ ಅಥವಾ ಮೌಲ್ಯಮಾಪನಕ್ಕಾಗಿ ಮತ್ತು ಪರೀಕ್ಷೆಯನ್ನು ನಡೆಸುವುದಕ್ಕಾಗಿ ಅಥವಾ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಯಾವುದೇ ಇತರ ನೆರವು ನೀಡುವ ಉದ್ದೇಶಕ್ಕಾಗಿ ವಿಶ್ವವಿದ್ಯಾನಿಲಯದಿಂದ ಸ್ಥಾಪಿಸಲಾದ, ನಿರ್ವಹಿಸಲಾದ ಅಥವಾ ಮಾನ್ಯತೆ ಪಡೆದ ಒಂದು ಕೇಂದ್ರ.

(ಎಲ್) "ಉಪಾಧ್ಯಾಯ" ಎಂದರೆ ಪ್ರಾಧ್ಯಾಪಕರು, ರೀಡರುಗಳು, ಅಧ್ಯಾಪಕರು ಮತ್ತು ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣ ನೀಡಲು ಅಥವಾ ವಿಶ್ವವಿದ್ಯಾನಿಲಯದ ಯಾವುದೇ ಅಧ್ಯಯನ ಕ್ರಮವನ್ನು ಮುಂದುವರೆಸಲು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಲು ಅಥವಾ ನೆರವು ನೀಡಲು ಅಧ್ಯಾದೇಶದ ಮೂಲಕ ಹಾಗೆಂದು ಪದನಾಮ ನೀಡಬಹುದಾದ ಅಂಥ ಇತರ ವ್ಯಕ್ತಿಗಳು.

(ಎಮ್) "ವಿಶ್ವವಿದ್ಯಾನಿಲಯ" ಎಂದರೆ ಈ ಅಧಿನಿಯಮದ 3ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ.

(ಎನ್) "ಉಪಕುಲಪತಿ" ಮತ್ತು "ಕುಲಸಚಿವ" ಎಂದರೆ, ಅನುಕ್ರಮವಾಗಿ ವಿಶ್ವ ವಿದ್ಯಾನಿಲಯದ ಉಪ ಕುಲಪತಿ ಮತ್ತು ಕುಲಸಚಿವ.

## ಅಧ್ಯಾಯ - II

## ವಿಶ್ವವಿದ್ಯಾನಿಲಯ

**3.** **ವಿಶ್ವವಿದ್ಯಾನಿಲಯದ ಸ್ಥಾಪನೆ ಮತ್ತು ನಿಗಮನ :**

(1) "ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ" ಎಂಬ ಹೆಸರಿನಿಂದ ಕರೆಯಲಾಗುವ ಒಂದು ವಿಶ್ವ ವಿದ್ಯಾನಿಲಯವನ್ನು ಸ್ಥಾಪಿಸತಕ್ಕದು.

(2) ವಿಶ್ವವಿದ್ಯಾನಿಲಯದ ಕೇಂದ್ರ ಕಾರ್ಯಸ್ಥಾನವು ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟ ಪಡಿಸಬಹುದಾದಂಥ ಸ್ಥಳದಲ್ಲಿ ಇರತಕ್ಕದ್ದು ಮತ್ತು ಅದು ಕರ್ನಾಟಕದಲ್ಲಿ ಕಾಲೇಜುಗಳು, ಪ್ರಾದೇಶಿಕ ಕೇಂದ್ರಗಳು ಮತ್ತು ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಬಹುದು, ನಡೆಸಬಹುದು ಅಥವಾ ಅವುಗಳಿಗೆ ಮಾನ್ಯತೆ ನೀಡಬಹುದು ಮತ್ತು ಕರ್ನಾಟಕದ ಹೊರಗೆ ತಾನು ಉಚಿತವೆಂದು ಭಾವಿಸುವಂಥ ಸ್ಥಳಗಳಲ್ಲಿ ಸಹ ಕೇಂದ್ರಗಳನ್ನು ಪ್ರಾರಂಭಿಸಬಹುದು.

(3) ಪ್ರಥಮ ಕುಲಪತಿ, ಪ್ರಥಮ ಕುಲಸಚಿವ ಮತ್ತು ವ್ಯವಸ್ಥಾಪನಾ ಮಂಡಲಿ, ವಿದ್ಯಾ ವಿಷಯಕ ಪರಿಷತ್ತಿನ ಪ್ರಥಮ ಸದಸ್ಯರು ಮತ್ತು ಇನ್ನು ಮುಂದೆ ಅಂಥ ಅಧಿಕಾರಿಗಳು ಅಥವಾ ಸದಸ್ಯರಾಗುವ ಎಲ್ಲ ವ್ಯಕ್ತಿಗಳು, ಅಂಥ ಪದ ಅಥವಾ ಸದಸ್ಯತ್ವವನ್ನು ಧಾರಣ ಮಾಡುವುದನ್ನು ಮುಂದುವರೆಸುವವರೆಗೆ, 'ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ'ವೆಂಬ ಹೆಸರಿನಿಂದ ಕರೆಯಲಾಗುವ ನಿಗಮಿತ ನಿಕಾಯವನ್ನು ಈ ಮೂಲಕ ರಚಿಸುತ್ತಾರೆ.

(4) ವಿಶ್ವವಿದ್ಯಾನಿಲಯವು ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರತಕ್ಕದು ಮತ್ತು ಅದು ಸದರಿ ಹೆಸರಿನಿಂದ ದಾವೆ ಹೂಡಬಹುದು ಮತ್ತು ದಾವೆಗೊಳಗಾಗಬಹುದು.

(5) ವಿಶ್ವವಿದ್ಯಾನಿಲಯವು ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಆರ್ಜಿಸಲು ವಿಶ್ವವಿದ್ಯಾನಿಲಯದ ಉದ್ದೇಶಗಳಿಗಾಗಿ ತನ್ನಲ್ಲಿ ನಿಹಿತವಾಗಿರುವ ಅಥವಾ ತನ್ನಿಂದ ಅರ್ಜಿಸಲಾದ ಯಾವುದೇ ಚರ ಮತ್ತು ಸ್ಥಿರ ಸ್ವತ್ತನ್ನು ಗೇಣಿಗೆ ಕೊಡಲು, ಮಾರಾಟ ಮಾಡಲು ಅಥವಾ ಇತರ ರೀತಿಯಲ್ಲಿ ವರ್ಗಾಯಿಸಲು ಮತ್ತು ಕರಾರು ಮಾಡಿಕೊಳ್ಳಲು ಮತ್ತು ಈ ಅಧಿನಿಯಮದ ಉದ್ದೇಶಗಳಿಗಾಗಿ ಅವಶ್ಯಕವಿರುವ ಎಲ್ಲ ಕೆಲಸಗಳನ್ನು ಮಾಡಲು ಸಕ್ಷಮವಾಗಿರತಕ್ಕದು.

(6) ವಿಶ್ವವಿದ್ಯಾನಿಲಯದಿಂದ ಅಥವಾ ಅದರ ವಿರುದ್ಧ ಹೂಡಲಾದ ಎಲ್ಲ ದಾವೆಗಳು ಮತ್ತು ಇತರ ಕಾನೂನು ವ್ಯವಹರಣೆಗಳಲ್ಲಿರುವ ವಾದಪತ್ರಗಳಿಗೆ ರಿಜಿಸ್ಟ್ರಾರರು, ಸಹಿ ಮಾಡತಕ್ಕದು ಮತ್ತು ಸತ್ಯಾಪನೆ ಮಾಡತಕ್ಕದು ಮತ್ತು ಅಂಥ ಪ್ರತಿಯೊಂದು ದಾವೆಗಳು ಮತ್ತು ವ್ಯವಹರಣೆಗಳಲ್ಲಿರುವ ಎಲ್ಲ ಆದೇಶಿಕೆಗಳನ್ನು ರಿಜಿಸ್ಟ್ರಾರರಿಗೆ ಹೊರಡಿಸತಕ್ಕದು ಮತ್ತು ಅವರಿಗೆ ಜಾರಿಗೊಳಿಸತಕ್ಕದು.



**4. ವಿಶ್ವವಿದ್ಯಾನಿಲಯದ ಉದ್ದೇಶಗಳು :-**

ಯಾವುದೇ ಸಂಪರ್ಕ ತಾಂತ್ರಿಕತೆಯನ್ನು ಬಳಸಿಕೊಳ್ಳುವುದೂ ಸೇರಿದಂತೆ ಸಂಪರ್ಕ ಸಾಧನೆಗಳ ವಿಭಿನ್ನತೆಯನ್ನು ಬಳಸಿಕೊಂಡು ಕಲಿಕೆ ಮತ್ತು ಜ್ಞಾನವನ್ನು ಮುಂದುವರೆಸುವುದು ಮತ್ತು ಪ್ರಚಾರ ಮಾಡುವುದು, ಹೆಚ್ಚಿನ ಜನರಿಗೆ ಉನ್ನತ ಶಿಕ್ಷಣಕ್ಕಾಗಿ ಅವಕಾಶ ಕಲ್ಪಿಸುವುದು ಮತ್ತು ಸಾಮಾನ್ಯ ಜನಸಮುದಾಯದ ಒಳಿತಿಗಾಗಿ ಶಿಕ್ಷಣಕ್ಕೆ ಉತ್ತೇಜನ ನೀಡುವುದು, ಕರ್ನಾಟಕ ರಾಜ್ಯದ ಶಿಕ್ಷಣ ಮಾದರಿಯಲ್ಲಿ ಮುಕ್ತ ವಿಶ್ವವಿದ್ಯಾನಿಲಯ ಮತ್ತು ದೂರ ಸಂಪರ್ಕ ಮಾಧ್ಯಮ ಶಿಕ್ಷಣ ಪದ್ಧತಿಗೆ ಉತ್ತೇಜನ ನೀಡಿ ಅಂಥ ಪದ್ಧತಿಯಲ್ಲಿನ ಗುಣಮಟ್ಟಗಳನ್ನು ನಿರ್ಧರಿಸುವುದು ಮತ್ತು ಸಮನ್ವಯಗೊಳಿಸುವುದು ವಿಶ್ವವಿದ್ಯಾನಿಲಯದ ಉದ್ದೇಶಗಳಾಗಿರತಕ್ಕದು ಮತ್ತು ವಿಶ್ವವಿದ್ಯಾನಿಲಯವು ತನ್ನ ಕಾರ್ಯ ಚಟುವಟಿಕೆಗಳನ್ನು ಸಂಘಟಿಸುವಲ್ಲಿ ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಉದ್ದೇಶಗಳಿಗೆ ಮುಕ್ತ ಗಮನ ನೀಡತಕ್ಕುದು.

**5. ವಿಶ್ವವಿದ್ಯಾನಿಲಯದ ಅಧಿಕಾರಿಗಳು :-** ವಿಶ್ವವಿದ್ಯಾನಿಲಯವು ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕುದು, ಎಂದರೆ-

(1) ವಿಶ್ವವಿದ್ಯಾನಿಲಯವು ಆಗಿಂದಾಗ್ಗೆ ನಿರ್ಧರಿಸಬಹುದಾದಂತೆ ತಂತ್ರಜ್ಞಾನ ಕಸಬು ಮತ್ತು ವೃತ್ತಿಗಳು ಸೇರಿದಂತೆ ಜ್ಞಾನದ ಅಂಥ ಶಾಖೆಗಳಲ್ಲಿ ಪ್ರವೇಶಕ್ಕಾಗಿ ಮತ್ತು ಶಿಕ್ಷಣಕ್ಕಾಗಿ ಅವಕಾಶ ಕಲ್ಪಿಸುವುದು ಮತ್ತು ಸಂಶೋಧನೆಗಾಗಿ ಉಪಬಂಧ ಕಲ್ಪಿಸುವುದು.

(2) ಪದವಿಗಳು, ಡಿಪ್ಲೊಮಾಗಳು, ಪ್ರಮಾಣ ಪತ್ರಗಳು ಮತ್ತು ಸಂಶೋಧನೆಗಾಗಿ ಅಥವಾ ಇತರ ಯಾವುದೇ ಉದ್ದೇಶಕ್ಕಾಗಿ ವ್ಯಾಸಂಗ ಕ್ರಮಗಳನ್ನು ಯೋಜಿಸುವುದು ಮತ್ತು ನಿಯಮಿಸುವುದು.

(3) ಪರೀಕ್ಷೆಗಳನ್ನು ನಡೆಸುವುದು ಮತ್ತು ಪದವಿಗಳು, ಡಿಪ್ಲೊಮಾಗಳು, ಪ್ರಮಾಣ ಪತ್ರಗಳು ಅಥವಾ ಇತರ ವಿದ್ಯಾವಿಷಯಕ ಪ್ರಶಸ್ತಿಗಳನ್ನು ಪ್ರಧಾನ ಮಾಡುವುದು ಅಥವಾ ಡಾಕ್ಟರೇಟ್ ಸೇರಿದಂತೆ ಪರಿನಿಯಮಗಳು ಮತ್ತು ಅಧ್ಯಾದೇಶಗಳಲ್ಲಿ ವಿಧಿಸಲಾದ ರೀತಿಯಲ್ಲಿ ಅಧ್ಯಯನ ಕ್ರಮವನ್ನು ಮುಂದುವರಿಸುವ ಅಥವಾ ಸಂಶೋಧನೆ ನಡೆಸುವ ವ್ಯಕ್ತಿಗಳಿಗೆ ಮಾನ್ಯತೆ ನೀಡುವುದು.

(4) ಪರಿನಿಯಮಗಳಿಂದ ವಿಧಿಸಲಾದ ರೀತಿಯಲ್ಲಿ ಗೌರವ ಪದವಿಗಳು ಮತ್ತು ಇತರ ಪ್ರಶಸ್ತಿಗಳನ್ನು ಪ್ರಧಾನ ಮಾಡುವುದು.

(5) ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಕಾರ್ಯಕ್ರಮಗಳ ಸಂಬಂಧದಲ್ಲಿ ದೂರಸಂಪರ್ಕ ಮಾಧ್ಯಮ ಶಿಕ್ಷಣವನ್ನು ಸಂಘಟಿಸಬಹುದಾದ ರೀತಿಯಲ್ಲಿ ನಿರ್ಧರಿಸುವುದು.

(6) ಪ್ರಾಧ್ಯಾಪಕರು, ರೀಡರುಗಳು, ಅಧ್ಯಾಪಕರು ಮತ್ತು ಇತರ ವಿದ್ಯಾವಿಷಯಕ ಸ್ಥಾನಗಳನ್ನು ಸ್ಥಾಪಿಸುವುದು, ಶಿಕ್ಷಣ ನೀಡಲು ಅಥವಾ ಶಿಕ್ಷಣ ಸಂಬಂಧಿ ಸಾಮಗ್ರಿಗಳನ್ನು ಸಿದ್ಧಪಡಿಸಲು ಅಗತ್ಯವಿರುವ ಇತರ ವಿದ್ಯಾವಿಷಯಕ ಸ್ಥಾನಗಳನ್ನು ಸ್ಥಾಪಿಸುವುದು ಅಥವಾ ಮಾರ್ಗದರ್ಶನ, ವಿನ್ಯಾಸ ಮತ್ತು ಪಠ್ಯಕ್ರಮದ ಬಗ್ಗೆ ತಿಳಿಸುವುದೂ ಸೇರಿದಂತೆ ಇತರ ವಿದ್ಯಾವಿಷಯಕ ಚಟುವಟಿಕೆಗಳನ್ನು ನಡೆಸುವುದು ಮತ್ತು ವಿದ್ಯಾರ್ಥಿಗಳು ಮಾಡಿದ ಕೆಲಸದ ಮೌಲ್ಯನಿರ್ಧಾರ ಮಾಡುವುದು ಮತ್ತು ಅಂಥ ಪ್ರಾಧ್ಯಾಪಕರು, ರೀಡರುಗಳು, ಅಧ್ಯಾಪಕರು ಮತ್ತು ಇತರ ವಿದ್ಯಾವಿಷಯಕ ಸ್ಥಾನಗಳಿಗೆ ವ್ಯಕ್ತಿಗಳನ್ನು ನೇಮಿಸುವುದು.

(7) ವಿಶ್ವವಿದ್ಯಾನಿಲಯವು ಅವಶ್ಯಕವೆಂದು ಪರಿಗಣಿಸುವಂಥ ಉದ್ದೇಶಗಳಿಗಾಗಿ ಇತರ ವಿಶ್ವವಿದ್ಯಾನಿಲಯಗಳು ಮತ್ತು ಉಚ್ಚ ಶಿಕ್ಷಣ ಸಂಸ್ಥೆಗಳು, ವೃತ್ತೀಯ ನಿಕಾಯಗಳೊಂದಿಗೆ ಸಹಕರಿಸುವುದು ಮತ್ತು ಅವುಗಳ ಸಹಕಾರ ಕೋರುವುದು.

(8) ಯೋಗ್ಯತೆಯ ಮನ್ನಣೆಗಾಗಿ, ವಿಶ್ವವಿದ್ಯಾನಿಲಯವು ಉಚಿತವೆಂದು ಭಾವಿಸಬಹುದಾದಂಥ ಸಂಶೋಧನಾ ವೇತನಗಳು, ವಿದ್ಯಾರ್ಥಿ ವೇತನಗಳು ಮತ್ತು ಬಹುಮಾನಗಳು ಮತ್ತು ಇತರ ಪಾರಿತೋಷಕಗಳನ್ನು ಸ್ಥಾಪಿಸುವುದು ಮತ್ತು ನೀಡುವುದು.

(9) ವಿಶ್ವವಿದ್ಯಾನಿಲಯವು ಆಗಿಂದಾಗ್ಗೆ ನಿರ್ಧರಿಸಬಹುದಾದಂಥ ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು.

(10) ಪರಿನಿಯಮಗಳಿಂದ ವಿಧಿಸಲಾದ ರೀತಿಯಲ್ಲಿ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸುವುದು, ನಿರ್ವಹಿಸುವುದು ಮತ್ತು ಅವುಗಳಿಗೆ ಮನ್ನಣೆ ನೀಡುವುದು.

(11) ಬಹು ಮಾಧ್ಯಮ ಶೈಕ್ಷಣಿಕ ಕಿಟ್‌ಗಳು ಮತ್ತು ಇತರ ಸಾಫ್ಟ್‌ವೇರ್‌ಗಳನ್ನು ಬಳಸಿ ಪರಿಕರ ಸಾಮಗ್ರಿಗಳನ್ನು ತಯಾರಿಸುವುದಕ್ಕಾಗಿ ಏರ್ಪಾಡು ಮಾಡುವುದು.



(12) ಉಪಾಧ್ಯಾಯರು, ಪಠ್ಯಬರಹಗಾರರು, ಮೌಲ್ಯ ನಿರ್ಧಾರಕರು ಮತ್ತು ಇತರ ವಿದ್ಯಾವಿಷಯಕ ಸಿಬ್ಬಂದಿ ವರ್ಗದವರಿಗಾಗಿ ಪುನಃಶ್ಚೇತನ ಕೋರ್ಸುಗಳು, ಕಾರ್ಯಾಗಾರಗಳು, ಸಂಕಿರಣಗಳು ಮತ್ತು ಇತರ ಕಾರ್ಯಕ್ರಮಗಳನ್ನು ಸಂಘಟಿಸುವುದು ಮತ್ತು ನಡೆಸುವುದು.

(13) ಇತರ ವಿಶ್ವವಿದ್ಯಾನಿಲಯಗಳು, ಸಂಸ್ಥೆಗಳು ಮತ್ತು ಉನ್ನತ ಕಲಿಕೆಯ ಇತರ ಸ್ಥಳಗಳಲ್ಲಿನ ಪರೀಕ್ಷೆಗಳಿಗೆ ಅಥವಾ ಅವುಗಳಲ್ಲಿರುವ ಅಧ್ಯಯನಾವಧಿಗೆ (ಪೂರ್ಣವಾದುದಾಗಿರಲಿ ಅಥವಾ ಭಾಗಶಃ ಆದುದಾಗಿರಲಿ) ವಿಶ್ವವಿದ್ಯಾನಿಲಯದಲ್ಲಿನ ಪರೀಕ್ಷೆಗಳು ಅಥವಾ ಅಧ್ಯಯನಾವಧಿಗೆ ತತ್ಸಮಾನವೆಂದು ಮಾನ್ಯತೆ ನೀಡುವುದು ಮತ್ತು ಅಂಥ ಮಾನ್ಯತೆಯನ್ನು ಯಾವುದೇ ಸಮಯದಲ್ಲಿ ಹಿಂತೆಗೆದುಕೊಳ್ಳುವುದು.

(14) ಶಿಕ್ಷಣ ತಂತ್ರಜ್ಞಾನ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ಉಪಬಂಧ ಕಲ್ಪಿಸುವುದು.

(15) ಆಡಳಿತಾತ್ಮಕ, ಲಿಪಿಕ ಮತ್ತು ಅವಶ್ಯಕವಾದ ಇತರ ಹುದ್ದೆಗಳನ್ನು ಸೃಜಿಸುವುದು ಮತ್ತು ಅವುಗಳಿಗೆ ನೇಮಕಾತಿಗಳನ್ನು ಮಾಡುವುದು.

(16) ಉಪಕಾರಧನಗಳು, ದಾನಗಳು ಮತ್ತು ಕೊಡುಗೆಗಳನ್ನು ಸ್ವೀಕರಿಸುವುದು ಮತ್ತು ವಿಶ್ವವಿದ್ಯಾನಿಲಯದ ಉದ್ದೇಶಗಳಿಗಾಗಿ ನ್ಯಾಸ ಮತ್ತು ಸರ್ಕಾರಿ ಸ್ವತ್ತೂ ಸೇರಿದಂತೆ ಯಾವುದೇ ಚರ ಅಥವಾ ಸ್ಥಿರ ಸ್ವತ್ತುಗಳನ್ನು ಅರ್ಜಿಸುವುದು ಮತ್ತು ಧಾರಣ ಮಾಡುವುದು ನಿರ್ವಹಿಸುವುದು ಮತ್ತು ವಿಲೆ ಮಾಡುವುದು.

(17) ವಿಶ್ವವಿದ್ಯಾನಿಲಯದ ಉದ್ದೇಶಗಳಿಗಾಗಿ ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ವಿಶ್ವವಿದ್ಯಾನಿಲಯದ ಸ್ವತ್ತಿನ ಭದ್ರತೆಯ ಮೇಲಾಗಲೀ ಅಥವಾ ಇತರ ರೀತಿಯಲ್ಲಾಗಲಿ ಹಣವನ್ನು ಸಾಲ ಪಡೆಯುವುದು.

(18) ಕರಾರು ಮಾಡಿಕೊಳ್ಳುವುದು, ಅವುಗಳನ್ನು ಪಾಲಿಸುವುದು, ಅವುಗಳನ್ನು ಬದಲಾಯಿಸುವುದು ಅಥವಾ ಅವುಗಳನ್ನು ರದ್ದು ಪಡಿಸುವುದು.

(19) ಅಧ್ಯಾದೇಶಗಳಿಂದ ವಿಧಿಸಬಹುದಾದಂಥ ಫೀಜುಗಳು ಮತ್ತು ಇತರ ಚಾರ್ಜುಗಳನ್ನು ಕೇಳುವುದು ಮತ್ತು ಸ್ವೀಕರಿಸುವುದು.

(20) ವಿದ್ಯಾರ್ಥಿಗಳು ಮತ್ತು ನೌಕರರ ಎಲ್ಲ ಪ್ರವರ್ಗಗಳ ನಿಯಂತ್ರಣ ಮತ್ತು ಅವರಲ್ಲಿ ಶಿಸ್ತು ಮೂಡಿಸುವುದು ಮತ್ತು ನಡಾವಳಿ ಸಂಹಿತೆಯೂ ಸೇರಿದಂತೆ ಅಂಥ ನೌಕರರ ಸೇವಾ ಷರತ್ತುಗಳನ್ನು ವಿಧಿಸುವುದು.

(21) ವಿಶ್ವವಿದ್ಯಾನಿಲಯವು ನಿರ್ಧರಿಸಬಹುದಾದಂಥ ಉದ್ದೇಶಗಳಿಗಾಗಿ ಉನ್ನತ ಕಲಿಕೆ ಅಥವಾ ಅಧ್ಯಯನದ ಯಾವುದೇ ಸಂಸ್ಥೆಗೆ ಮನ್ನಣೆ ನೀಡುವುದು ಮತ್ತು ಅಂಥ ಮಾನ್ಯತೆಯನ್ನು ಹಿಂತೆಗೆದುಕೊಳ್ಳುವುದು.

(22) ಸಂದರ್ಶಕ ಪ್ರಾಧ್ಯಾಪಕರು, ವಿಶ್ರಾಂತ ಪ್ರಾಧ್ಯಾಪಕರು, ಸಮಾಲೋಚಕರು, ಅಧಿಸದಸ್ಯರು, ವಿದ್ವಾಂಸರು, ಕಲಾವಿದರು, ಪತ್ರ ಬರಹಗಾರರು ಮತ್ತು ವಿಶ್ವವಿದ್ಯಾನಿಲಯದ ಉದ್ದೇಶಗಳ ಮುನ್ನಡೆಗಾಗಿ ಶ್ರಮಿಸುವ ಇತರೆ ವ್ಯಕ್ತಿಗಳನ್ನು ಕರಾರಿನ ಮೇಲಾಗಲಿ ಅಥವಾ ಇತರ ರೀತಿಯಲ್ಲಾಗಲಿ ನೇಮಿಸುವುದು.

(23) ವಿಶ್ವವಿದ್ಯಾನಿಲಯದ ಉಪಾಧ್ಯಾಯರಂತೆ ಇತರ ವಿಶ್ವವಿದ್ಯಾನಿಲಯಗಳು, ಸಂಸ್ಥೆಗಳು ಅಥವಾ ಸಂಘಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಗಳಿಗೆ ಅಧ್ಯಾದೇಶಗಳಿಂದ ವಿಧಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಮನ್ನಣೆ ನೀಡುವುದು.

(24) ಪರೀಕ್ಷೆ, ಮೌಲ್ಯ ನಿರ್ಧಾರ ಮತ್ತು ಪರೀಕ್ಷೆಯ ಇತರ ಯಾವುದೇ ರೀತಿಯನ್ನೊಳಗೊಳ್ಳಬಹುದಾದ ವಿಶ್ವವಿದ್ಯಾನಿಲಯದ ಅಧ್ಯಯನ ಕ್ರಮಕ್ಕೆ ವಿದ್ಯಾರ್ಥಿಗಳ ಪ್ರವೇಶಕ್ಕಾಗಿ ಗುಣಮಟ್ಟಗಳನ್ನು ನಿರ್ಧರಿಸುವುದು ಮತ್ತು ಷರತ್ತುಗಳನ್ನು ನಿರ್ದಿಷ್ಟಪಡಿಸುವುದು.

(25) ಉದ್ಯೋಗಿಗಳ ಆರೋಗ್ಯ ಮತ್ತು ಕ್ಷೇಮಾಭಿವೃದ್ಧಿಯ ಸಂವರ್ಧನೆಗಾಗಿ ಏರ್ಪಾಡುಗಳನ್ನು ಮಾಡುವುದು.

(26) ಪರಿನಿಯಮಗಳಿಂದ ವಿಧಿಸಲಾದ ರೀತಿಯಲ್ಲಿ ಕಾಲೇಜು ಅಥವಾ ಪ್ರಾದೇಶಿಕ ಕೇಂದ್ರಕ್ಕೆ ಸ್ವಾಯತ್ತ ಸ್ಥಾನಮಾನವನ್ನು ಪ್ರಧಾನ ಮಾಡುವುದು.

(27) ಪರಿನಿಯಮಗಳಿಂದ ವಿಧಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ಕರ್ನಾಟಕ ರಾಜ್ಯದಲ್ಲಿನ ಯಾವುದೇ ಕಾಲೇಜಿಗೆ ವಿಶ್ವವಿದ್ಯಾನಿಲಯದ ವಿಶೇಷಾಧಿಕಾರಿಗಳ ಹಕ್ಕನ್ನು ನೀಡುವುದು.

(28) ವಿಶ್ವವಿದ್ಯಾನಿಲಯದ ಎಲ್ಲ ಅಥವಾ ಯಾವುದೇ ಉದ್ದೇಶಗಳ ಸಂವರ್ಧನೆಗೆ ಅವಶ್ಯಕವಾದ ಮತ್ತು ಸಹಾಯಕವಾದ, ವಿಶ್ವವಿದ್ಯಾನಿಲಯದ ಎಲ್ಲ ಅಥವಾ ಯಾವುದೇ ಅಧಿಕಾರವನ್ನು ಚಲಾಯಿಸಲು ಅವಶ್ಯಕವಾಗಬಹುದಾದ ಅಥವಾ ಪ್ರಾಸಂಗಿತವಾದಂಥ ಎಲ್ಲ ಕೃತ್ಯಗಳನ್ನು ಮಾಡುವುದು.

ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಆದರೆ (1) ನೇ ಉಪ-ಪ್ರಕರಣದ ಉಪಬಂಧಗಳಿಗೆ



ಪ್ರತಿಕೂಲವಾಗದಂತೆ, ಮುಕ್ತ ವಿಶ್ವವಿದ್ಯಾನಿಲಯ ಮತ್ತು ದೂರ ಸಂಪರ್ಕ ಮಾಧ್ಯಮ ಶಿಕ್ಷಣ ಪದ್ಧತಿಯ ಸಂವರ್ಧನೆಗಾಗಿ ಮತ್ತು ಅಂಥ ಪದ್ಧತಿಗಳಲ್ಲಿಯೂ ಬೋಧನೆ, ಮೌಲ್ಯನಿರ್ಧಾರ ಮತ್ತು ಸಂಶೋಧನೆಯ ಗುಣಮಟ್ಟಗಳ ನಿರ್ಧರಣೆಗಾಗಿ ತಾನು ಉಚಿತವೆಂದು ಭಾವಿಸಬಹುದಾದಂಥ ಎಲ್ಲ ಕ್ರಮಗಳನ್ನು ಕೈಗೊಳ್ಳುವುದು ವಿಶ್ವವಿದ್ಯಾನಿಲಯದ ಕರ್ತವ್ಯವಾಗಿರತಕ್ಕದ್ದು ಮತ್ತು ಈ ಪ್ರಕಾರ್ಯವನ್ನು ನೆರವೇರಿಸುವ ಉದ್ದೇಶಕ್ಕಾಗಿ, ವಿಶ್ವವಿದ್ಯಾನಿಲಯವು ಕಾಲೇಜುಗಳಿಗೆ, ಅವು ಅವರ ವಿಶೇಷಾಧಿಕಾರಿಗಳ ಹಕ್ಕನ್ನು ಪಡೆದಿರಲಿ, ಅಥವಾ ಇಲ್ಲದಿರಲಿ, ಅಂಥವುಗಳಿಗೆ ಅಥವಾ ಪರಿ ನಿಯಮಗಳಿಂದ ನಿರ್ದಿಷ್ಟಪಡಿಸಬಹುದಾದಂಥ ಉನ್ನತ ಕಲಿಕೆಯ ಯಾವುದೇ ಇತರ ವಿಶ್ವವಿದ್ಯಾನಿಲಯ ಅಥವಾ ಸಂಸ್ಥೆಗೆ ಅನುದಾನಗಳ ಹಂಚಿಕೆ ಮತ್ತು ವಿತರಣೆ ಮಾಡುವ ಅಧಿಕಾರವನ್ನು ಒಳಗೊಂಡಂಥ ಅಧಿಕಾರಗಳನ್ನು ಹೊಂದಿರತಕ್ಕದು.

**6. ವಿಶ್ವವಿದ್ಯಾನಿಲಯವು ಎಲ್ಲ ವರ್ಗಗಳು, ಜಾತಿಗಳು ಮತ್ತು ಪಂಥಗಳಿಗೆ ಸೇರಿದವರಿಗೆ ಮುಕ್ತವಾಗಿರತಕ್ಕುದು :-**

1) ವಿಶ್ವವಿದ್ಯಾನಿಲಯವು ಲಿಂಗಭೇದವಿಲ್ಲದೆ ಮತ್ತು ಯಾವುದೇ ಜನಾಂಗ, ಪಂಥ, ಜಾತಿ ಅಥವಾ ವರ್ಗದ ಎಲ್ಲ ವ್ಯಕ್ತಿಗಳಿಗೂ ಮುಕ್ತವಾಗಿರತಕ್ಕುದು ಮತ್ತು ವಿಶ್ವವಿದ್ಯಾನಿಲಯದ ಉಪಾಧ್ಯಾಯನಾಗಿ ನೇಮಿತನಾಗಲು ಅಥವಾ ಅದರಲ್ಲಿನ ಇತರ ಯಾವುದೇ ಹುದ್ದೆಯನ್ನು ಧಾರಣ ಮಾಡಲು ಅಥವಾ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಯಾಗಿ ಅವನು ಪ್ರವೇಶ ಪಡೆಯಲು ಅಥವಾ ಅಲ್ಲಿ ಪದವೀಧರನಾಗಲು ಅಥವಾ ಅದರ ಯಾವುದೇ ವಿಶೇಷಾಧಿಕಾರವನ್ನು ಅನುಭವಿಸಲು ಅಥವಾ ಚಲಾಯಿಸಲು ಅವನನ್ನು ಹಕ್ಕುಳ್ಳವನನ್ನಾಗಿಸಲು ಯಾವುದಾವರೂ ರೀತಿಯ ಧಾರ್ಮಿಕ ನಂಬಿಕೆ ಅಥವಾ ವೃತ್ತಿಯ ಬಗ್ಗೆ ಯಾವುದೇ ಪರೀಕ್ಷೆಗೆ ಯಾವೊಬ್ಬ ವ್ಯಕ್ತಿಯನ್ನು ಗುರಿಪಡಿಸುವುದು ಅಥವಾ ಅದನ್ನು ವಿಧಿಸುವುದು ವಿಶ್ವವಿದ್ಯಾನಿಲಯಕ್ಕೆ ಕಾನೂನು ಸಮ್ಮತವಾಗಿರತಕ್ಕುದಲ್ಲ.

2) (1)ನೇ ಉಪ ಪ್ರಕರಣದಲ್ಲಿರುವುದಾವುದೂ, ಮಹಿಳೆಯರು ಅಥವಾ ಸಮಾಜದ ದುರ್ಬಲ ವರ್ಗಗಳಿಗೆ ಸೇರಿದ ವ್ಯಕ್ತಿಗಳು, ವಿಶೇಷವಾಗಿ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳಿಗೆ ಸೇರಿದವರನ್ನು ನೇಮಕ ಮಾಡಲು ಅಥವಾ ಅವರಿಗೆ ಪ್ರವೇಶ ನೀಡಲು ವಿಶ್ವವಿದ್ಯಾನಿಲಯವು ಯಾವುದೇ ವಿಶೇಷ ಉಪಬಂಧ ಕಲ್ಪಿಸುವುದನ್ನು ಪ್ರತಿಬಂಧಿಸುವುದೆಂದು ಭಾವಿಸತಕ್ಕುದಲ್ಲ.

# ಅಧ್ಯಾಯ - III

## ವಿಶ್ವವಿದ್ಯಾನಿಲಯದ ಅಧಿಕಾರಿಗಳು

**7.** **ವಿಶ್ವವಿದ್ಯಾನಿಲಯದ ಅಧಿಕಾರಿಗಳು :-** ಈ ಮುಂದಿರುವವರು ವಿಶ್ವವಿದ್ಯಾನಿಲಯದ ಅಧಿಕಾರಿಗಳಾಗಿರತಕ್ಕುದು :-

1) ಕುಲಪತಿ
2) ಪ್ರೊ. ಚಾನ್ಸಲರ್
3) ಉಪ ಕುಲಪತಿ
4) ಕುಲಸಚಿವ
5) ಡೀನರು (ವಿದ್ಯಾ ವಿಷಯಕ)
6) ಕುಲಸಚಿವ (ಮೌಲ್ಯ ಮಾಪನ)
7) ಹಣಕಾಸು ಅಧಿಕಾರಿ
8) ನಿರ್ದೇಶಕರು, ಬಹು ಮಾಧ್ಯಮ ವ್ಯಾಸಂಗ ಕ್ರಮ ಸಾಮಗ್ರಿ ಕೇಂದ್ರ
9) ನಿರ್ದೇಶಕರು (ಕಂಪ್ಯೂಟರ್)
10) ಪರಿನಿಯಮಗಳ ಮೂಲಕ ವಿಶ್ವವಿದ್ಯಾನಿಲಯದ ಅಧಿಕಾರಿಗಳೆಂದು ಘೋಷಿಸಬಹುದಾದಂಥ ಇತರ ಅಧಿಕಾರಿಗಳು.

**8.** **ಕುಲಪತಿ :-**

(1) ಕರ್ನಾಟಕ ರಾಜ್ಯದ ರಾಜ್ಯಪಾಲರು ವಿಶ್ವವಿದ್ಯಾನಿಲಯದ ಕುಲಪತಿಯಾಗಿರತಕ್ಕುದು.

(2) (3) ಮತ್ತು (4)ನೇ ಉಪಪ್ರಕರಣಗಳ ಉಪಬಂಧಗಳಿಗೊಳಪಟ್ಟು, ಕುಲಪತಿಯವರು ತಾವು ನಿರ್ದೇಶಿಸಬಹುದಾದಂಥ ವ್ಯಕ್ತಿ ಅಥವಾ ವ್ಯಕ್ತಿಗಳಿಂದ ವಿಶ್ವವಿದ್ಯಾನಿಲಯ, ಅದರ ಕಟ್ಟಡಗಳು, ಪ್ರಯೋಗ ಶಾಲೆಗಳು ಮತ್ತು ಉಪಕರಣಗಳು ಮತ್ತು ಯಾವುವೇ ಕಾಲೇಜುಗಳು, ಪ್ರಾದೇಶಿಕ ಕೇಂದ್ರ, ಅಧ್ಯಯನ ಕೇಂದ್ರವನ್ನು ಮತ್ತು ವಿಶ್ವವಿದ್ಯಾನಿಲಯದಿಂದ ನಡೆಸಲಾದ ಅಥವಾ ಮಾಡಲಾದ ಪರೀಕ್ಷೆಗಳು, ಶಿಕ್ಷಣ ಮತ್ತು ಇತರ ಕೆಲಸಗಳನ್ನು ತನಿಖೆ ನಡೆಸುವಂತೆ ಮಾಡಲು ಮತ್ತು ವಿಶ್ವವಿದ್ಯಾನಿಲಯದ ಆಡಳಿತ ಮತ್ತು ಹಣಕಾಸಿಗೆ ಸಂಬಂಧಪಟ್ಟ ಯಾವುದೇ ವಿಷಯದ ಸಂಬಂಧದಲ್ಲಿ ಅದೇ ರೀತಿಯಲ್ಲಿ ವಿಚಾರಣೆ ನಡೆಸುವಂತೆ ಮಾಡಲು ಹಕ್ಕುಳ್ಳವರಾಗಿರತಕ್ಕುದು.



(3) ಕುಲಪತಿಯವರು ಪ್ರತಿಯೊಂದು ಸಂದರ್ಭದಲ್ಲೂ ಮಾಡಬೇಕಾದ ತನಿಖೆ ಅಥವಾ ವಿಚಾರಣೆಯ ತನ್ನ ಉದ್ದೇಶದ ಬಗ್ಗೆ ವಿಶ್ವವಿದ್ಯಾನಿಲಯಕ್ಕೆ ನೋಟೀಸು ನೀಡತಕ್ಕುದು. ವಿಶ್ವವಿದ್ಯಾನಿಲಯವು, ಅಂಥ ನೋಟೀಸನ್ನು ಸ್ವೀಕರಿಸಿದ ಮೇಲೆ, ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಅಥವಾ ಕುಲಪತಿಯವರು ನಿರ್ಧರಿಸಬಹುದಾದಂಥ ಇತರ ಅವಧಿಯೊಳಗಾಗಿ ತಾನು ಅವಶ್ಯಕವೆಂದು ಪರಿಗಣಿಸಬಹುದಾದಂಥ ಮನವಿಗಳನ್ನು ಕುಲಪತಿಯವರಿಗೆ ಮಾಡಿಕೊಳ್ಳತಕ್ಕುದು.

(4) ವಿಶ್ವವಿದ್ಯಾನಿಲಯವು ಮಾಡಿಕೊಂಡ ಮನವಿಗಳು, ಯಾವುದಾದರೂ ಇದ್ದರೆ ಅವುಗಳನ್ನು ಪರಿಗಣಿಸಿದ ತರುವಾಯ, ಕುಲಪತಿಯವರು (2)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದಂಥ ತನಿಖೆ ಅಥವಾ ವಿಚಾರಣೆಯನ್ನು ಮಾಡಿಸತಕ್ಕುದು.

(5) ಕುಲಪತಿಯವರು, ತನಿಖೆ ಅಥವಾ ವಿಚಾರಣೆಯನ್ನು ಮಾಡಿಸಿದಲ್ಲಿ, ವಿಶ್ವವಿದ್ಯಾನಿಲಯವು, ಅಂಥ ತನಿಖೆ ಅಥವಾ ವಿಚಾರಣೆಯಲ್ಲಿ ಅಹವಾಲು ಹೇಳಿಕೊಳ್ಳಲು ಖುದ್ದಾಗಿ ಹಾಜರಾಗಲು ಹಕ್ಕನ್ನು ಹೊಂದಿರುವ ಒಬ್ಬ ಪ್ರತಿನಿಧಿಯನ್ನು ನೇಮಿಸಲು ಹಕ್ಕುಳ್ಳದ್ದಾಗಿರತಕ್ಕುದು.

(6) ಕುಲಪತಿಯವರು ಅಂಥ ತನಿಖೆ ಅಥವಾ ವಿಚಾರಣೆಯ ಫಲಿತಾಂಶಗಳ ಸಂಬಂಧದಲ್ಲಿ ಅವರ ಮೇಲೆ ಕೈಗೊಳ್ಳಬೇಕಾದ ಕ್ರಮಕ್ಕೆ ಸಂಬಂಧಪಟ್ಟಂತೆ ನೀಡಬೇಕೆನಿಸುವ ಅಂಥ ಅಭಿಪ್ರಾಯ ಮತ್ತು ಸಲಹೆಗಳೊಂದಿಗೆ ಉಪ ಕುಲಪತಿಯವರಿಗೆ ಬರೆಯಬಹುದು ಮತ್ತು ಉಪ ಕುಲಪತಿಯವರು ಹಾಗೆ ಬರೆಯಲಾದುದನ್ನು ಸ್ವೀಕರಿಸಿದ ಮೇಲೆ, ಉಪ ಕುಲಪತಿಯವರು, ತನಿಖೆ ಅಥವಾ ವಿಚಾರಣೆ ಫಲಿತಾಂಶಗಳನ್ನು ಮತ್ತು ಆ ಬಗ್ಗೆ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಕುಲಪತಿಯವರಿಂದ ನೀಡಲಾದ ಅಭಿಪ್ರಾಯ ಮತ್ತು ಸಲಹೆಯನ್ನು ಕೂಡಲೇ ವ್ಯವಸ್ಥಾಪನಾ ಮಂಡಲಿಗೆ ತಿಳಿಸತಕ್ಕುದು.

(7) ವ್ಯವಸ್ಥಾಪನಾ ಮಂಡಲಿಯು, ಅಂಥ ತನಿಖೆ ಅಥವಾ ವಿಚಾರಣೆಯ ಫಲಿತಾಂಶಗಳ ಮೇಲೆ ತಾನು ಕೈಗೊಳ್ಳಲು ಉದ್ದೇಶಿಸಿರುವ ಅಥವಾ ಕೈಗೊಂಡಂಥ ಕ್ರಮ, ಯಾವುದಾದರೂ ಇದ್ದರೆ, ಅದನ್ನು ಉಪ-ಕುಲಪತಿಯವರ ಮುಖಾಂತರ ಕುಲಪತಿಯವರಿಗೆ ತಿಳಿಸತಕ್ಕದು.

(8) ವ್ಯವಸ್ಥಾಪನಾ ಮಂಡಲಿಯು, ಕುಲಪತಿಯವರಿಗೆ ಸಮಾಧಾನವಾಗುವ ಕ್ರಮವನ್ನು ಯುಕ್ತ ಕಾಲದೊಳಗೆ ಕೈಗೊಳ್ಳದಿದ್ದಲ್ಲಿ, ಕುಲಪತಿಯವರು ವ್ಯವಸ್ಥಾಪನಾ

ಮಂಡಲಿಯು ಸಲ್ಲಿಸಿದ ಯಾವುದೇ ವಿವರಣೆ ಅಥವಾ ಅದರಿಂದ ಮಾಡಿಕೊಳ್ಳಲಾದ ಮನವಿಯನ್ನು ಪರಿಗಣಿಸಿದ ತರುವಾಯ, ತಾವು ಉಚಿತವೆಂದು ಭಾವಿಸಬಹುದಾದಂಥ ನಿರ್ದೇಶನಗಳನ್ನು ಹೊರಡಿಸತಕ್ಕುದು ಮತ್ತು ವ್ಯವಸ್ಥಾಪನಾ ಮಂಡಲಿಯು ಅಂಥ ನಿರ್ದೇಶನಗಳನ್ನು ಪಾಲಿಸಲು ಬದ್ಧವಾಗಿರತಕ್ಕುದು.

(9) ಹಿಂದೆ ಹೇಳಲಾದ ಈ ಪ್ರಕರಣದ ಉಪಬಂಧಗಳಿಗೆ ಪ್ರತಿಕೂಲವಾಗದಂತೆ, ಕುಲಪತಿಯವರು, ಈ ಅಧಿನಿಯಮ, ಪರಿನಿಯಮಗಳು ಅಥವಾ ಅಧ್ಯಾದೇಶಗಳಿಗೆ ಅನುಗುಣವಾಗಿಲ್ಲದ ವಿಶ್ವವಿದ್ಯಾನಿಲಯದ ಯಾವುದೇ ಕಾನೂನು ವ್ಯವಹರಣೆಗಳನ್ನು ಲಿಖಿತ ಆದೇಶದ ಮೂಲಕ ರದ್ದುಗೊಳಿಸಬಹುದು.

ಪರಂತು, ಅಂಥ ಯಾವುದೇ ಆದೇಶವನ್ನು ಹೊರಡಿಸುವ ಮೊದಲು, ಅವರು ಅಂಥ ಆದೇಶವನ್ನು ಏಕೆ ಹೊರಡಿಸಬಾರದೆಂಬುದಕ್ಕೆ ಕಾರಣ ತೋರಿಸಲು ವಿಶ್ವವಿದ್ಯಾನಿಲಯವನ್ನು ಕೋರಬಹುದು ಮತ್ತು ಯುಕ್ತ ಕಾಲದೊಳಗೆ ಯಾವುದೇ ಕಾರಣವನ್ನು ತೋರಿಸಿದರೆ ಅವರು ಅದನ್ನು ಪರಿಗಣಿಸತಕ್ಕುದು.

(10) ಕುಲಪತಿಯವರು ಪರಿನಿಯಮಗಳಿಂದ ನಿರ್ದಿಷ್ಟಪಡಿಸಬಹುದಾದಂಥ ಇತರ ಅಧಿಕಾರಗಳನ್ನು ಹೊಂದಿರತಕ್ಕುದು.

**9. ಪ್ರೊ. ಚಾನ್ಸಲರು :-**

(1) ಕರ್ನಾಟಕದಲ್ಲಿನ ಪ್ರೌಢ ಶಿಕ್ಷಣ ಖಾತೆಯ ಪ್ರಭಾರ ಹೊಂದಿರುವ ಸಚಿವರು, ತಮ್ಮ ಹುದ್ದೆಯ ಕಾರಣದಿಂದಾಗಿ ವಿಶ್ವವಿದ್ಯಾನಿಲಯದ ಪ್ರೊ. ಚಾನ್ಸಲರಾಗಿರತಕ್ಕುದು.

(2) ಅವರು, ಪರಿನಿಯಮಗಳಿಂದ ನಿಯಮಿಸಬಹುದಾದಂಥ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಹೊಂದಿರತಕ್ಕುದು.

**10. ಉಪ ಕುಲಪತಿ :-**

(1) ಉಪ ಕುಲಪತಿಯವರು, ಪರಿನಿಯಮಗಳಿಂದ ನಿಯಮಿಸಬಹುದಾದಂಥ ರೀತಿಯಲ್ಲಿ, ಅಂಥ ಅವಧಿಗೆ ಮತ್ತು ಅಂಥ ಉಪಲಬ್ಧಿಗಳು ಮತ್ತು ಇತರ ಸೇವಾ ಷರತ್ತುಗಳ ಮೇಲೆ ಕುಲಪತಿಯವರಿಂದ ನೇಮಿತರಾಗತಕ್ಕುದು.

(2) ಉಪ ಕುಲಪತಿಯವರು ವಿಶ್ವವಿದ್ಯಾನಿಲಯದ ಪ್ರಧಾನ ವಿದ್ಯಾವಿಷಯಕ ಹಾಗೂ ಕಾರ್ಯಕಾರಿ ಅಧಿಕಾರಿಯಾಗಿರತಕ್ಕುದು ಮತ್ತು ವಿಶ್ವವಿದ್ಯಾನಿಲಯದ ವ್ಯವಹಾರಗಳ ಮೇಲ್ವಿಚಾರಣೆ ನಡೆಸತಕ್ಕುದು ಮತ್ತು ಅವುಗಳ ಮೇಲೆ ನಿಯಂತ್ರಣ



ಹೊಂದಿರತಕ್ಕುದು ಮತ್ತು ವಿಶ್ವವಿದ್ಯಾನಿಲಯದ ಎಲ್ಲ ಪ್ರಾಧಿಕಾರಗಳ ತೀರ್ಮಾನಗಳನ್ನು ಜಾರಿಗೊಳಿಸತಕ್ಕುದು.

(3) ಉಪ ಕುಲಪತಿಯವರು, ಯಾವುದೇ ವಿಷಯದ ಮೇಲೆ ತಕ್ಷಣದ ಕ್ರಮವು ಅವಶ್ಯಕವೆಂದು ತಾವು ಅಭಿಪ್ರಾಯಪಟ್ಟರೆ, ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರಕ್ಕೆ ಪ್ರದತ್ತವಾದ ಯಾವುದೇ ಅಧಿಕಾರವನ್ನು ಚಲಾಯಿಸಬಹುದು ಮತ್ತು ಅಂಥ ಪ್ರಾಧಿಕಾರಕ್ಕೆ ಅಂಥ ವಿಷಯದ ಮೇಲೆ ತಾವು ಕೈಗೊಂಡ ಕ್ರಮದ ಬಗ್ಗೆ ವರದಿ ಸಲ್ಲಿಸತಕ್ಕುದು.

ಪರಂತು, ಸಂಬಂಧಪಟ್ಟ ಪ್ರಾಧಿಕಾರವು, ಅಂಥ ಕ್ರಮವನ್ನು ಕೈಗೊಳ್ಳಬಾರದಿತ್ತೆಂದು ಅಭಿಪ್ರಾಯಪಟ್ಟರೆ, ಆ ವಿಷಯವನ್ನು ಕುಲಪತಿಯವರಿಗೆ ಕಳುಹಿಸತಕ್ಕುದು ಮತ್ತು ಅದರ ಮೇಲಣ ಅವರ ತೀರ್ಮಾನವು ಅಂತಿಮಾವಾಗಿರತಕ್ಕುದು.

ಮತ್ತು ಪರಂತು, ಈ ಉಪ-ಪ್ರಕರಣದ ಅಡಿಯಲ್ಲಿ ಉಪ ಕುಲಪತಿಯವರು ಕೈಗೊಂಡ ಕ್ರಮದಿಂದ ಬಾಧಿತನಾದ, ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವ, ಯಾವೊಬ್ಬ ವ್ಯಕ್ತಿಯು ಅಂಥ ಕ್ರಮದ ಬಗ್ಗೆ ತನಗೆ ತಿಳಿಸಿದ ದಿನಾಂಕದಿಂದ ತೊಂಬತ್ತು ದಿನಗಳೊಳಗಾಗಿ ಅಂಥ ಕ್ರಮದ ವಿರುದ್ಧ ವ್ಯವಸ್ಥಾಪನಾ ಮಂಡಳಿಗೆ ಅಪೀಲು ಹೂಡಲು ಹಕ್ಕುಳ್ಳವನಾಗಿರತಕ್ಕುದು ಮತ್ತು ತದನಂತರ, ವ್ಯವಸ್ಥಾಪನಾ ಮಂಡಳಿಯು, ಉಪ ಕುಲಪತಿಯವರು ಕೈಗೊಂಡ ಕ್ರಮವನ್ನು, ದೃಢೀಕರಿಸಬಹುದು, ಮಾರ್ಪಾಟು ಮಾಡಬಹುದು ಅಥವಾ ವಿಪರ್ಯಾಯಗೊಳಿಸಬಹುದು.

(4) ಉಪ ಕುಲಪತಿಯವರು, ಯಾವುದೇ ಪ್ರಾಧಿಕಾರದ ಯಾವುದೇ ತೀರ್ಮಾನವು ಈ ಅಧಿನಿಯಮದ ಉಪಬಂಧಗಳು, ಪರಿನಿಯಮಗಳು ಅಥವಾ ಅಧ್ಯಾದೇಶಗಳ ಮೂಲಕ ಅದಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಮೀರಿ ಆಗಿದೆಯೆಂದು ಅಥವಾ ಕೈಗೊಳ್ಳಲಾದ ತೀರ್ಮಾನವು ವಿಶ್ವವಿದ್ಯಾನಿಲಯದ ಹಿತಾಸಕ್ತಿಯಲ್ಲಿ ಆಗಿಲ್ಲವೆಂದು ಅಭಿಪ್ರಾಯಪಟ್ಟರೆ, ಸಂಬಂಧಪಟ್ಟ ಪ್ರಾಧಿಕಾರವನ್ನು ಅಂಥ ತೀರ್ಮಾನವನ್ನು ಕೈಗೊಂಡ ಅರವತ್ತು ದಿನಗಳೊಳಗೆ ತೀರ್ಮಾನವನ್ನು ಪುನರವಲೋಕನ ಮಾಡಬೇಕೆಂದು ಕೇಳಿಕೊಳ್ಳಬಹುದು ಮತ್ತು ಪ್ರಾಧಿಕಾರವು ತನ್ನ ತೀರ್ಮಾನವನ್ನು ಪೂರ್ತಿಯಾಗಿಯಾಗಲಿ ಅಥವಾ ಭಾಗಶಃ ಆಗಲಿ ಪುನರವಲೋಕನ ಮಾಡಲು ತಿರಸ್ಕರಿಸಿದರೆ ಅಥವಾ ಅದು ಅರವತ್ತು ದಿನಗಳ ಸದರಿ ಅವಧಿಯೊಳಗೆ ಯಾವುದೇ

ತೀರ್ಮಾನವನ್ನು ಕೈಗೊಳ್ಳದಿದ್ದರೆ ವಿಷಯವನ್ನು ಕುಲಪತಿಯವರಿಗೆ ಕಳುಹಿಸತಕ್ಕುದು ಮತ್ತು ಅವರ ತೀರ್ಮಾನವು ಅಂತಿಮವಾಗಿರತಕ್ಕುದು.

ಪರಂತು, ಸಂಬಂಧಪಟ್ಟ ಪ್ರಾಧಿಕಾರಿಯ ತೀರ್ಮಾನವು, ಈ ಪ್ರಕರಣದ ಅಡಿಯಲ್ಲಿ ಸಂದರ್ಭಾನುಸಾರ, ಪ್ರಾಧಿಕಾರ ಅಥವಾ ಕುಲಪತಿಯವರ ಅಂಥ ತೀರ್ಮಾನದ ಪುನರವಲೋಕನದ ಅವಧಿಯಲ್ಲಿ ನಿಲಂಬನಗೊಂಡಿರತಕ್ಕುದು.

(5) ಉಪ - ಕುಲಪತಿಯವರು, ಪರಿನಿಯಮಗಳು ಮತ್ತು ಅಧ್ಯಾದೇಶಗಳಿಂದ ನಿಯಮಿಸಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕುದು ಮತ್ತು ಅಂಥ ಇತರ ಪ್ರಕಾರ್ಯಗಳನ್ನು ನೆರವೇರಿಸತಕ್ಕುದು.

**11. ಕುಲಸಚಿವರು :-**

ಕುಲಸಚಿವರನ್ನು, ಪರಿನಿಯಮಗಳಿಂದ ನಿಯಮಿಸಬಹುದಾದ ಅಂಥ ರೀತಿಯಲ್ಲಿ, ಅಂಥ ಉಪಲಬ್ದಿಗಳು ಮತ್ತು ಇತರೆ ಸೇವಾ ಷರತ್ತುಗಳ ಮೇಲೆ ನೇಮಿಸತಕ್ಕುದು ಮತ್ತು ಅವರು ಪರಿನಿಯಮಗಳಿಂದ ನಿಯಮಿಸಬಹುದಾದ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕುದು ಮತ್ತು ಅಂಥ ಕಾರ್ಯಗಳನ್ನು ನೆರವೇರಿಸತಕ್ಕುದು.

**12. ಡೀನರು :-**

ಪ್ರತಿಯೊಬ್ಬ ಡೀನರನ್ನು, ಪರಿನಿಯಮಗಳಿಂದ ನಿಯಮಿಸಬಹುದಾದ ಅಂಥ ರೀತಿಯಲ್ಲಿ ಅಂಥ ಉಪಲಬ್ದಿಗಳು ಮತ್ತು ಇತರ ಸೇವಾ ಷರತ್ತುಗಳ ಮೇಲೆ ನೇಮಿಸತಕ್ಕುದು ಮತ್ತು ಅವರು ಪರಿನಿಯಮಗಳಿಂದ ನಿಯಮಿಸಬಹುದಾದ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕುದು ಮತ್ತು ಅಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕುದು.

**13. ಪರೀಕ್ಷಾ ಕುಲಸಚಿವರು :-**

(1) ಪರೀಕ್ಷಾ ಕುಲಸಚಿವರನ್ನು, ಪರಿನಿಯಮಗಳಿಂದ ನಿಯಮಿಸಬಹುದಾದಂಥ ರೀತಿಯಲ್ಲಿ, ಅಂಥ ಉಪಲಬ್ದಿಗಳು ಮತ್ತು ಇತರ ಸೇವಾ ಷರತ್ತುಗಳ ಮೇಲೆ ನೇಮಿಸತಕ್ಕುದು.

(2) ಪರೀಕ್ಷಾ ಕುಲಸಚಿವರು ಪರಿನಿಯಮಗಳಿಂದ ನಿಯಮಿಸಬಹುದಾದ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕುದು ಮತ್ತು ಅಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕುದು.



**14. ಹಣಕಾಸು ಅಧಿಕಾರಿ :-** ಹಣಕಾಸು ಅಧಿಕಾರಿಯನ್ನು, ಪರಿನಿಯಮಗಳಿಂದ ನಿಯಮಿಸಬಹುದಾದ ಅಂಥ ವಿಧಾನದಲ್ಲಿ, ಅಂಥ ಉಪಲಬ್ದಿಗಳ ಮೇಲೆ ಮತ್ತು ಇತರ ಸೇವಾ ಷರತ್ತುಗಳ ಮೇಲೆ ನೇಮಿಸತಕ್ಕದು ಮತ್ತು ಅವರು ಪರಿನಿಯಮಗಳಿಂದ ನಿಯಮಿಸಬಹುದಾದ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದು, ಮತ್ತು ಅಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕುದು.

**15. ನಿರ್ದೇಶಕರು :-** ಪ್ರತಿಯೊಬ್ಬ ನಿರ್ದೇಶಕರನ್ನು, ಪರಿನಿಯಮಗಳಿಂದ ನಿರ್ದೇಶಿಸಬಹುದಾದ ಅಂಥ ವಿಧಾನದಲ್ಲಿ, ಅಂಥ ಉಪಲಬ್ದಿಗಳು ಮತ್ತು ಇತರ ಸೇವಾ ಷರತ್ತುಗಳ ಮೇಲೆ ನೇಮಿಸತಕ್ಕುದು ಮತ್ತು ಅವರು ಪರಿನಿಯಮಗಳಿಂದ ನಿಯಮಿಸಬಹುದಾದ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕುದು ಮತ್ತು ಅಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕುದು.

**16. ಇತರ ಅಧಿಕಾರಿಗಳು :-** ವಿಶ್ವವಿದ್ಯಾನಿಲಯದ ಇತರ ಅಧಿಕಾರಿಗಳ ನೇಮಕಾತಿಯ ರೀತಿ, ಉಪಲಬ್ದಿಗಳು, ಇತರ ಸೇವಾ ಷರತ್ತುಗಳು ಮತ್ತು ಅವರ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ಪರಿನಿಯಮಗಳಿಂದ ನಿಯಮಿಸತಕ್ಕುದು.

## ಅಧ್ಯಾಯ - IV

## ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳು

**17. ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳು :-** ಈ ಮುಂದಿನವು ವಿಶ್ವ ವಿದ್ಯಾನಿಲಯದ ಪ್ರಾಧಿಕಾರಗಳಾಗಿರತಕ್ಕುದು :-

1) ವ್ಯವಸ್ಥಾಪನಾ ಮಂಡಲಿ ;

2) ವಿದ್ಯಾವಿಷಯಕ ಪರಿಷತ್ತು ;

3) ಹಣಕಾಸು ಸಮಿತಿ ಮತ್ತು

4) ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳಾಗಿರಬೇಕೆಂದು ಪರಿನಿಯಮಗಳಿಂದ ಘೋಷಿಸಬಹುದಾದ ಅಂಥ ಇತರ ಪ್ರಾಧಿಕಾರಗಳು.

**18. ವ್ಯವಸ್ಥಾಪನಾ ಮಂಡಲಿ :-**

(1) ವ್ಯವಸ್ಥಾಪನಾ ಮಂಡಲಿಯು ವಿಶ್ವವಿದ್ಯಾನಿಲಯದ ಪ್ರಧಾನ ಕಾರ್ಯಕಾರಿ

ನಿಕಾಯವಾಗಿರತಕ್ಕುದು ಅದು ಈ ಮುಂದಿನ ಸದಸ್ಯರುಗಳನ್ನು ಒಳಗೊಂಡಿರತಕ್ಕುದು ಎಂದರೆ

1) ಉಪ ಕುಲಪತಿ ;

2) ಕುಲಸಚಿವ ;

3) ಕಾರ್ಯದರ್ಶಿ, ಉನ್ನತ ಶಿಕ್ಷಣ ಕರ್ನಾಟಕ ಸರ್ಕಾರ ;

4) ಕಾರ್ಯದರ್ಶಿ, ಹಣಕಾಸು ಇಲಾಖೆ ;

5) ಪ್ರೊ. ಚಾನ್ಸಲರು ನಿರ್ದಿಷ್ಟಪಡಿಸಬಹುದಾದಂಥ ಅವಧಿಗೆ ಸರದಿಯ ಮೂಲಕ ನಾಮ ನಿರ್ದೇಶಿತರಾದ ಕರ್ನಾಟಕ ರಾಜ್ಯದಲ್ಲಿನ ವಿಶ್ವವಿದ್ಯಾನಿಲಯಗಳ ಒಬ್ಬ ಉಪ ಕುಲಪತಿ ;

6) ಡೀನರು (ವಿದ್ಯಾವಿಷಯಕ) ;

7) ಪ್ರೊ. ಚಾನ್ಸಲರಿಂದ ನಾಮ ನಿರ್ದೇಶಿತರಾಗುವ ಶೈಕ್ಷಣಿಕ, ವೈಜ್ಞಾನಿಕ ಮತ್ತು ಆಡಳಿತ ಕ್ಷೇತ್ರಗಳಲ್ಲಿನ ಐವರು ಗಣ್ಯ ವ್ಯಕ್ತಿಗಳು ;

ಪರಂತು, ಈ ಖಂಡದ ಅಡಿಯಲ್ಲಿ ನಾಮ ನಿರ್ದೇಶಿತರಾದ ವ್ಯಕ್ತಿಗಳ ಪೈಕಿ ಒಬ್ಬರು ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದವರಾಗಿರತಕ್ಕದ್ದು ಮತ್ತು ಇಬ್ಬರು ಮಹಿಳೆಯರಿರತಕ್ಕುದು.

8) ಕರ್ನಾಟಕ ವಿಧಾನಸಭಾ ಸದಸ್ಯರ ಪೈಕಿ ಚುನಾಯಿಸಲಾದ ಇಬ್ಬರು ಸದಸ್ಯರು ;

9) ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರ ಪೈಕಿ ಚುನಾಯಿಸಲಾದ ಇಬ್ಬರು ಸದಸ್ಯರು.

**(2) ವ್ಯವಸ್ಥಾಪನಾ ಮಂಡಲಿಯು**

(I) ವಿಶ್ವವಿದ್ಯಾನಿಲಯದ ಸ್ವತ್ತುಗಳು ಮತ್ತು ಆದಾಯಗಳನ್ನು ನಿರ್ವಹಿಸುವ ಮತ್ತು ಅವುಗಳ ವಹಿವಾಟು ನಡೆಸುವ ;

(II) ಎಲ್ಲ ಆಡಳಿತ ವ್ಯವಹಾರಗಳನ್ನು ನಡೆಸುವ, ಅಧಿಕಾರಗಳನ್ನು ಹೊಂದಿರತಕ್ಕುದು, ಮತ್ತು

ಎ) ವಿಶ್ವವಿದ್ಯಾನಿಲಯದ ಉದ್ದೇಶಗಳ ಪೂರೈಕೆಗಾಗಿ ಅವಶ್ಯಕವಾಗಬಹುದಾದ, ಪ್ರಾಸಂಗಿಕವಾಗಬಹುದಾದ ಅಥವಾ ಸಹಾಯಕವಾಗಬಹುದಾದ ವಿಶ್ವವಿದ್ಯಾನಿಲಯದ ಅಂಥ ಇತರ ಅಧಿಕಾರಗಳನ್ನು ; ಮತ್ತು

ಬಿ) ಪರಿನಿಯಮಗಳಿಂದ ನಿಯಮಿಸಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕುದು.



**19. ವಿದ್ಯಾವಿಷಯಕ ಪರಿಷತ್ತು :-** (1) ವಿದ್ಯಾವಿಷಯಕ ಪರಿಷತ್ತು ಈ ಮುಂದಿನ ಸದಸ್ಯರನ್ನೊಳಗೊಂಡಿರತಕ್ಕುದು, ಎಂದರೆ

i) ಕುಲಪತಿ ;

ii) ಕುಲಸಚಿವ ;

iii) ಡೀನರು (ವಿದ್ಯಾವಿಷಯಕ) ;

iv) ಡೀನರು (ಆಡಳಿತ)

v) ಡೀನರು (ಅಧ್ಯಯನ ಕೇಂದ್ರಗಳು)

vi) ಇತರ ಡೀನರು (ಯಾರಾದರೂ ಇದ್ದರೆ) ; ಮತ್ತು

vii) ಸದಸ್ಯರೆಂದು ಸಹ ಆಯ್ಕೆಯಾಗಲು ವಿದ್ಯಾವಿಷಯಕ ಪರಿಷತ್ತು ಪರಿಗಣಿಸಬಹುದಾದ ವಿಶ್ವವಿದ್ಯಾನಿಲಯದ ಅಂಥ ಇತರ ಅಧಿಕಾರಿಗಳು.

(2) ವಿದ್ಯಾವಿಷಯಕ ಪರಿಷತ್ತು ವಿಶ್ವವಿದ್ಯಾನಿಲಯದ ಪ್ರಧಾನ ವಿದ್ಯಾವಿಷಯಕ ನಿಕಾಯವಾಗಿರತಕ್ಕುದು ಮತ್ತು ಈ ಅಧಿನಿಯಮದ ಉಪಬಂಧಗಳು, ಪರಿನಿಯಮಗಳು ಮತ್ತು ಅಧ್ಯಾದೇಶಗಳಿಗೊಳಪಟ್ಟು, ವಿಶ್ವವಿದ್ಯಾನಿಲಯದೊಳಗೆ ಕಲಿಕೆ, ಶಿಕ್ಷಣ, ಮೌಲ್ಯ ನಿರ್ಧಾರಣೆ ಮತ್ತು ಪರೀಕ್ಷೆಯ ಗುಣಮಟ್ಟಗಳ ನಿಯಂತ್ರಣ ಮತ್ತು ಸಾಮಾನ್ಯ ನಿಯಂತ್ರಣ ಹೊಂದಿರ ತಕ್ಕುದು ಮತ್ತು ಅವುಗಳಿಗೆ ಜವಾಬ್ದಾರಿಯಾಗಿರತಕ್ಕುದು ಮತ್ತು ಪರಿನಿಯಮಗಳಿಂದ ತನ್ನ ಮೇಲೆ ಪ್ರದತ್ತಗೊಳಿಸಬಹುದಾದ ಅಥವಾ ವಿಧಿಸಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕುದು ಮತ್ತು ಅಂಥ ಇತರ ಪ್ರಕಾರ್ಯಗಳನ್ನು ನೆರವೇರಿಸತಕ್ಕುದು.

**20. ಹಣಕಾಸು ಸಮಿತಿ :-** (1) ಆಡಳಿತ ಮಂಡಳಿಯು ಐದಕ್ಕಿಂತ ಹೆಚ್ಚಿನ ಸದಸ್ಯರನ್ನು ಒಳಗೊಳ್ಳದಂತೆ ಒಂದು ಹಣಕಾಸು ಸಮಿತಿಯನ್ನು ರಚಿಸತಕ್ಕದು,

1. ಉಪ ಕುಲಪತಿ, ಪದನಿಮಿತ್ತ ಅಧ್ಯಕ್ಷರು ;
2. ಕಾರ್ಯದರ್ಶಿ, ಹಣಕಾಸು ಇಲಾಖೆ ಅಥವಾ ಅವರ ನಾಮನಿರ್ದೇಶಿತರು ;
3. ಕಾರ್ಯದರ್ಶಿ, ಶಿಕ್ಷಣ ಇಲಾಖೆ ಅಥವಾ ಅವರ ನಾಮನಿರ್ದೇಶಿತರು ;
4. ಆಡಳಿತ ಮಂಡಳಿಯ ಮೂಲಕ ಮತ್ತು ಆಡಳಿತ ಮಂಡಳಿಯ ಸದಸ್ಯರ ಪೈಕಿ ನಾಮನಿರ್ದೇಶಿತರಾದ ಇಬ್ಬರು ಸದಸ್ಯರು ;
5. ಹಣಕಾಸು ಅಧಿಕಾರಿ, ಪದನಿಮಿತ್ತ ಸದಸ್ಯ ಕಾರ್ಯದರ್ಶಿ.

(2) ಕುಲಸಚಿವರು ಹಣಕಾಸು ಸಮಿತಿಗೆ ಖಾಯಂ ಆಹ್ವಾನಿತರಾಗಿತಕ್ಕುದು.

(3) ಹಣಕಾಸು ಸಮಿತಿಯ ಅಧಿಕಾರಗಳು ಮತ್ತು ಕರ್ತವ್ಯಗಳು ಈ ಮುಂದಿನಂತಿರತಕ್ಕುದು, ಎಂದರೆ

i) ವಾರ್ಷಿಕ ಬಜೆಟ್ ಅಂದಾಜನ್ನು ಪರಿಶೀಲಿಸುವುದು ಮತ್ತು ವ್ಯವಸ್ಥಾಪನಾ ಮಂಡಲಿಗೆ ತನ್ನ ಶಿಫಾರಸ್ಸುಗಳನ್ನು ಮಾಡುವುದು.

ii) ವಿಶ್ವವಿದ್ಯಾನಿಲಯದ ಲೆಕ್ಕ ಪತ್ರಗಳ ಸಾಮಾನ್ಯ ಪರೀಕ್ಷೆಗಳನ್ನು ನಡೆಸುವುದು ಮತ್ತು ಲೆಕ್ಕ ಪರಿಶೋಧನಾ ವರದಿಗಳನ್ನು ಪರಿಗಣಿಸುವುದು ಮತ್ತು ಅದರ ಮೇಲೆ ತನ್ನ ಶಿಫಾರಸ್ಸುಗಳನ್ನು ಮಾಡುವುದು.

iii) ಬಜೆಟ್‌ನಲ್ಲಿ ಯಾವುದೇ ಏರ್ಪಾಟು ಮಾಡಿರದ ವೆಚ್ಚವನ್ನು ಒಳಗೊಂಡಿರುವ ಅಥವಾ ಬಜೆಟ್‌ನಲ್ಲಿ ಏರ್ಪಾಟು ಮಾಡಿರುವ ಮೊಬಲಗಿಗಿಂತ ಅಧಿಕ ವೆಚ್ಚವನ್ನು ಒಳಗೊಂಡಿರುವ, ವಿಶ್ವವಿದ್ಯಾನಿಲಯದ ಎಲ್ಲ ಪ್ರಸ್ತಾವಗಳನ್ನು ಪರೀಕ್ಷಿಸುವುದು.

iv) ಪರಿನಿಯಮಗಳಿಂದ ನಿಯಮಿಸಬಹುದಾದ ಅಂಥ ಇತರ ಪ್ರಕಾರ್ಯಗಳು.

**21. ಇತರ ಪ್ರಾಧಿಕಾರಗಳು :-**

ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳಾಗಿರಬೇಕೆಂದು ಪರಿನಿಯಮಗಳಿಂದ ಘೋಷಿಸಬಹುದಾದ ಇತರ ಪ್ರಾಧಿಕಾರಗಳ ರಚನೆ, ಅಧಿಕಾರಗಳು ಮತ್ತು ಇತರ ಪ್ರಕಾರ್ಯಗಳನ್ನು ಪರಿನಿಯಮಗಳಿಂದ ನಿಯಮಿಸತಕ್ಕುದು.

## ಅಧ್ಯಾಯ - V

## ಪರಿನಿಯಮಗಳು, ಆಧ್ಯಾದೇಶಗಳು ಮತ್ತು ವಿನಿಯಮಗಳು

**22. ಪರಿನಿಯಮಗಳು :-**

ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಪರಿನಿಯಮಗಳು, ಈ ಮುಂದಿನ ಎಲ್ಲ ಅಥವಾ ಯಾವುದೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ

(ಎ) ಕುಲಪತಿಯವರ ನೇಮಕಾತಿಯ ವಿಧಾನ, ಅವರ ನೇಮಕಾತಿಯ ನಿಬಂಧನೆ, ಉಪಲಬ್ಧಿಗಳು ಮತ್ತು ಇತರ ಸೇವಾ ಷರತ್ತುಗಳು ಮತ್ತು ಅವರು ಚಲಾಯಿಸಬಹುದಾದ ಅಧಿಕಾರಗಳು ಮತ್ತು ನೆರವೇರಿಸಬಹುದಾದ ಪ್ರಕಾರ್ಯಗಳು ;



(ಬಿ) ಕುಲಸಚಿವರು, ಪರೀಕ್ಷಾ ಕುಲಸಚಿವರು, ಹಣಕಾಸು ಅಧಿಕಾರಿ ಮತ್ತು ಇತರ ಅಧಿಕಾರಿಗಳ ನೇಮಕಾತಿ ವಿಧಾನ, ಉಪಲಬ್ಧಿಗಳು ಮತ್ತು ಅವರ ಇತರ ಸೇವಾ ಷರತ್ತುಗಳು ಮತ್ತು ಪ್ರತಿಯೊಬ್ಬ ಅಧಿಕಾರಿಯು ಚಲಾಯಿಸಬಹುದಾದ ಅಧಿಕಾರಗಳು ಮತ್ತು ನೆರವೇರಿಸಬಹುದಾದ ಪ್ರಕಾರ್ಯಗಳು ;

(ಸಿ) ಪ್ರಾಧಿಕಾರಗಳ ಸದಸ್ಯರ ಪದಾವಧಿಗಳು, ಅವರ ದಿನಭತ್ಯೆ ಮತ್ತು ಪ್ರಯಾಣ ಭತ್ಯೆ ಮತ್ತು ಅಂಥ ಪ್ರಾಧಿಕಾರಿಗಳು ಚಲಾಯಿಸಬಹುದಾದ ಅಧಿಕಾರಗಳು ಮತ್ತು ನೆರವೇರಿಸಬಹುದಾದ ಪ್ರಕಾರ್ಯಗಳು ;

(ಡಿ) ವಿಶ್ವವಿದ್ಯಾನಿಲಯದ ಉಪಾಧ್ಯಾಯರು ಮತ್ತು ಇತರ ಉದ್ಯೋಗಿಗಳ ನೇಮಕಾತಿ, ಅವರ ಉಪಲಬ್ಧಿಗಳು ಮತ್ತು ಅವರ ಸೇವಾ ಷರತ್ತುಗಳು ;

(ಇ) ವಿಶ್ವವಿದ್ಯಾನಿಲಯದ ಉದ್ಯೋಗಿಗಳ ಪ್ರಯೋಜನಕ್ಕಾಗಿ ವಿಶ್ರಾಂತಿ ವೇತನ ಅಥವಾ ಭವಿಷ್ಯನಿಧಿಯನ್ನು ರಚಿಸುವುದು ಮತ್ತು ವಿಮಾ ಯೋಜನೆಯನ್ನು ಸ್ಥಾಪಿಸುವುದು ;

(ಎಫ್) ವಿಶ್ವವಿದ್ಯಾನಿಲಯದ ಉದ್ಯೋಗಿಗಳ ಸೇವಾ ಜ್ಯೇಷ್ಠತೆಯನ್ನೊಳಗೊಳ್ಳುವ ತತ್ವಗಳು;

(ಜಿ) ವಿಶ್ವವಿದ್ಯಾನಿಲಯದ ಯಾವೊಬ್ಬ ಅಧಿಕಾರಿ ಅಥವಾ ಪ್ರಾಧಿಕಾರಿಯ ಕ್ರಮದ ವಿರುದ್ಧ ವಿಶ್ವವಿದ್ಯಾನಿಲಯದ ಯಾವೊಬ್ಬ ಉದ್ಯೋಗಿ ಅಥವಾ ವಿದ್ಯಾರ್ಥಿಯು ಪುನರವಲೋಕನಕ್ಕಾಗಿ ಸಲ್ಲಿಸಿದ ಯಾವುದೇ ಅಪೀಲು ಅಥವಾ ಅರ್ಜಿಯ ಸಂಬಂಧದಲ್ಲಿ, ಅಂಥ ಅಪೀಲು ಅಥವಾ ಅರ್ಜಿಯನ್ನು ಯಾವ ಕಾಲದೊಳಗೆ ಮಾಡಬೇಕು ಅಥವಾ ಸಲ್ಲಿಸಬೇಕು ಎಂಬುದೂ ಸೇರಿದಂತೆ ಕೈಗೊಳ್ಳುವ ಪ್ರಕ್ರಿಯೆ ;

(ಎಚ್) ವಿಶ್ವವಿದ್ಯಾನಿಲಯದ ಉದ್ಯೋಗಿಗಳು ಮತ್ತು ವಿದ್ಯಾರ್ಥಿಗಳು ಹಾಗೂ ವಿಶ್ವವಿದ್ಯಾನಿಲಯದ ನಡುವಣ ವಿವಾದದ ಇತ್ಯರ್ಥಕ್ಕಾಗಿ ಪ್ರಕ್ರಿಯೆ ;

(ಐ) ಕಾಲೇಜುಗಳು ಮತ್ತು ಅಧ್ಯಯನ ಕೇಂದ್ರಗಳಿಗೆ ಸ್ವಾಯುತ್ತ ಸ್ಥಾನಮಾನವನ್ನು ಪ್ರಧಾನ ಮಾಡುವುದು ;

(ಜೆ) ಕಾಲೇಜುಗಳು ಮತ್ತು ಸಂಸ್ಥೆಗಳಿಗೆ ಅನುದಾನಗಳ ಹಂಚಿಕೆ ಮತ್ತು ವಿತರಣೆ,

(ಕೆ) ವಿಶ್ವವಿದ್ಯಾನಿಲಯದ ವಿಶೇಷಾಧಿಕಾರಿಗಳ ಹಕ್ಕುಗಳನ್ನು ಕಾಲೇಜುಗಳು ಪಡೆಯಲು ಪೂರೈಸಬೇಕಾದ ಷರತ್ತುಗಳು ;

(ಎಲ್) ಪರಿನಿಯಮಗಳಿಂದ, ಈ ಅಧಿನಿಯಮದ ಮೂಲಕ ಉಪಬಂಧ ಕಲ್ಪಿಸಬೇಕಾದ ಅಥವಾ ಕಲ್ಪಿಸಬಹುದಾದ ಎಲ್ಲ ಇತರ ವಿಷಯಗಳು ;

**23. ಪರಿನಿಯಮಗಳನ್ನು ರಚಿಸುವ ಬಗ್ಗೆ :-**

(1) ಮೊದಲನೇ ಪರಿನಿಯಮಗಳನ್ನು ಎರಡನೇ ಅನುಸೂಚಿಯಲ್ಲಿ ನಿರೂಪಿಸಲಾಗಿದೆ.

(2) ವ್ಯವಸ್ಥಾಪನಾ ಮಂಡಲಿಯು, ಆಗಿಂದಾಗ್ಗೆ ಹೊಸ ಅಥವಾ ಹೆಚ್ಚಿನ ಪರಿನಿಯಮಗಳನ್ನು ರಚಿಸಬಹುದು ಅಥವಾ (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿತವಾದ ಪರಿನಿಯಮಗಳನ್ನು ತಿದ್ದುಪಡಿ ಮಾಡಬಹುದು ಅಥವಾ ನಿರಸನಗೊಳಿಸಬಹುದು ;

ಪರಂತು, ವ್ಯವಸ್ಥಾಪನಾ ಮಂಡಲಿಯು, ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರದ ಸ್ಥಾನಮಾನ, ಅಧಿಕಾರಗಳು ಅಥವಾ ರಚನೆಯನ್ನು ಬಾಧಿಸುವಂಥ ಯಾವುದೇ ಪರಿನಿಯಮಗಳನ್ನು ಅಂಥ ಪ್ರಾಧಿಕಾರಕ್ಕೆ ಪ್ರಸ್ತಾವಿತ ಬದಲಾವಣೆಗಳ ಮೇಲೆ ಲಿಖಿತದಲ್ಲಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ಮುಕ್ತಅವಕಾಶವನ್ನು ನೀಡುವವರಿಗೆ ಮತ್ತು ಹಾಗೆ ವ್ಯಕ್ತಪಡಿಸಲಾದ ಯಾವುದೇ ಅಭಿಪ್ರಾಯವನ್ನು ವ್ಯವಸ್ಥಾಪನಾ ಮಂಡಲಿಯು ಪರಿಗಣಿಸುವವರೆಗೆ ರಚಿಸತಕ್ಕುದಲ್ಲ. ತಿದ್ದುಪಡಿ ಮಾಡತಕ್ಕುದಲ್ಲ ಅಥವಾ ನಿರಸನಗೊಳಿಸತಕ್ಕುದಲ್ಲ.

(3) ಪ್ರತಿಯೊಂದು ಹೊಸ ಪರಿನಿಯಮ ಅಥವಾ ಪರಿನಿಯಮಗಳಿಗೆ ಸೇರ್ಪಡೆ ಅಥವಾ ಯಾವುದೇ ತಿದ್ದುಪಡಿ ಅಥವಾ ಅದರ ನಿರಸನಕ್ಕೆ ಕುಲಪತಿಯವರ ಅನುಮೋದನೆ ಅಗತ್ಯವಾಗಿರತಕ್ಕುದು. ಅವರು ಅದಕ್ಕೆ ಒಪ್ಪಿಗೆ ಕೊಡಬಹುದು ಅಥವಾ ಒಪ್ಪಿಗೆಯನ್ನು ತಡೆಹಿಡಿಯಬಹುದು ಅಥವಾ ವ್ಯವಸ್ಥಾಪನಾ ಮಂಡಲಿಗೆ, ಅದು ಯಾವುದಾದರೂ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಲ್ಲಿ, ಪುನಃ ಪರ್ಯಾಲೋಚಿಸಲು ಕಳಿಸಬಹುದು.

(4) ಹೊಸ ಪರಿನಿಯಮ ಅಥವಾ ಈಗಿರುವ ಪರಿನಿಯಮಕ್ಕೆ ತಿದ್ದುಪಡಿ ಮಾಡಿ ಅಥವಾ ನಿರಸನಗೊಳಿಸಿ ಮಾಡಲಾದ ಪರಿನಿಯಮವು. ಅದಕ್ಕೆ ಕುಲಪತಿಯವರಿಂದ ಒಪ್ಪಿಗೆ ದೊರೆತ ಹೊರತು ಮಾನ್ಯವಾಗತಕ್ಕುದಲ್ಲ.

(5) ಹಿಂದೆ ಹೇಳಿದ ಉಪ - ಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದರೂ ಕುಲಪತಿಯವರು ಈ ಅಧಿನಿಯಮವು ಪ್ರಾರಂಭವಾದ ನಿಕಟೋತ್ತರದ ಮೂರು ವರ್ಷಗಳ ಅವಧಿಯಲ್ಲಿ ಹೊಸ ಅಥವಾ ಹೆಚ್ಚಿನ ಪರಿನಿಯಮಗಳನ್ನು ರಚಿಸಬಹುದು ಅಥವಾ (1)ನೇ ಉಪ ಪ್ರಕರಣದಲ್ಲಿ ಉಲ್ಲಿಖಿತವಾದ ಪರಿನಿಯಮಗಳನ್ನು ತಿದ್ದುಪಡಿ ಮಾಡಬಹುದು ಅಥವಾ ನಿರಸನಗೊಳಿಸಬಹುದು.



(6) ಹಿಂದೆ ಹೇಳಿದ ಉಪ-ಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದರೂ ಕುಲಪತಿಯವರು ತಮ್ಮಿಂದ ನಿರ್ದಿಷ್ಟಪಡಿಸಲಾದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಪರಿನಿಯಮಗಳಲ್ಲಿ ಉಪಬಂಧಗಳನ್ನು ಕಲ್ಪಿಸಲು ವಿಶ್ವವಿದ್ಯಾನಿಲಯಕ್ಕೆ ನಿರ್ದೇಶನ ನೀಡಬಹುದು ಮತ್ತು ವ್ಯವಸ್ಥಾಪನಾ ಮಂಡಲಿಯು ಅಂಥ ನಿರ್ದೇಶನವನ್ನು ಸ್ವೀಕರಿಸಿದ ಅರವತ್ತು ದಿನಗಳೊಳಗಾಗಿ ಅದನ್ನು ಕಾರ್ಯಗತಗೊಳಿಸಲು ಅಸಮರ್ಥವಾದರೆ, ಕುಲಪತಿಯವರು ವ್ಯವಸ್ಥಾಪನಾ ಮಂಡಲಿಯು ಅಂಥ ನಿರ್ದೇಶನವನ್ನು ಪಾಲಿಸಲು ತನ್ನ ಅಸಮರ್ಥತೆಗೆ ತಿಳಿಸಿದ ಕಾರಣಗಳು ಯಾವುವಾದರೂ ಇದ್ದರೆ, ಅವುಗಳನ್ನು ಪರಿಗಣಿಸಿದ ತರುವಾಯ ಪರಿನಿಯಮಗಳನ್ನು ರಚಿಸಬಹುದು ಅಥವಾ ಅವುಗಳನ್ನು ಸೂಕ್ತವಾಗಿ ತಿದ್ದುಪಡಿ ಮಾಡಬಹುದು.

**24. ಅಧ್ಯಾದೇಶಗಳು :-** (1) ಈ ಅಧಿನಿಯಮದ ಉಪಬಂಧಗಳು ಮತ್ತು ಪರಿನಿಯಮಗಳಿಗೊಳಪಟ್ಟು, ಅಧ್ಯಾದೇಶಗಳು ಈ ಮುಂದಿನ ಎಲ್ಲ ಅಥವಾ ಯಾವುದೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ -

(ಎ) ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ, ಅಧ್ಯಯನ ಕ್ರಮಗಳು ಮತ್ತು ಅವುಗಳಿಗೆ ಶುಲ್ಕಗಳು, ಪದವಿಗಳು, ಡಿಪ್ಲೋಮಾಗಳು, ಪ್ರಮಾಣ ಪತ್ರಗಳು ಮತ್ತು ಇತರ ವ್ಯಾಸಂಗ ಕ್ರಮಗಳಿಗೆ ಸಂಬಂಧಪಟ್ಟ ವಿದ್ಯಾರ್ಹತೆಗಳು, ಸಂಶೋಧನಾ ವೇತನಗಳು, ಪಾರಿತೋಷಕಗಳು ಮತ್ತು ಅಂಥವುಗಳನ್ನು ನೀಡಲು ಷರತ್ತುಗಳು;

(ಬಿ) ಪರೀಕ್ಷಕರ ನೇಮಕಾತಿ ಮತ್ತು ನಿಬಂಧನೆಗಳು ಮತ್ತು ಷರತ್ತುಗಳು ಸೇರಿದಂತೆ ಪರೀಕ್ಷೆಗಳನ್ನು ನಡೆಸುವುದು ;

(ಸಿ) ವಿಶ್ವವಿದ್ಯಾನಿಲಯದ ವಿಶೇಷಾಧಿಕಾರಗಳ ಹಕ್ಕನ್ನು ಪಡೆದ ಕಾಲೇಜುಗಳ ನಿರ್ವಹಣೆ ; ಮತ್ತು

(ಡಿ) ಈ ಅಧಿನಿಯಮ ಅಥವಾ ಪರಿನಿಯಮಗಳ ಮೂಲಕ, ಅಧ್ಯಾದೇಶದ ಮೂಲಕ ಉಪಬಂಧ ಕಲ್ಪಿಸಬೇಕಾದ ಅಥವಾ ಕಲ್ಪಿಸಬಹುದಾದ ಯಾವುದೇ ಇತರ ವಿಷಯ.

(2) ಪ್ರಥಮ ಅಧ್ಯಾದೇಶವನ್ನು ಕುಲಪತಿಯವರು ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ರಚಿಸತಕ್ಕುದು ಮತ್ತು ಹಾಗೆ ರಚಿಸಲಾದ ಅಧ್ಯಾದೇಶವನ್ನು ವ್ಯವಸ್ಥಾಪನಾ ಮಂಡಲಿಯು ಯಾವುದೇ ಕಾಲದಲ್ಲಿ ಪರಿನಿಯಮಗಳಿಂದ ನಿಯಮಿಸಬಹುದಾದ ರೀತಿಯಲ್ಲಿ ತಿದ್ದುಪಡಿ ಮಾಡಬಹುದು, ನಿರಸನಗೊಳಿಸಬಹುದು ಅಥವಾ ಅದಕ್ಕೆ ಸೇರ್ಪಡೆ ಮಾಡಬಹುದು.

**25.** ವಿನಿಯಮಗಳು :-

ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳು, ತಮ್ಮ ಮತ್ತು ತಮ್ಮಿಂದ ನೇಮಿತವಾದ ಮತ್ತು ಈ ಅಧಿನಿಯಮ, ಪರಿನಿಯಮಗಳು ಅಥವಾ ಅಧ್ಯಾದೇಶಗಳಿಂದ ಉಪಬಂಧ ಕಲ್ಪಿಸಿಲ್ಲದ ಸಮಿತಿಗಳು, ಯಾವುದಾದರೂ ಇದ್ದರೆ ಅವುಗಳ ಕಾರ್ಯಕಲಾಪಗಳನ್ನು ಪರಿನಿಯಮಗಳ ಮೂಲಕ ನಿಯಮಿಸಬಹುದಾದ ರೀತಿಯಲ್ಲಿ ನಡೆಸುವುದಕ್ಕಾಗಿ ಈ ಅಧಿನಿಯಮ, ಪರಿನಿಯಮಗಳು ಮತ್ತು ಅಧ್ಯಾದೇಶಗಳಿಗೆ ಅಸಂಗತವಲ್ಲದ ವಿನಿಯಮಗಳನ್ನು ರಚಿಸಬಹುದು.

## ಅಧ್ಯಾಯ - VI

## ಹಣಕಾಸು ಮತ್ತು ಲೆಕ್ಕಪತ್ರಗಳು

**26.** ವಾರ್ಷಿಕ ವರದಿ :-

(1) ವಿಶ್ವವಿದ್ಯಾನಿಲಯದ ವಾರ್ಷಿಕ ವರದಿಯನ್ನು ವ್ಯವಸ್ಥಾಪನಾ ಮಂಡಲಿಯ ನಿರ್ದೇಶನಗಳ ಅಡಿಯಲ್ಲಿ ಸಿದ್ಧಪಡಿಸತಕ್ಕುದು. ಅದು ಇತರ ವಿಷಯಗಳ ಜೊತೆಗೆ, ವಿಶ್ವವಿದ್ಯಾನಿಲಯವು ತನ್ನ ಉದ್ದೇಶಗಳನ್ನು ಸಾಧಿಸುವ ಸಲುವಾಗಿ ಕೈಗೊಳ್ಳಲಾಗಿರುವ ಕ್ರಮಗಳನ್ನು ಒಳಗೊಂಡಿರತಕ್ಕುದು.

(2) ಹಾಗೆ ಸಿದ್ಧಪಡಿಸಲಾದ ವಾರ್ಷಿಕ ವರದಿಯನ್ನು ಪರಿನಿಯಮಗಳಿಂದ ನಿಯಮಿಸಬಹುದಾದ ಅಂಥ ದಿನಾಂಕದಂದು ಅಥವಾ ಅದಕ್ಕೆ ಮುಂಚಿತವಾಗಿ ಕುಲಪತಿಯವರಿಗೆ ಸಲ್ಲಿಸತಕ್ಕುದು.

(3) (1)ನೇ ಉಪ - ಪ್ರಕರಣದ ಅಡಿಯಲ್ಲಿ ಸಿದ್ಧಪಡಿಸಲಾದಂಥ ವಾರ್ಷಿಕ ವರದಿಯ ಒಂದು ಪ್ರತಿಯನ್ನು, ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕುದು. ಅದನ್ನು ಸಾಧ್ಯವಾದಷ್ಟು ಬೇಗ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸುವಂತೆ ಮಾಡತಕ್ಕುದು.

**27.** ವಾರ್ಷಿಕ ಲೆಕ್ಕ ಪತ್ರಗಳು, ಮುಂತಾದವು :-

(1) ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳು ಮತ್ತು ಜಮಾ ಖರ್ಚು ಪಟ್ಟಿಯನ್ನು ವ್ಯವಸ್ಥಾಪನಾ ಮಂಡಲಿಯ ನಿರ್ದೇಶನಗಳ ಅಡಿಯಲ್ಲಿ ಸಿದ್ಧಪಡಿಸತಕ್ಕುದು ಮತ್ತು ಪ್ರತಿ ವರ್ಷ ಕಡೇ ಪಕ್ಷ ಒಂದು ಬಾರಿ ಮತ್ತು ಹದಿನೈದು ತಿಂಗಳುಗಳನ್ನು ಮೀರದ ಅಂತರಗಳಲ್ಲಿ ರಾಜ್ಯ ಲೆಕ್ಕಪತ್ರಗಳ ನಿಯಂತ್ರಕ ಅಥವಾ ಈ ಪರವಾಗಿ ಅವರು ಪ್ರಾಧಿಕೃತಗೊಳಿಸುವ ಅಂಥ ವ್ಯಕ್ತಿಗಳು ಲೆಕ್ಕಪರಿಶೋಧನೆ ಮಾಡತಕ್ಕುದು.



(2) ಲೆಕ್ಕ ಪರಿಶೋಧನಾ ವರದಿಯ ಜೊತೆಯಲ್ಲಿ ಲೆಕ್ಕಪತ್ರಗಳ ಒಂದು ಪ್ರತಿಯನ್ನು ವ್ಯವಸ್ಥಾಪನಾ ಮಂಡಲಿಯ ಅಭಿಪ್ರಾಯಗಳು ಯಾವುದಾದರೂ ಇದ್ದರೆ ಅವುಗಳ ಜೊತೆಯಲ್ಲಿ ಕುಲಪತಿಯವರಿಗೆ ಸಲ್ಲಿಸತಕ್ಕುದು.

(3) ವಾರ್ಷಿಕ ಲೆಕ್ಕ ಪತ್ರಗಳ ಮೇಲೆ ಕುಲಪತಿಯವರು ವ್ಯಕ್ತಪಡಿಸಿದ ಯಾವುದೇ ಅಭಿಪ್ರಾಯಗಳನ್ನು ವ್ಯವಸ್ಥಾಪನಾ ಮಂಡಲಿಯ ಗಮನಕ್ಕೆ ತರತಕ್ಕುದು ಮತ್ತು ಅಂಥ ಅಭಿಪ್ರಾಯಗಳ ಬಗ್ಗೆ ವ್ಯವಸ್ಥಾಪನಾ ಮಂಡಲಿಯ ಅಭಿಪ್ರಾಯಗಳು, ಯಾವುದಾದರೂ ಇದ್ದರೆ, ಅವುಗಳನ್ನು ಕುಲಪತಿಯವರಿಗೆ ಸಲ್ಲಿಸತಕ್ಕುದು.

(4) ಲೆಕ್ಕ ಪರಿಶೋಧನಾ ವರದಿಯ ಜೊತೆಯಲ್ಲಿ ಲೆಕ್ಕಪತ್ರಗಳ ಒಂದು ಪ್ರತಿಯನ್ನು ಕುಲಪತಿಯವರಿಗೆ ಸಲ್ಲಿಸಿದಂತೆ ರಾಜ್ಯ ಸರ್ಕಾರಕ್ಕೆ ಸಹ ಸಲ್ಲಿಸತಕ್ಕುದು. ಅದನ್ನು ವಿಧಾನ ಮಂಡಲದ ನಿಕಟೋತ್ತರ ಅಧಿವೇಶನದಲ್ಲಿ ಉಭಯ ಸದನಗಳ ಮುಂದೆ ಸಾಧ್ಯವಾದಷ್ಟು ಬೇಗನೆ ಮಂಡಿಸುವಂತೆ ಮಾಡತಕ್ಕುದು.

(5) ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸಿದ ತರುವಾಯ, ಲೆಕ್ಕ ಪರಿಶೋಧನೆಯಾದ ವಾರ್ಷಿಕ ಲೆಕ್ಕಪತ್ರಗಳನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕುದು.

## ಅಧ್ಯಾಯ - VII

## ಉದ್ಯೋಗಿಗಳ ಸೇವಾ ಷರತ್ತುಗಳು

**28.** ಉದ್ಯೋಗಿಗಳ ಸೇವಾ ಷರತ್ತುಗಳು :-

(1) ವಿಶ್ವವಿದ್ಯಾನಿಲಯದ ಪ್ರತಿಯೊಬ್ಬ ಉದ್ಯೋಗಿಯನ್ನು ಲಿಖಿತ ಕರಾರಿನ ಅಡಿಯಲ್ಲಿ ನೇಮಕ ಮಾಡತಕ್ಕುದು ಮತ್ತು ಅಂಥ ಕರಾರು ಈ ಅಧಿನಿಯಮದ ಉಪಬಂಧಗಳು, ಪರಿನಿಯಮಗಳು ಮತ್ತು ಅಧ್ಯಾದೇಶಗಳಿಗೆ ಅಸಂಗತವಾಗಿರತಕ್ಕುದಲ್ಲ.

(2) (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಕರಾರನ್ನು ವಿಶ್ವವಿದ್ಯಾನಿಲಯದಲ್ಲಿ ಇಟ್ಟಿರತಕ್ಕುದು ಮತ್ತು ಅದರ ಒಂದು ಪ್ರತಿಯನ್ನು ಸಂಬಂಧಪಟ್ಟ ಉದ್ಯೋಗಿಗಳಿಗೆ ಒದಗಿಸತಕ್ಕುದು.

**29.** ಮಧ್ಯಸ್ಥಗಾರಿಕೆ ನ್ಯಾಯಾಧಿಕರಣ :

(1) ವಿಶ್ವವಿದ್ಯಾನಿಲಯ ಮತ್ತು ಉದ್ಯೋಗಿಯ ನಡುವೆ 28ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಉದ್ಯೋಗ ಕರಾರಿನಿಂದ ಉಂಟಾಗುವ ಯಾವುದೇ

ವಿವಾದವನ್ನು, ಯಾವೊಂದು ಪಕ್ಷದ ಕೋರಿಕೆಯ ಮೇರೆಗೆ ಮಧ್ಯಸ್ಥಗಾರಿಕೆ ನ್ಯಾಯಾಧಿಕರಣಕ್ಕೆ ಕಳುಹಿಸತಕ್ಕುದು. ಅದು ವ್ಯವಸ್ಥಾಪನಾ ಮಂಡಲಿಯಿಂದ ನಾಮನಿರ್ದೇಶಿತನಾದ ಒಬ್ಬ ಸದಸ್ಯ, ಸಂಬಂಧಪಟ್ಟ ಉದ್ಯೋಗಿಯಿಂದ ನಾಮ ನಿರ್ದೇಶಿತವಾದ ಒಬ್ಬ ಸದಸ್ಯ ಮತ್ತು ಕುಲಪತಿಯವರಿಂದ ನಾಮ ನಿರ್ದೇಶಿತನಾದ ಮಧ್ಯಸ್ಥಗಾರರನ್ನು ಒಳಗೊಂಡಿರತಕ್ಕುದು.

(2) ಪ್ರತಿಯೊಂದು ಅಂಥ ಕಳುಹಿಸುವಿಕೆಯನ್ನು ಈ ಪ್ರಕರಣದ ನಿಬಂಧನೆಗಳ ಅಡಿಯಲ್ಲಿ ಮಧ್ಯಸ್ಥಿಕೆ ಅಧಿನಿಯಮ, 1940 (1940ರ2) ರ ಅರ್ಥ ವ್ಯಾಪ್ತಿಯೊಳಗೆ ಮಧ್ಯಸ್ಥಿಕೆಗಾಗಿ ಸಲ್ಲಿಸಲಾದುದೆಂದು ಭಾವಿಸತಕ್ಕುದು ಮತ್ತು 2ನೇ ಪ್ರಕರಣವನ್ನು ಹೊರತುಪಡಿಸಿ, ಆ ಅಧಿನಿಯಮದ ಎಲ್ಲ ಉಪಬಂಧಗಳು, ತದನುಸಾರವಾಗಿ ಅನ್ವಯವಾಗತಕ್ಕದು.

(3) ಮಧ್ಯಸ್ಥಗಾರಿಕೆ ನ್ಯಾಯಾಧಿಕರಣದ ಕೆಲಸವನ್ನು ಕ್ರಮಬದ್ಧಗೊಳಿಸುವ ಕಾರ್ಯವಿಧಾನವನ್ನು ಪರಿನಿಯಮಗಳಿಂದ ನಿಯಮಿಸತಕ್ಕುದು.

(4) ಮಧ್ಯಸ್ಥಗಾರಿಕೆ ನ್ಯಾಯಾಧಿಕರಣದ ತೀರ್ಮಾನವು ಅಂತಿಮವಾಗಿರತಕ್ಕುದು ಮತ್ತು ಪಕ್ಷಕಾರರು ಅದಕ್ಕೆ ಬದ್ಧರಾಗಿರತಕ್ಕುದು ಮತ್ತು ನ್ಯಾಯಾಧಿಕರಣದಿಂದ ತೀರ್ಮಾನಗೊಂಡ ವಿಷಯಗಳ ಸಂಬಂಧದಲ್ಲಿ ಯಾವುದೇ ನ್ಯಾಯಾಲಯದಲ್ಲಿಯೂ ಯಾವುದೇ ದಾವೆಯನ್ನು ಹೂಡತಕ್ಕುದಲ್ಲ.

**30. ಭವಿಷ್ಯನಿಧಿ ಮತ್ತು ನಿವೃತ್ತಿ ವೇತನ ನಿಧಿಗಳು :-**

(1) ವಿಶ್ವವಿದ್ಯಾನಿಲಯವು, ಉದ್ಯೋಗಿಗಳ ಪ್ರಯೋಜನಕ್ಕಾಗಿ ಪರಿನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗೊಳಪಟ್ಟು, ತಾನು ಉಚಿತವೆಂದು ಭಾವಿಸಬಹುದಾದ ಅಂಥ ಭವಿಷ್ಯನಿಧಿ ಅಥವಾ ನಿವೃತ್ತಿವೇತನ ನಿಧಿಗಳನ್ನು ರಚಿಸತಕ್ಕುದು ಅಥವಾ ಅಂಥ ವಿಮಾ ಯೋಜನೆಗಳಿಗಾಗಿ ಉಪಬಂಧ ಕಲ್ಪಿಸತಕ್ಕುದು.

(2) ಅಂಥ ಭವಿಷ್ಯ ನಿಧಿ ಅಥವಾ ನಿವೃತ್ತಿ ವೇತನ ನಿಧಿಗಳನ್ನು ರಚಿಸಲಾಗಿದ್ದಲ್ಲಿ, ರಾಜ್ಯ ಸರ್ಕಾರವು, ಭವಿಷ್ಯ ನಿಧಿಗಳ ಅಧಿನಿಯಮ, 1925 (1925ರ 19)ರ ಉಪಬಂಧಗಳು, ಅದು ಸರ್ಕಾರಿ ಭವಿಷ್ಯ ನಿಧಿ ಎಂಬಂತೆ ಅಂಥ ನಿಧಿಗಳಿಗೆ ಅನ್ವಯಿಸತಕ್ಕುದೆಂದು ಘೋಷಿಸಬಹುದು.



## ಅಧ್ಯಾಯ - VIII

## ಸಂಕೀರ್ಣ

**31. ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳು ಮತ್ತು ನಿಕಾಯಗಳ ರಚನೆಗೆ ಸಂಬಂಧಿಸಿದ ವಿವಾದಗಳು :-**

ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರ ಅಥವಾ ಇತರ ನಿಕಾಯದ ಸದಸ್ಯನಾಗಿರಲು ಯಾವೊಬ್ಬ ವ್ಯಕ್ತಿಯು ಯಥೋಚಿತವಾಗಿ ಚುನಾಯಿತನಾಗಿದ್ದಾನೆ ಅಥವಾ ನೇಮಕಗೊಂಡಿದ್ದಾನೆ ಅಥವಾ ಹಕ್ಕುಳ್ಳವನಾಗಿದ್ದಾನೆ ಅಥವಾ ಇಲ್ಲ ಎಂಬುದರ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸಿದರೆ ವಿಷಯವನ್ನು ಕುಲಪತಿಯವರಿಗೆ ಕಳುಹಿಸತಕ್ಕುದು ಅದರ ಬಗೆಗಿನ ಅವರ ತೀರ್ಮಾನವು ಅಂತಿಮವಾಗಿರತಕ್ಕುದು.

**32. ಆಕಸ್ಮಿಕ ರಿಕ್ತತೆಗಳನ್ನು ಭರ್ತಿ ಮಾಡುವುದು :-**

ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರದ ಅಥವಾ ಇತರೆ ನಿಕಾಯದ ಸದಸ್ಯರ (ಪದನಿಮಿತ್ತ ಸದಸ್ಯರಲ್ಲದ) ಪೈಕಿ ಉಂಟಾಗುವ ಎಲ್ಲ ಆಕಸ್ಮಿಕ ರಿಕ್ತಸ್ಥಾನಗಳನ್ನು ಯಾವ ಸದಸ್ಯನ ಸ್ಥಾನ ರಿಕ್ತವಾಗಿದೆಯೋ ಆ ಸದಸ್ಯನನ್ನು ನೇಮಕ ಮಾಡಿದ, ಚುನಾಯಿಸಿದ ಅಥವಾ ಸಹ ಆಯ್ಕೆಗೊಂಡ ಯಾವೊಬ್ಬ ವ್ಯಕ್ತಿಯು, ಯಾವ ವ್ಯಕ್ತಿಯ ಸ್ಥಾನದಲ್ಲಿ ಭರ್ತಿಗೊಂಡಿರುವನೋ ಆ ವ್ಯಕ್ತಿಯು ಸದಸ್ಯನಾಗಿರುತ್ತಿದ್ದ ಉಳಿದ ಅವಧಿಯವರೆಗೆ ಅಂಥ ಪ್ರಾಧಿಕಾರ ಅಥವಾ ನಿಕಾಯದ ಸದಸ್ಯನಾಗಿರತಕ್ಕುದು.

**33. ರಚನೆ, ರಿಕ್ತತೆ, ಇತ್ಯಾದಿಗಳಲ್ಲಿ ದೋಷವಿದೆಯೆಂಬ ಕಾರಣ ಮಾತ್ರದಿಂದಲೇ ಕೃತ್ಯಗಳು ಮತ್ತು ವ್ಯವಹರಣೆಗಳು ಅಮಾನ್ಯವಾಗತಕ್ಕುದಲ್ಲ :-**

ವಿದ್ಯಾವಿಷಯಕ ಪರಿಷತ್ತಿನ ವ್ಯವಸ್ಥಾಪನಾ ಮಂಡಲಿ ಅಥವಾ ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರ ಅಥವಾ ನಿಕಾಯವನ್ನು ಯಥೋಚಿತವಾಗಿ ರಚಿಸಿಲ್ಲದಿದ್ದರೂ ಅಥವಾ ಯಾವುದೇ ಕಾಲದಲ್ಲಿ ಅದರ ರಚನೆ ಅಥವಾ ಪುನರ್ರಚನೆಯಲ್ಲಿ ದೋಷವಿದ್ದರೂ, ಅಂಥ ಯಾವುದೇ ಪ್ರಾಧಿಕಾರ ಅಥವಾ ನಿಕಾಯದ ಸದಸ್ಯತ್ವದಲ್ಲಿ ರಿಕ್ತತೆಯಿದ್ದರೂ ಅಂಥ ಪ್ರಾಧಿಕಾರ ಅಥವಾ ನಿಕಾಯದ ಯಾವುದೇ ಕೃತ್ಯ ಅಥವಾ ವ್ಯವಹರಣೆಯೂ ಅಂಥ ಯಾವುದೇ ಕಾರಣ ಅಥವಾ ಕಾರಣಗಳ ಮಾತ್ರದಿಂದಲೇ ಅಮಾನ್ಯವಾಗತಕ್ಕುದಲ್ಲ.

**34. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ :-**

ಈ ಅಧಿನಿಯಮ ಅಥವಾ ಪರಿನಿಯಮಗಳು ಅಥವಾ ಅಧ್ಯಾದೇಶಗಳ ಯಾವುದೇ ಉಪಬಂಧಗಳ ಅನುಸರಣೆಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕೃತ್ಯಕ್ಕಾಗಿ ವಿಶ್ವವಿದ್ಯಾನಿಲಯದ ಯಾವೊಬ್ಬ ಅಧಿಕಾರಿ ಅಥವಾ ಉದ್ಯೋಗಿಯ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕುದಲ್ಲ.

**35. ಪ್ರಥಮ ಉಪ ಕುಲಪತಿಯವರ ನೇಮಕಾತಿ :-**

10ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮವು ಜಾರಿಯಲ್ಲಿ ಬಂದ ದಿನಾಂಕದಿಂದ ಆರು ತಿಂಗಳೊಳಗಾಗಿ ಪ್ರಥಮ ಉಪ ಕುಲಪತಿಯವರನ್ನು ಸಕಾರವು ತಾನು ನಿಗದಿಪಡಿಸಿದ ವೇತನದ ಮೇಲೆ, ಮೂರು ವರ್ಷಗಳಿಗೆ ಮೀರದ ಅವಧಿಗೆ ಮತ್ತು ತಾನು ಉಚಿತವೆಂದು ಭಾವಿಸುವ ಅಂಥ ಇತರ ಷರತ್ತುಗಳ ಮೇಲೆ ನೇಮಕ ಮಾಡತಕ್ಕುದು.

ಪರಂತು, ಪ್ರಥಮ ಉಪ ಕುಲಪತಿಯವರಾಗಿ ನೇಮಕಗೊಂಡ ವ್ಯಕ್ತಿಯು, ತಮ್ಮ ಪದಾವಧಿಯಲ್ಲಿ ಅರವತ್ತೈದು ವರ್ಷಗಳ ವಯಸ್ಸನ್ನು ಪೂರ್ಣಗೊಳಿಸಿದರೆ ಪದದಿಂದ ನಿವೃತ್ತಿ ಹೊಂದತಕ್ಕುದು.

**36. ಪ್ರಥಮ ಕುಲಸಚಿವರ ನೇಮಕಾತಿ :-**

11ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ ಈ ಅಧಿನಿಯಮವು ಜಾರಿಯಲ್ಲಿ ಬಂದ ದಿನಾಂಕದಿಂದ ಆರು ತಿಂಗಳೊಳಗಾಗಿ ಪ್ರಥಮ ಕುಲಸಚಿವರನ್ನು ಸರ್ಕಾರವು ತಾನು ನಿಗದಿಪಡಿಸುವ ವೇತನದ ಮೇಲೆ, ಮೂರು ವರ್ಷಗಳಿಗೆ ಮೀರಿದ ಅವಧಿಗೆ ಮತ್ತು ತಾನು ಉಚಿತವೆಂದು ಭಾವಿಸುವ ಅಂಥ ಇತರ ಷರತ್ತುಗಳ ಮೇಲೆ, ನೇಮಕ ಮಾಡತಕ್ಕುದು.

ಪರಂತು, ಪ್ರಥಮ ಕುಲಸಚಿವರಾಗಿ ನೇಮಕಗೊಂಡ ವ್ಯಕ್ತಿಯು ತಮ್ಮ ಪದಾವಧಿಯಲ್ಲಿ ಐವತ್ತೆಂಟು ವರ್ಷಗಳ ವಯಸ್ಸನ್ನು ಪೂರ್ಣಗೊಳಿಸಿದರೆ, ಪದದಿಂದ ನಿವೃತ್ತಿ ಹೊಂದತಕ್ಕುದು.

**37. ಪ್ರಥಮ ಹಣಕಾಸು ಅಧಿಕಾರಿಯ ನೇಮಕಾತಿ :-**

14ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮವು ಜಾರಿಯಲ್ಲಿ ಬಂದ ದಿನಾಂಕದಿಂದ ಆರು ತಿಂಗಳೊಳಗಾಗಿ ಪ್ರಥಮ ಹಣಕಾಸು ಅಧಿಕಾರಿಯನ್ನು



ಸರ್ಕಾರವು, ತಾನು ನಿಗದಿಪಡಿಸುವ ವೇತನದ ಮೇಲೆ ಮೂರು ವರ್ಷಗಳಿಗೆ ಮೀರದ ಅವಧಿಗೆ ಮತ್ತು ತಾನು ಉಚಿತವೆಂದು ಭಾವಿಸುವ ಅಂಥ ಇತರ ಷರತ್ತುಗಳ ಮೇಲೆ ನೇಮಕ ಮಾಡತಕ್ಕುದು.

**38. ಪ್ರಥಮ ಉಪಕುಲಪತಿಯವರ ತಾತ್ಕಾಲಿಕ ಅಧಿಕಾರಗಳು :-**

(1) ವ್ಯವಸ್ಥಾಪನಾ ಮಂಡಲಿ, ವಿದ್ಯಾವಿಷಯಕ ಪರಿಷತ್ತು ಮತ್ತು ವಿಶ್ವವಿದ್ಯಾನಿಲಯದ ಅಂಥ ಇತರ ಪ್ರಾಧಿಕಾರಗಳನ್ನು ಅಧಿಸೂಚಿತ ದಿನಾಂಕದ ಆರು ತಿಂಗಳೊಳಗಾಗಿ ಅಥವಾ ಅಧಿಸೂಚನೆಯ ಮೂಲಕ ಸರ್ಕಾರವು ನಿರ್ದೇಶಿಸಬಹುದಾದ ಒಂದು ವರ್ಷಕ್ಕೆ ಮೀರದ ಅಂಥ ಹೆಚ್ಚಿನ ಅವಧಿಯೊಳಗಾಗಿ ರಚಿಸಲು ವ್ಯವಸ್ಥೆ ಮಾಡುವುದು ಪ್ರಥಮ ಉಪಕುಲಪತಿಯವರ ಕರ್ತವ್ಯವಾಗಿರತಕ್ಕುದ್ದು.

(2) ಪ್ರಥಮ ಉಪಕುಲಪತಿಯವರು ಸರ್ಕಾರದೊಂದಿಗೆ ಸಮಾಲೋಚಿಸಿ, ವಿಶ್ವವಿದ್ಯಾನಿಲಯದ ಕಾರ್ಯನಿರ್ವಹಣೆಗೆ ಅವಶ್ಯಕವಾಗಬಹುದಾದ ಅಂಥ ನಿಯಮಗಳನ್ನು ರಚಿಸತಕ್ಕುದು.

(3) (1)ನೇ ಉಪ-ಪ್ರಕರಣದ ಅಡಿಯಲ್ಲಿ ರಚಿಸಲಾದ ಪ್ರಾಧಿಕಾರಗಳು, ಸರ್ಕಾರವು, ಅಧಿಸೂಚನೆಯ ಮೂಲಕ ಪರವಾಗಿ ನಿರ್ದಿಷ್ಟಪಡಿಸಬಹುದಾದ ಅಂಥ ದಿನಾಂಕದಿಂದ ತಮ್ಮ ಪ್ರಕಾರ್ಯಗಳನ್ನು ನೆರವೇರಿಸಲು ಪ್ರಾರಂಭಿಸತಕ್ಕುದು.

(4) ಅವಶ್ಯಕವಾಗಬಹುದಾದ ಅಂಥ ಪರಿನಿಯಮಗಳನ್ನು ಪ್ರಾರೂಪಿಸುವುದು ಮತ್ತು ಅನುಮೋದನೆಗಾಗಿ ಅವನ್ನು ವ್ಯವಸ್ಥಾಪನಾ ಮಂಡಲಿಗೆ ಸಲ್ಲಿಸುವುದು. ಪ್ರಥಮ ಉಪಕುಲಪತಿಯವರ ಕರ್ತವ್ಯವಾಗಿರತಕ್ಕುದು ಅಂಥ ಪರಿನಿಯಮಗಳನ್ನು ರಚಿಸಿದಾಗ ಅದನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕುದು.

(5) ಈ ಅಧಿನಿಯಮದಲ್ಲಿ ಮತ್ತು ಪರಿನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ ಮತ್ತು ಒಂದು ಪ್ರಾಧಿಕಾರವನ್ನು ಯಥೋಚಿತವಾಗಿ ರಚಿಸಲು ಅಂಥ ಕಾಲದವರೆಗೆ ಪ್ರಥಮ ಉಪಕುಲಪತಿಯವರು., ಈ ಅಧಿನಿಯಮ ಮತ್ತು ಪರಿನಿಯಮಗಳ ಅಡಿಯಲ್ಲಿ ಅಂಥ ಪ್ರಾಧಿಕಾರದ ಯಾವುದೇ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ಚಲಾಯಿಸಲು ಮತ್ತು ನಿರ್ವಹಿಸಲು ತಾತ್ಕಾಲಿಕವಾಗಿ ಯಾವೊಬ್ಬ ಅಧಿಕಾರಿಯನ್ನು ನೇಮಕ ಮಾಡಬಹುದು ಅಥವಾ ಯಾವುದೇ ಸಮಿತಿಯನ್ನು ರಚಿಸಬಹುದು.

**39. ಅನುಸೂಚಿಯನ್ನು ತಿದ್ದುಪಡಿ ಮಾಡಲು ಅಧಿಕಾರ :-**

ಸರ್ಕಾರವು, ಅಧಿಸೂಚನೆಯ ಮೂಲಕ, ಅನುಸೂಚಿಯನ್ನು ಬದಲಾಯಿಸಬಹುದು, ತಿದ್ದುಪಡಿ ಮಾಡಬಹುದು ಅಥವಾ ಅದಕ್ಕೆ ಸೇರ್ಪಡೆ

ಮಾಡಬಹುದು ಮತ್ತು ಅಂಥ ಅಧಿಸೂಚನೆಯನ್ನು ಹೊರಡಿಸಿದ ತರುವಾಯ, ಅನುಸೂಚಿಯ ತದನುಸಾರವಾಗಿ ತಿದ್ದುಪಡಿಯಾಗಿದೆಯೆಂದು ಭಾವಿಸತಕ್ಕುದು.

**40. ತೊಂದರೆಗಳನ್ನು ನಿವಾರಿಸಲು ಅಧಿಕಾರ :-**

ಅಧಿಸೂಚಿತ ದಿನಾಂಕದ ತರುವಾಯ ಅಥವಾ ಅನ್ಯಥಾ ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರದ ಪ್ರಥಮ ರಚನೆ ಅಥವಾ ಪುನರ್ ರಚನೆಯ ಬಗ್ಗೆ ಅಥವಾ ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಸರ್ಕಾರವು, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದ, ತೊಂದರೆಯನ್ನು ನಿವಾರಿಸಲು ಅವಶ್ಯ ಅಥವಾ ಯುಕ್ತವೆಂದು ತೋರಬಹುದಾದ ಅಥವಾ ಉಪಬಂಧವನ್ನು ಕಲ್ಪಿಸಬಹುದು.

ಪರಂತು, 3ನೇ ಪ್ರಕರಣದ ಅಡಿಯಲ್ಲಿ ವಿಶ್ವವಿದ್ಯಾನಿಲಯವು ಸ್ಥಾಪನೆಯಾದ ದಿನಾಂಕದಿಂದ ಐದು ವರ್ಷಗಳು ಮುಕ್ತಾಯವಾದ ತರುವಾಯ ಯಾವುದೇ ಅಂಥ ಅಧಿಸೂಚನೆಯನ್ನು ಹೊರಡಿಸತಕ್ಕುದಲ್ಲ.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ಅಥವಾ ಈ ಅಧಿನಿಯಮದ ಯಾವುದೇ ಇತರೆ ಉಪಬಂಧಗಳ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಅಧಿಸೂಚನೆಯನ್ನು, ಅದನ್ನು ಹೊರಡಿಸಿದ ಮೇಲೆ ಸಾಧ್ಯವಾದಷ್ಟು ಬೇಗನೆ, ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದು ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅಧಿವೇಶನದಲ್ಲಿರುವಾಗ ಮಂಡಿಸತಕ್ಕುದು ಮತ್ತು ಸದರಿ ಅವಧಿಯು ಮುಕ್ತಾಯವಾಗುವುದಕ್ಕೆ ಮೊದಲು, ರಾಜ್ಯ ವಿಧಾನಮಂಡಲದ ಯಾವುದೇ ಸದನವು ಯಾವುದೇ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಿದರೆ ಅಥವಾ ಯಾವುದೇ ಅಧಿಸೂಚನೆಯು ಪರಿಣಾಮಕಾರಿಯಾಗತಕ್ಕುದಲ್ಲವೆಂದು ನಿರ್ದೇಶಿಸಿದರೆ ಮತ್ತು ಈ ಮಾರ್ಪಾಟು ಅಥವಾ ನಿರ್ದೇಶನವನ್ನು ಇನ್ನೊಂದು ಸದನವು ಒಪ್ಪಿದರೆ ಅಂಥ ಅಧಿಸೂಚನೆಯು, ಸಂದರ್ಭಾನುಸಾರ, ಅಂಥ ಮಾರ್ಪಾಟಾದ ರೀತಿಯಲ್ಲಿಯೇ ಪರಿಣಾಮಕಾರಿಯಾಗತಕ್ಕುದು ಅಥವಾ ಪರಿಣಾಮಕಾರಿಯಾಗತಕ್ಕುದಲ್ಲ, ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಈ ಅಧಿಸೂಚನೆಯ ಅಡಿಯಲ್ಲಿ ಈ ಹಿಂದೆ ಮಾಡಿದ ಯಾವುದರ ಮಾನ್ಯತೆಗೂ ಪ್ರತಿಕೂಲವಾಗಿರತಕ್ಕುದಲ್ಲ.



**41. ಪರಿನಿಯಮಗಳು, ಅಧ್ಯಾದೇಶಗಳು ಮತ್ತು ವಿನಿಮಯಗಳನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸುವುದು ಮತ್ತು ವಿಧಾನ ಮಂಡಲದ ಮುಂದೆ ಮಂಡಿಸುವುದು :-**

(1) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ಪರಿನಿಯಮ, ಅಧ್ಯಾದೇಶ ಅಥವಾ ವಿನಿಯಮವನ್ನು ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಿಸತಕ್ಕುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿತವಾದ ಪ್ರತಿಯೊಂದು ಪರಿನಿಯಮ, ಅಧ್ಯಾದೇಶ ಅಥವಾ ವಿನಿಯಮವನ್ನು, ಅದನ್ನು ರಚಿಸಿದ ಮೇಲೆ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದು ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅಧಿವೇಶನದಲ್ಲಿರುವಾಗ ಮಂಡಿಸತಕ್ಕುದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ಅನುಕ್ರಮ ಅಧಿವೇಶನಗಳ ನಿಕಟೋತ್ತರ ಅಧಿವೇಶನದ ಮುಕ್ತಾಯಕ್ಕೆ ಮೊದಲು, ರಾಜ್ಯ ವಿಧಾನ ಮಂಡಲದ ಎರಡೂ ಸದನಗಳು ಯಾವುದೇ ಪರಿನಿಯಮ, ಅಧ್ಯಾದೇಶ ಅಥವಾ ವಿನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಲು ಒಪ್ಪಿದರೆ ಅಥವಾ ಪರಿನಿಯಮ, ಅಧ್ಯಾದೇಶ ಅಥವಾ ವಿನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬಾರದೆಂದು ಎರಡು ಸದನಗಳು ಒಪ್ಪಿದರೆ, ಪರಿನಿಯಮ ಅಧ್ಯಾದೇಶ ಅಥವಾ ವಿನಿಯಮವೂ ತದನಂತರ ಸಂದರ್ಭಾನುಸಾರ ಮಾರ್ಪಾಟಾದ ರೀತಿಯಲ್ಲಿಯೇ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕುದಲ್ಲ. ಆದಾಗ್ಯೂ, ಯಾವುದೇ, ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ಪರಿನಿಯಮ, ಅಧ್ಯಾದೇಶ ಅಥವಾ ವಿನಿಯಮದ ಅಡಿಯಲ್ಲಿ ಈ ಹಿಂದೆ ಮಾಡಿದ ಯಾವುದರ ಮಾನ್ಯತೆಗೂ ಪ್ರತಿಕೂಲವಾಗಿರತಕ್ಕುದಲ್ಲ.

***42. ಶಾಸನ, ಸುಗ್ರೀವಾಜ್ಞೆ ಇತ್ಯಾದಿಗಳ ಮುಂದುವರೆದ ಭಾಗ**

ಈ ಕಾಯ್ದೆಯ ವಿಭಾಗ 23, 24 ಮತ್ತು 25ರ ಅಡಿಯಲ್ಲಿ ಶಾಸನ ಸುಗ್ರೀವಾಜ್ಞೆ, ನಿಬಂಧನೆ ಮತ್ತು ನಿಯಮಗಳನ್ನು ರಚಿಸುವವರೆಗೆ ಮೈಸೂರು ವಿಶ್ವವಿದ್ಯಾನಿಲಯವು ಸ್ಥಾಪಿಸಿದ ಮೈಸೂರು ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 1976ರ ಅಡಿ (1976ರ ಕರ್ನಾಟಕ ಕಾಯಿದೆ 28)ಯಲ್ಲಿ ಶಾಸನ, ಸುಗ್ರೀವಾಜ್ಞೆ, ನಿಬಂಧನೆ ಮತ್ತು ನಿಯಮಗಳ ನಿಯಂತ್ರಣಕ್ಕೊಳಪಡುತ್ತದೆ

***Inserted by Karnataka Act No. 16 of 2003.***

ಮತ್ತು ಈ ಕಾಯ್ದೆಯು ಜಾರಿಗೆ ಬರುವುದಕ್ಕಿಂತ ಮೊದಲು ಆ ಸಮಯದಲ್ಲಿ ಜಾರಿಯಲ್ಲಿರುವ ವಿಷಯಗಳ ಸಂಬಂಧವಾಗಿ ಅದೇ ತರಹ ಮಾರ್ಪಾಡು ಅಥವಾ ತಿದ್ದುಪಡಿಗಳನ್ನು ಸರ್ಕಾರದ ಮೂಲಕ ಕುಲಾಧಿಪತಿಗಳ ಅನುಮೋದನೆಯೊಂದಿಗೆ ಉಪಕುಲಪತಿಗಳು ಮಾಡಬಹುದು. ಅಲ್ಲಿಯವರೆಗೆ ಈ ಕಾಯ್ದೆ ಅಡಿಯಲ್ಲಿ ಸೂಕ್ತ ಕಟ್ಟುಪಾಡುಗಳೊಂದಿಗೆ ಸಿದ್ಧವಾದ ಶಾಸನ, ಸುಗ್ರೀವಾಜ್ಞೆ ಮತ್ತು ನಿಬಂಧನೆಗಳನ್ನು ಅಸಮಂಜಸವಲ್ಲವೆಂದು ಪರಿಗಣಿಸಬಹುದು ಹಾಗೂ ಈ ಕಾಯ್ದೆ ಅಡಿಯಲ್ಲಿ ಕೈಗೊಳ್ಳಲಾದ ಕ್ರಮ ಅಥವಾ ಕೆಲಸಗಳನ್ನು ರದ್ದುಮಾಡದೆ ಇದ್ದರೆ ಅಥವಾ ರದ್ದುಮಾಡುವವರೆಗೆ ಇದು ಚಾಲನೆಯಲ್ಲಿರುತ್ತದೆ.

## ಮೊದಲನೆಯ ಅನುಸೂಚಿ

**(4ನೇ ಪ್ರಕರಣವನ್ನು ನೋಡಿ)**

ವಿಶ್ವವಿದ್ಯಾನಿಲಯದ ಉದ್ದೇಶಗಳು

1. ವಿಶ್ವವಿದ್ಯಾನಿಲಯವು, ಶಿಕ್ಷಣ, ಸಂಶೋಧನೆ, ತರಬೇತಿ ಮತ್ತು ವಿಸ್ತರಣಾ ಶಿಕ್ಷಣದ ಮೂಲಕ, ದೇಶದ ಅಭಿವೃದ್ಧಿಯಲ್ಲಿ ಖಚಿತವಾದ ಪಾತ್ರವನ್ನು ವಹಿಸಲು ಮತ್ತು ರಾಷ್ಟ್ರದ ಉಜ್ವಲ ಪರಂಪರೆಯ ಆಧಾರದ ಮೇಲೆ, ಕರ್ನಾಟಕ ಜನತೆಯ ಸಂಸ್ಕೃತಿ ಮತ್ತು ಮಾನವ ಸಂಪನ್ಮೂಲಗಳ ಉತ್ತೇಜನ ಮತ್ತು ಮುನ್ನಡೆ ಸಾಧಿಸಲು ಪ್ರಯತ್ನಿಸತಕ್ಕದು. ಇದಕ್ಕಾಗಿ ಅದು,

(ಎ) ಉದ್ಯೋಗಾವಕಾಶಗಳಿಗೆ ಸಂಬಂಧಿಸಿದಂತೆ ಮತ್ತು ದೇಶದ ನೈಸರ್ಗಿಕ ಹಾಗೂ ಮಾನವ ಸಂಪನ್ಮೂಲಗಳನ್ನು ಆಧರಿಸಿ ಅದರ ಆರ್ಥಿಕ ಸ್ಥಿತಿಯನ್ನು ಅಭಿವೃದ್ಧಿಗೊಳಿಸುವುದಕ್ಕೆ ಅಗತ್ಯವಾದ ಪದವಿ, ಪ್ರಮಾಣಪತ್ರ ಮತ್ತು ಡಿಪ್ಲೊಮಾ ವ್ಯಾಸಂಗ ಕ್ರಮಗಳನ್ನು ಬಲಪಡಿಸತಕ್ಕದು ಮತ್ತು ವೈವಿಧ್ಯಮಯಗೊಳಿಸತಕ್ಕದು.

(ಬಿ) ಹೆಚ್ಚಿನ ಜನಸಂಖ್ಯೆಯ ಭಾಗಕ್ಕೆ, ವಿಶೇಷವಾಗಿ ಕೆಲಸಗಾರರು, ಗೃಹಿಣಿಯರು ಮತ್ತು ಇತರ ವಯಸ್ಕರೂ ಸೇರಿದಂತೆ ದೂರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವಂಥ ಅನಾನುಕೂಲ ಪರಿಸ್ಥಿತಿಯಲ್ಲಿರುವ ಗುಂಪುಗಳಿಗೆ ಮತ್ತು ಅಧ್ಯಯನದ ಮೂಲಕ ವಿವಿಧ ಕ್ಷೇತ್ರಗಳಲ್ಲಿ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಅಥವಾ ಅರ್ಜಿಸಲು ಇಚ್ಛಿಸುವ ಇತರ ವ್ಯಕ್ತಿಗಳಿಗೆ ಉನ್ನತ ವ್ಯಾಸಂಗಕ್ಕೆ ಅವಕಾಶ ಕಲ್ಪಿಸತಕ್ಕದು.

(ಸಿ) ತೀವ್ರವಾಗಿ ಅಭಿವೃದ್ಧಿಗೊಳ್ಳುತ್ತಿರುವ ಮತ್ತು ಬದಲಾಗುತ್ತಿರುವ ಸಮಾಜದಲ್ಲಿ ಜ್ಞಾನಾರ್ಜನೆಗೆ ಉತ್ತೇಜನ ನೀಡತಕ್ಕದು ಮತ್ತು ಮಾನವ ಪ್ರಯತ್ನದ ಎಲ್ಲ



ಕ್ಷೇತ್ರಗಳಲ್ಲಿನ ಅನುಸಂಧಾನ, ಸಂಶೋಧನೆ ಮತ್ತು ಶೋಧನೆಗಳ ಸಂಬಂಧದಲ್ಲಿ ಜ್ಞಾನ, ತರಬೇತಿ ಹಾಗೂ ಕೌಶಲ್ಯಗಳನ್ನು ಉತ್ತಮಪಡಿಸಲು ಸತತ ಅವಕಾಶಗಳನ್ನು ನೀಡತಕ್ಕದು.

(ಡಿ) ಕಲಿಕೆಯ ವಿಧಾನಗಳ ಮತ್ತು ಗತಿ, ವ್ಯಾಸಂಗ ಕ್ರಮಗಳ ಸಂಯೋಜನೆ, ವ್ಯಾಸಂಗ ಕ್ರಮದ ಪಟ್ಟಿಯಲ್ಲಿ ಸೇರಲು ಇರಬೇಕಾದ ಅರ್ಹತೆ, ವಯೋಮಿತಿ, ಪರೀಕ್ಷೆ ನಡೆಸುವುದು ಇವುಗಳ ಸಂಬಂಧದಲ್ಲಿ ಮತ್ತು ಕಲಿಕೆಯನ್ನು ಉತ್ತೇಜಿಸುವ ದೃಷ್ಟಿಯಿಂದ ಕಾರ್ಯಾಚರಣೆ ಮಾಡಲು ಮತ್ತು ಜ್ಞಾನದ ಹೊಸ-ಹೊಸ ಕ್ಷೇತ್ರಗಳಲ್ಲಿ ಪರಿಣತಿಯನ್ನು ಪ್ರೋತ್ಸಾಹಿಸಲು ಕಟ್ಟುನಿಟ್ಟಿಲ್ಲದ ಮತ್ತು ಮುಕ್ತವಾದ ವಿಶ್ವವಿದ್ಯಾನಿಲಯದ ಮಟ್ಟದ ನೂತನ ಪದ್ಧತಿಯನ್ನು ಕಲ್ಪಿಸತಕ್ಕದು.

(ಇ) ಔಪಚಾರಿಕ ಪದ್ಧತಿಗೆ ಪೂರಕವಾಗುವ ಅನೌಪಚಾರಿಕ ಪದ್ಧತಿಯನ್ನು ಪ್ರಾರಂಭಿಸುವ ಮೂಲಕ ಮತ್ತು ಪಠ್ಯಪುಸ್ತಕಗಳನ್ನು ಮತ್ತು ವಿಶ್ವವಿದ್ಯಾನಿಲಯವು ಸಿದ್ಧಪಡಿಸಿರುವ ಇತರ "ಸಾಫ್ಟ್‌ವೇರು"ಗಳನ್ನು ವ್ಯಾಪಕವಾಗಿ ಬಳಸುವ ಮೂಲಕ ಮತ್ತು ಬೋಧಕ ಸಿಬ್ಬಂದಿಯ ವಿನಿಮಯವನ್ನು ಉತ್ತೇಜಿಸುವ ಮೂಲಕ ಭಾರತದಲ್ಲಿ ಶಿಕ್ಷಣ ಪದ್ಧತಿಯ ಸುಧಾರಣೆಗೆ ಕೊಡುಗೆ ಸಲ್ಲಿಸತಕ್ಕದು.

(ಎಫ್) ಗ್ರಾಮಾಂತರ ಪ್ರದೇಶದ ವಿವಿಧ ಕಲೆಗಳು, ಕುಶಲಕಲೆಗಳು ನೈಪುಣ್ಯಗಳಲ್ಲಿ ಅವುಗಳ ಗುಣಮಟ್ಟವನ್ನು ಉತ್ತಮಪಡಿಸುವ ಮತ್ತು ಜನತೆಗೆ ಸುಲಭವಾಗಿ ಲಭ್ಯವಾಗುವಂತೆ ಮಾಡುವ ಶಿಕ್ಷಣ ಮತ್ತು ತರಬೇತಿಯನ್ನು ನೀಡತಕ್ಕದು.

(ಜಿ) ಅಂಥ ಕಾರ್ಯಚಟುವಟಿಕೆಗಳು ಅಥವಾ ಸಂಸ್ಥೆಗಳನ್ನು ನಡೆಸಲು ಅಗತ್ಯವಾದ ಉಪಾಧ್ಯಾಯರ ತರಬೇತಿಗೆ ಅವಕಾಶ ಕಲ್ಪಿಸತಕ್ಕದು ಅಥವಾ ಏರ್ಪಾಡು ಮಾಡತಕ್ಕದು.

(ಹೆಚ್) ಸೂಕ್ತ ಸ್ನಾತಕೋತ್ತರ ಅಧ್ಯಯನ ಕ್ರಮಗಳಿಗೆ ಅವಕಾಶ ಕಲ್ಪಿಸತಕ್ಕದು ಮತ್ತು ಸಂಶೋಧನೆಗೆ ಉತ್ತೇಜನ ನೀಡತಕ್ಕದು.

(ಐ) ಅದರ ವಿದ್ಯಾರ್ಥಿಗಳಿಗೆ ಸಲಹೆ ಮತ್ತು ಮಾರ್ಗದರ್ಶನದ ಅವಕಾಶ ಕಲ್ಪಿಸತಕ್ಕದು

(ಜೆ) ಅದರ ಕಾರ್ಯನೀತಿಗಳು ಮತ್ತು ಕಾರ್ಯಕ್ರಮಗಳ ಮೂಲಕ ರಾಷ್ಟ್ರದ ಐಕ್ಯತೆ ಮತ್ತು ಮಾನವ ವ್ಯಕ್ತಿತ್ವದ ಸಮಗ್ರ ಬೆಳವಣಿಗೆಗೆ ಉತ್ತೇಜನ ನೀಡತಕ್ಕದು.

(2) ವಿಶ್ವವಿದ್ಯಾನಿಲಯವು ಮೇಲಿನ ಉದ್ದೇಶಗಳನ್ನು ದೂರ ಸಂಪರ್ಕ ಮಾಧ್ಯಮ ಮತ್ತು ಮುಂದುವರಿಯುವ ಶಿಕ್ಷಣದ ವಿವಿಧ ಮಾಧ್ಯಮಗಳ ಮೂಲಕ ಸಾಧಿಸಲು ಪ್ರಯತ್ನಿಸತಕ್ಕದು ಮತ್ತು ಈಗಿರುವ ವಿಶ್ವವಿದ್ಯಾನಿಲಯಗಳು ಮತ್ತು ಉನ್ನತ

ಕಲಿಕೆಯು ಸಂಸ್ಥೆಗಳೊಂದಿಗೆ ಕಾರ್ಯಾಚರಣೆಯಲ್ಲಿ ತೊಡಗತಕ್ಕುದು ಮತ್ತು ಸಮಕಾಲೀನ ಅಗತ್ಯಗಳಿಗೆ ಸರಿಹೊಂದುವ ಉನ್ನತ ಗುಣಮಟ್ಟದ ಶಿಕ್ಷಣವನ್ನು ನೀಡುವುದಕ್ಕಾಗಿ ಇತ್ತೀಚಿನ ವೈಜ್ಞಾನಿಕ ಜ್ಞಾನ ಹಾಗೂ ಹೊಸ ಶಿಕ್ಷಣ ತಂತ್ರಜ್ಞಾನವನ್ನು ಪೂರ್ಣವಾಗಿ ಬಳಸಿಕೊಳ್ಳತಕ್ಕುದು.

## ಎರಡನೇ ಅನುಸೂಚಿ

**(23ನೇ ಪ್ರಕರಣವನ್ನು ನೋಡಿ)**

**ವಿಶ್ವವಿದ್ಯಾನಿಲಯದ ಮೊದಲನೇ ಪರಿನಿಯಮಗಳು**

**1.** ಉಪಕುಲಪತಿಯವರು -

(1) ಉಪಕುಲಪತಿಯವರು ವಿಶ್ವವಿದ್ಯಾನಿಲಯದ ವೇತನ ಪಡೆಯುವ ಪೂರ್ಣ ಕಾಲಿಕ ಅಧಿಕಾರಿಯಾಗಿರತಕ್ಕುದು.

(2) ಕುಲಪತಿಯವರು (3)ನೇ ಖಂಡದ ಅಡಿಯಲ್ಲಿ ರಚಿತವಾದ ಒಂದು ಸಮಿತಿಯು ಶಿಫಾರಸ್ಸು ಮಾಡಿದ ಮೂವರು ವ್ಯಕ್ತಿಗಳಿಗೆ (ಹೆಸರುಗಳ ಆಕಾರಾದಿಯಲ್ಲಿ ಬರುವಂತೆ ವ್ಯವಸ್ಥೆ ಮಾಡಲಾದು ಕಡಿಮೆಯಿಲ್ಲದೆ ಒಂದು ಪಟ್ಟಿಯ ಪೈಕಿಯಿಂದ ಕುಲಪತಿಯವರು ಉಪಕುಲಪತಿಯವರನ್ನು ನೇಮಕ ಮಾಡತಕ್ಕುದು :

ಪರಂತು, ಹಾಗೆ ಶಿಫಾರಸ್ಸು ಮಾಡಿದ ಯಾವೊಬ್ಬ ವ್ಯಕ್ತಿಯನ್ನು ಕುಲಪತಿಯವರು ಅನುಮೋದಿಸದಿದ್ದರೆ, ಅವರು ಹೊಸ ಶಿಫಾರಸುಗಳನ್ನು ಕಳಿಸುವಂತೆ ಕೇಳಬಹುದು.

(3) (2)ನೇ ಖಂಡದಲ್ಲಿ ಉಲ್ಲೇಖಿಸಲಾದ ಸಮಿತಿಯು, ಮೂವರು ಸದಸ್ಯರನ್ನು ಒಳಗೊಂಡಿರತಕ್ಕುದು. ಅವರ ಪೈಕಿ ಒಬ್ಬರು ವ್ಯವಸ್ಥಾಪನಾ ಮಂಡಲಿಯಿಂದ ಮತ್ತು ಒಬ್ಬರು ರಾಜ್ಯ ಸರ್ಕಾರದಿಂದ ಮತ್ತು ಇನ್ನೊಬ್ಬರು ಕುಲಪತಿಯವರಿಂದ ನಾಮ ನಿರ್ದೇಶಿತರಾಗತಕ್ಕುದು ಮತ್ತು ಕುಲಪತಿಯವರಿಂದ ನಾಮನಿರ್ದೇಶಿತನಾದ ವ್ಯಕ್ತಿಯು ಸಮಿತಿಯ ಸಂಚಾಲಕನಾಗಿರತಕ್ಕುದು. ಪರಂತು, ವಿಶ್ವವಿದ್ಯಾನಿಲಯದ ಉದ್ಯೋಗಿಯಾಗಿರುವ ಅಥವಾ ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರದ ಸದಸ್ಯನಾಗಿರುವ ಯಾವೊಬ್ಬ ವ್ಯಕ್ತಿಯು ಸಮಿತಿಯ ಸದಸ್ಯನಾಗಿ ನಾಮನಿರ್ದೇಶಿತನಾಗತಕ್ಕುದಲ್ಲ.

(4) ಉಪಕುಲಪತಿಯವರು, ಕುಲಪತಿಯವರ ಇಚ್ಛೆಗೆ - ಒಳಪಟ್ಟು ಅವರು ತಮ್ಮ ಹುದ್ದೆಯನ್ನು ಧಾರಣ ಮಾಡಿದ ದಿನಾಂಕದಿಂದ ಮೂರು ವರ್ಷಗಳ



ಅವಧಿಯವರೆಗೆ ಅಥವಾ ಅವರಿಗೆ ಅರವತ್ತೈದು ವರ್ಷ ಆಗುವವರೆಗೆ, ಇವುಗಳಲ್ಲಿ ಯಾವುದು ಮೊದಲೋ, ಆವರೆಗೆ, ಹುದ್ದೆಯನ್ನು ಧಾರಣ ಮಾಡತಕ್ಕುದು ಮತ್ತು ಅವರು ಮರು ನೇಮಕಾತಿಗೆ ಅರ್ಹರಾಗಿರತಕ್ಕುದಲ್ಲ.

ಪರಂತು, ಕುಲಪತಿಯವರು, ಉಪಕುಲಪತಿಯವರ ಪದಾವಧಿ ಮುಕ್ತಾಯವಾದ ತರುವಾಯ, ತಾವು ನಿರ್ದಿಷ್ಟಪಡಿಸಬಹುದಾದ ಒಂದು ವರ್ಷದ ಒಟ್ಟು ಅವಧಿಯನ್ನು ಮೀರದ ಅಂಥ ಅವಧಿಗೆ ಮುಂದುವರೆಯುವಂತೆ ಅಗತ್ಯಪಡಿಸಬಹುದು :

ಮತ್ತು ಪರಂತು, ಉಪಕುಲಪತಿಯವರನ್ನು, ಕುಲಪತಿಯವರಿಂದ ನೇಮಕಗೊಂಡ ಸರ್ವೋಚ್ಚ ನ್ಯಾಯಾಲಯ ಅಥವಾ ಉಚ್ಚ ನ್ಯಾಯಾಲಯದ ಸೇವೆಯಲ್ಲಿರುವ ಅಥವಾ ನಿವೃತ್ತನ್ಯಾಯಾಧೀಶರಿಂದ ಯಥೋಚಿತ ವಿಚಾರಣೆಯ ತರುವಾಯ ದುರ್ವರ್ತನೆ, ದುರಾಡಳಿತ, ಅಸಮರ್ಥತೆಯ ಅಥವಾ ಇತರ ಕಾರಣದ ಮೇಲೆ ಹೊರಡಿಸಲಾದ ಆದೇಶದ ಹೊರತು ಹುದ್ದೆಯಿಂದ ತೆಗೆದುಹಾಕತಕ್ಕುದಲ್ಲ.

(5) ಉಪಕುಲಪತಿಯವರ ಉಪಲಬ್ಧಿಗಳು ಮತ್ತು ಇತರ ಸೇವಾ ಷರತ್ತುಗಳು ಈ ಮುಂದಿನಂತೆ ಇರತಕ್ಕದು :

(i) ಕುಲಪತಿಯವರು ನಿರ್ಧರಿಸಬಹುದಾದ ವೇತನವನ್ನು ಉಪಕುಲಪತಿಯವರಿಗೆ ಸಂದಾಯ ಮಾಡತಕ್ಕುದು ಮತ್ತು ಅವರು ತಮ್ಮ ಇಡೀ ಪದಾವಧಿಯಲ್ಲಿ ವಿಶ್ವವಿದ್ಯಾನಿಲಯದ ಕಾರನ್ನು ಉಚಿತವಾಗಿ ಬಳಸಲು ಮತ್ತು ಬಾಡಿಗೆಯನ್ನು ಸಂದಾಯ ಮಾಡದೆ ಸುಸಜ್ಜಿತ ನಿವಾಸವನ್ನು ಬಳಸಲು ಹಕ್ಕುಳ್ಳವಾಗಿರತಕ್ಕುದು ಮತ್ತು ಅಂಥ ನಿವಾಸದ ನಿರ್ವಹಣೆಯ ಸಂಬಂಧದಲ್ಲಿ ಉಪಕುಲಪತಿಯವರಿಗೆ ವೈಯಕ್ತಿಕವಾಗಿ ಯಾವುದೇ ವೆಚ್ಚ ತಗಲತಕ್ಕುದಲ್ಲ.

(ii) (i)ನೇ ಉಪಖಂಡದಲ್ಲಿ ನಿರ್ದಿಷ್ಟಪಡಿಸಲಾದ ವೇತನದ ಜೊತೆಯಲ್ಲಿ ಕುಲಪತಿಯವರು, ವಿಶ್ವವಿದ್ಯಾನಿಲಯದ ಉದ್ಯೋಗಿಗಳಿಗೆ ಆಗಿಂದಾಗ್ಗೆ ಅನುಮತಿಸಬಹುದಾದ ಅಂಥ ಇತರ ಭತ್ಯಗಳಿಗೆ ಹಕ್ಕುಳ್ಳವರಾಗಿರತಕ್ಕದು :

(iii) ಉಪಕುಲಪತಿಯವರು, ವ್ಯವಸ್ಥಾಪನಾ ಮಂಡಲಿಯು ಕುಲಪತಿಯವರ ಅನುಮೋದನೆಯೊಂದಿಗೆ ಆಗಿಂದಾಗ್ಗೆ ನಿಗದಿಪಡಿಸಬಹುದಾದ ಅಂಥ ಸೇವಾಂತ ಲಾಭಗಳು ಮತ್ತು ಭತ್ಯಗಳಿಗೆ ಸಹ ಹಕ್ಕುಳ್ಳರಾಗಿರತಕ್ಕುದು.

ಪರಂತು, ವಿಶ್ವವಿದ್ಯಾನಿಲಯ ಅಥವಾ ಕಾಲೇಜಿನ ಅಥವಾ ಇತರ ಯಾವುದೇ ವಿಶ್ವವಿದ್ಯಾನಿಲಯ ಅಥವಾ ಅಂಥ ಇತರ ವಿಶ್ವವಿದ್ಯಾನಿಲಯದಿಂದ ನಿರ್ವಹಿಸಲಾದ ಅಥವಾ ಅದಕ್ಕೆ ಸಂಯೋಜಿತವಾದ ಯಾವುದೇ ಸಂಸ್ಥೆಯ

ಉದ್ಯೋಗಿಯು, ಉಪಕುಲಪತಿಯಾಗಿ ನೇಮಕಗೊಂಡಲ್ಲಿ, ಅವನು ಸದಸ್ಯನಾಗಿರುವ ಯಾವುದೇ ಭವಿಷ್ಯನಿಧಿಗೆ ಅಂಶದಾನ ನೀಡುವುದನ್ನು ಮುಂದುವರೆಸಲು ಅವನಿಗೆ ಅನುಮತಿ ನೀಡಬಹುದು ಮತ್ತು ಆ ಭವಿಷ್ಯನಿಧಿಯಲ್ಲಿ ಅಂಥ ವ್ಯಕ್ತಿಯ ಖಾತೆಗೆ, ಉಪಕುಲಪತಿಯಾಗಿ ನೇಮಕಗೊಳ್ಳುವುದಕ್ಕೆ ನಿಕಟಪೂರ್ವದಲ್ಲಿ ಅಂಥ ವ್ಯಕ್ತಿಯು ಅಂಶದಾನ ನೀಡುತ್ತಿದ್ದ ಅದೇ ದರದಲ್ಲಿ ವಿಶ್ವವಿದ್ಯಾನಿಲಯವೂ ಅಂಶದಾನ ನೀಡತಕ್ಕದ್ದು :

ಮತ್ತು ಪರಂತು, ಅಂಥ ವ್ಯಕ್ತಿಯು ಯಾವುದೇ ನಿವೃತ್ತಿವೇತನ ಸ್ಕೀಮಿನ ಸದಸ್ಯನಾಗಿದ್ದಲ್ಲಿ, ವಿಶ್ವವಿದ್ಯಾನಿಲಯವು ಅಂಥ ಸ್ಕೀಮಿಗೆ ಅಗತ್ಯವಾದ ಅಂಶದಾನವನ್ನು ನೀಡತಕ್ಕದ್ದು.

(iv) ಉಪಕುಲಪತಿಯವರು, ವ್ಯವಸ್ಥಾಪನಾ ಮಂಡಲಿಯು ನಿಗದಿಪಡಿಸಬಹುದಾದ ಅಂಥ ದರಗಳಲ್ಲಿ ಪ್ರಯಾಣ ಭತ್ಯಕ್ಕೆ ಹಕ್ಕುಳ್ಳವರಾಗಿರತಕ್ಕದ್ದು.

(v) ಉಪಕುಲಪತಿಯವರು, ತಾವು ಸಕ್ರಿಯ ಸೇವೆಯಲ್ಲಿ ನಿರತರಾಗಿದ್ದ ಅವಧಿಯ ಹನ್ನೊಂದನೇ ಒಂದರಷ್ಟು ಅವಧಿಗೆ ಪೂರ್ಣವೇತನ ಸಹಿತ ರಜೆಗೆ ಹಕ್ಕುಳ್ಳವರಾಗಿರತಕ್ಕದ್ದು.

(vi) (v)ನೇ ಉಪಖಂಡದಲ್ಲಿ ಉಲ್ಲೇಖಿಸಲಾದ ರಜೆಯ ಜೊತೆಯಲ್ಲಿ ಉಪಕುಲಪತಿಯವರು, ಪ್ರತಿಯೊಂದು ಪೂರ್ಣಗೊಂಡ ಸೇವಾ ವರ್ಷವೊಂದಕ್ಕೆ ಇಪ್ಪತ್ತು ದಿನಗಳಂತೆ ಅರ್ಧ ವೇತನ ರಜೆಯನ್ನು ಪಡೆಯಲು ಮತ್ತು ವೈದ್ಯಕೀಯ ಪ್ರಮಾಣ ಪತ್ರದ ಮೇಲೆ ಅರ್ಧ ವೇತನ ರಜೆಯನ್ನು ಪೂರ್ಣ ವೇತನದ ಪರಿವರ್ತಿತ ರಜೆಯಾಗಿ ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು.

(6) ಉಪಕುಲಪತಿಯವರ ಹುದ್ದೆಯು, ಮರಣ, ರಾಜೀನಾಮೆ ಅಥವಾ ಅನ್ಯಥಾ ರಿಕ್ತವಾದರೆ ಅಥವಾ ಅವರ ಅಸ್ವಸ್ಥತೆಯಿಂದಾಗಿ ಅಥವಾ ಇತರ ಯಾವುದೇ ಕಾರಣದಿಂದ ಅವರು ತಮ್ಮ ಕರ್ತವ್ಯಗಳನ್ನು ನೆರವೇರಿಸಲು ಅಸಮರ್ಥರಾದರೆ, ಕುಲಸಚಿವರು, ಉಪಕುಲಪತಿಯವರ, ಕರ್ತವ್ಯಗಳನ್ನು ನೆರವೇರಿಸತಕ್ಕದ್ದು ಮತ್ತು ಅವರ ಗೈರುಹಾಜರಿಯಲ್ಲಿ ಸಂದರ್ಭಾನುಸಾರ ಹೊಸ ಉಪಕುಲಪತಿಯವರು ಅವರ ಹುದ್ದೆಯನ್ನು ವಹಿಸಿಕೊಳ್ಳುವವರೆಗೆ ಅಥವಾ ಈಗಿರುವ ಉಪಕುಲಪತಿಯವರು ತಮ್ಮ ಹುದ್ದೆಯ ಕರ್ತವ್ಯಗಳಿಗೆ ಗಮನ ಕೊಡುವವರೆಗೆ ಜೇಷ್ಠತಮ ಡೀನರು ಉಪಕುಲಪತಿಯವರ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.



**2. ಉಪಕುಲಪತಿಯವರ ಅಧಿಕಾರಗಳು, ಮತ್ತು ಪ್ರಕಾರ್ಯಗಳು :-**

(1) ಉಪಕುಲಪತಿಯವರು, ವ್ಯವಸ್ಥಾಪನಾ ಮಂಡಲಿ, ವಿದ್ಯಾ ವಿಷಯಕ ಪರಿಷತ್ತು ಮತ್ತು ಹಣಕಾಸು ಸಮಿತಿಯ ಪದ ನಿಮಿತ್ತ ಅಧ್ಯಕ್ಷರಾಗಿರತಕ್ಕದ್ದು.

(2) ಉಪಕುಲಪತಿಯವರು, ಪ್ರಾಧಿಕಾರದ ಅಥವಾ ಯಾವುದೇ ಇತರ ವಿಶ್ವವಿದ್ಯಾನಿಲಯದ ಇತರ ನಿಕಾಯದ ಯಾವುದೇ ಸಭೆಯಲ್ಲಿ ಹಾಜರಿರಲು ಮತ್ತು ಅದನ್ನು ಸಂಬೋಧಿಸಿ ಮಾತನಾಡಲು ಹಕ್ಕುಳ್ಳವರಾಗಿರತಕ್ಕದ್ದು. ಆದರೆ ಅವರು ಅಂಥ ಪ್ರಾಧಿಕಾರ ಅಥವಾ ನಿಕಾಯದ ಸದಸ್ಯರಾಗಿರುವ ಹೊರತು ಅಲ್ಲಿ ಮತ ನೀಡಲು ಹಕ್ಕುಳ್ಳವರಾಗಿರತಕ್ಕದ್ದಲ್ಲ.

(3) ಈ ಅಧಿನಿಯಮ, ಪರಿನಿಯಮಗಳು, ಅಧ್ಯಾದೇಶಗಳು ಮತ್ತು ವಿನಿಯಮಗಳನ್ನು ಯಥೋಚಿತವಾಗಿ ಪಾಲಿಸಲಾಗಿದೆಯೆಂದು ನೋಡಿಕೊಳ್ಳುವುದು ಉಪಕುಲಪತಿಯವರ ಕರ್ತವ್ಯವಾಗಿರತಕ್ಕದ್ದು ಮತ್ತು ಹಾಗೆ ಪಾಲಿಸುವುದನ್ನು ಖಚಿತಪಡಿಸಿಕೊಳ್ಳಲು ಅವಶ್ಯಕವಾದ ಅಧಿಕಾರಗಳನ್ನು ಅವರು ಹೊಂದಿರತಕ್ಕದ್ದು.

4) ಉಪಕುಲಪತಿಯವರು ವಿಶ್ವವಿದ್ಯಾನಿಲಯದ ವ್ಯವಹಾರಗಳ ಮೇಲೆ ನಿಯಂತ್ರಣಗಳನ್ನು ಚಲಾಯಿಸತಕ್ಕದ್ದು ಮತ್ತು ವಿಶ್ವವಿದ್ಯಾನಿಲಯದ ಎಲ್ಲ ಪ್ರಾಧಿಕಾರಗಳ ತೀರ್ಮಾನಗಳನ್ನು ಜಾರಿಯಲ್ಲಿ ತರತಕ್ಕದ್ದು.

(5) ಉಪಕುಲಪತಿಯವರು, ವಿಶ್ವವಿದ್ಯಾನಿಲಯದಲ್ಲಿ ಶಿಸ್ತನ್ನು ಸರಿಯಾಗಿ ಕಾಪಾಡಿಕೊಂಡು ಬರಲು ಅವಶ್ಯಕವಾದ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ತಾವು ಉಚಿತವೆಂದು ಭಾವಿಸುವ ಅಂಥ ವ್ಯಕ್ತಿಗಳಿಗೆ ಅಂಥ ಅಧಿಕಾರಗಳನ್ನು ಅವರು ಪ್ರತ್ಯಾಯೋಜಿಸಬಹುದು.

(6) ಉಪಕುಲಪತಿಯವರು, ವಿಶ್ವವಿದ್ಯಾನಿಲಯದ ಯಾವೊಬ್ಬ ಅಧಿಕಾರಿಗೆ ರಜೆಯನ್ನು ನೀಡಲು ಮತ್ತು ಅಂಥ ಅಧಿಕಾರಿಯ ಗೈರುಹಾಜರಿಯಲ್ಲಿ ಅವನ ಪ್ರಕಾರ್ಯಗಳನ್ನು ನಿರ್ವಹಿಸಲು ಅವಶ್ಯಕವಾದ ಏರ್ಪಾಡುಗಳನ್ನು ಮಾಡಲು ಅಧಿಕಾರ ಹೊಂದಿರತಕ್ಕದ್ದು.

(7) ಉಪಕುಲಪತಿಯವರು, ವಿಶ್ವವಿದ್ಯಾನಿಲಯದ ಯಾವೊಬ್ಬ ಉದ್ಯೋಗಿಗೆ ನಿಯಮಗಳಿಗನುಸಾರವಾಗಿ ರಜೆಯನ್ನು ನೀಡತಕ್ಕದ್ದು ಮತ್ತು ತಾವು ಅಂಥ ಅಧಿಕಾರಗಳನ್ನು ವಿಶ್ವವಿದ್ಯಾನಿಲಯದ ಇನ್ನೊಬ್ಬ ಅಧಿಕಾರಿಗೆ ಪ್ರತ್ಯಾಯೋಜಿಸಬೇಕೆಂದು ಇಚ್ಛೆ ಪಟ್ಟರೆ, ಹಾಗೆ ಮಾಡತಕ್ಕದ್ದು.

(8) ಉಪಕುಲಪತಿಯವರು, ವ್ಯವಸ್ಥಾಪನಾ ಮಂಡಲಿ, ವಿದ್ಯಾವಿಷಯಕ ಪರಿಷತ್ತು ಮತ್ತು ಹಣಕಾಸು ಸಮಿತಿಯ ಸಭೆಗಳನ್ನು ಕರೆಯಲು ಅಥವಾ ಕರೆಯುವಂತೆ ಮಾಡಲು ಅಧಿಕಾರ ಹೊಂದಿರತಕ್ಕದ್ದು.

(9) ಉಪಕುಲಪತಿಯವರು, ಈ ಮುಂದಿನ ಹೆಚ್ಚಿನ ಅಧಿಕಾರಗಳನ್ನು ಹೊಂದಿರತಕ್ಕುದು, ಎಂದರೆ :-

(i) ವ್ಯವಸ್ಥಾಪನಾ ಮಂಡಲಿಯ ಪೂರ್ವಾನುಮೋದನೆಯೊಂದಿಗೆ ಅವಶ್ಯಕವಾಗಬಹುದಾದ ಅಂಥ ಪ್ರಾಧ್ಯಾಪಕರುಗಳು, ರೀಡರುಗಳು, ಅಧ್ಯಾಪಕರುಗಳು ಮತ್ತು ಇತರ ಉಪಾಧ್ಯಾಯರನ್ನು ನೇಮಕ ಮಾಡುವುದು ;

(ii) ವಿಶ್ವವಿದ್ಯಾನಿಲಯದ ದಕ್ಷ ಕಾರ್ಯನಿರ್ವಹಣೆಗೆ ಅವಶ್ಯಕವೆಂದು ಪರಿಗಣಿಸಬಹುದಾದ ಪತ್ರ ಬರಹಗಾರರು, ಲೇಖನ ಬರಹಗಾರರು, ಸಲಹೆಗಾರರು, ಕಾರ್ಯಕ್ರಮ ನಿರ್ವಾಹಕರು, ಕಲಾವಿದರು ಮತ್ತು ಅಂಥ ಇತರ ವ್ಯಕ್ತಿಗಳನ್ನು ನೇಮಕ ಮಾಡುವುದು ;

(iii) ವಿಶ್ವವಿದ್ಯಾನಿಲಯದ ಕಾರ್ಯ ನಿರ್ವಹಣೆಗೆ ಅವಶ್ಯಕವೆಂದು ಪರಿಗಣಿಸಬಹುದಾದ ಅಂಥ ವ್ಯಕ್ತಿಗಳನ್ನು ಒಂದು ಬಾರಿಗೆ ಆರು ತಿಂಗಳಿಗೆ ಮೀರದ ಅವಧಿಗೆ ಅಲ್ಪಾವಧಿ ನೇಮಕಾತಿಗಳನ್ನು ಮಾಡುವುದು ;

(iv) ಆಗಿಂದಾಗ್ಗೆ ಅಗತ್ಯವಾಗಬಹುದಾದ ಪ್ರಾದೇಶಿಕ ಕೇಂದ್ರಗಳು ಮತ್ತು ಅಧ್ಯಯನ ಕೇಂದ್ರಗಳನ್ನು ಬೇರೆ ಬೇರೆ ಸ್ಥಳಗಳಲ್ಲಿ ಸ್ಥಾಪಿಸುವುದು ಮತ್ತು ನಿರ್ವಹಿಸುವುದು ಮತ್ತು ಅವುಗಳ ದಕ್ಷ ಕಾರ್ಯ ನಿರ್ವಹಣೆಗೆ ಅವಶ್ಯಕವಾದ ಅಂಥ ಅಧಿಕಾರಗಳನ್ನು ಯಾವೊಬ್ಬ ಉದ್ಯೋಗಿಗೆ ಪ್ರತ್ಯಾಯೋಜಿಸುವುದು.

**3. ಕುಲಸಚಿವರು :-**

(1) ಕುಲಸಚಿವರನ್ನು ಉಪಕುಲಪತಿಯವರು ಮತ್ತು ಕುಲಪತಿಯವರು ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ, ನೇಮಕ ಮಾಡತಕ್ಕುದು ಮತ್ತು ಅವರು ವಿಶ್ವವಿದ್ಯಾನಿಲಯದ ವೇತನ ಪಡೆಯುವ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕುದು.

(2) ಕುಲಸಚಿವರು 1ನೇ ಖಂಡದ (6)ನೇ ಉಪ - ಖಂಡದ ಅಡಿಯಲ್ಲಿ ಉಪಕುಲಪತಿಯವರ ಪ್ರಕಾರ್ಯಗಳನ್ನು ನೆರವೇರಿಸುವಾಗ, ಕುಲಸಚಿವರಾಗಿ ತಮ್ಮ ಪದಾವಧಿಯು ಮುಕ್ತಾಯವಾಗಿದ್ದರೂ, ಸಂದರ್ಭಾನುಸಾರ, ಹೊಸ ಉಪಕುಲಪತಿಯವರು ತಮ್ಮ ಪದವನ್ನು ವಹಿಸಿಕೊಳ್ಳುವವರೆಗೆ ಅಥವಾ ಈಗಿರುವ ಉಪಕುಲಪತಿಯವರು ತಮ್ಮ ಪದದ ಕರ್ತವ್ಯಗಳನ್ನು ನಿರ್ವಹಿಸುವವರೆಗೆ ಪದದಲ್ಲಿ ಮುಂದುವರೆಯತಕ್ಕುದು.

(3) ಕುಲಸಚಿವರ ಉಪಲಬ್ಧಿಗಳು ಮತ್ತು ನಿಬಂಧನೆಗಳು ಮತ್ತು ಇತರ ಸೇವಾ ಷರತ್ತುಗಳು ಅಧ್ಯಾದೇಶಗಳ ಮೂಲಕ ನಿಯಮಿಸಬಹುದಾದಂಥವುಗಳಾಗಿರತಕ್ಕುದು.



(4) ಕುಲಸಚಿವರು ಉಪಕುಲಪತಿಯವರು ನಿರ್ದಿಷ್ಟಪಡಿಸಬಹುದಾದ ಅಂಥ ವಿಷಯಗಳ ಸಂಬಂಧದಲ್ಲಿ ಕುಲಪತಿಯವರಿಗೆ ನೆರವು ನೀಡತಕ್ಕುದು ಮತ್ತು ಉಪಕುಲಪತಿಯವರು ಅವರಿಗೆ ಪ್ರತ್ಯಾಯೋಜಿಸಬಹುದಾದ ಅಂಥ ಅಧಿಕಾರಗಳನ್ನು ಸಹ ಚಲಾಯಿಸತಕ್ಕುದು ಮತ್ತು ಅಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕುದು.

(5) ಕುಲಸಚಿವರು, ಉಪಾಧ್ಯಾಯರು ಮತ್ತು ಇತರ ಸದಸ್ಯರನ್ನು ಹೊರತುಪಡಿಸಿ ಅಂಥ ಉದ್ಯೋಗಿಗಳ ವಿರುದ್ಧ ವ್ಯವಸ್ಥಾಪನಾ ಮಂಡಲಿಯು, ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಶಿಸ್ತುಕ್ರಮ ಕೈಗೊಳ್ಳಲು ಅಧಿಕಾರ ಹೊಂದಿರತಕ್ಕುದು.

(6) (5)ನೇ ಉಪ - ಖಂಡದ ಅನುಸರಣೆಯಲ್ಲಿ ಕುಲಸಚಿವರು ಮಾಡಿದ ಯಾವುದೇ ಆದೇಶದ ವಿರುದ್ಧ ಉಪಕುಲಪತಿಯವರಿಗೆ ಅಪೀಲನ್ನು ಹೂಡತಕ್ಕುದು.

(7) ಕುಲಸಚಿವರ ಅಧಿಕಾರವನ್ನು ಮೀರಿದ ಶಿಕ್ಷೆಯನ್ನು ಕೊಡಬೇಕಾಗಿದೆಯೆಂದು ವಿಚಾರಣೆಯಿಂದ ತಿಳಿದುಬಂದ ಪ್ರಕರಣಗಳಲ್ಲಿ, ಅವರು ವಿಚಾರಣೆಯ ತರುವಾಯ, ತಮ್ಮ ಶಿಫಾರಸ್ಸುಗಳೊಡನೆ, ಉಪಕುಲಪತಿಯವರಿಗೆ, ಉಪಕುಲಪತಿಯವರು ಉಚಿತವೆಂದು ಭಾವಿಸುವ ಅಂಥ ಕ್ರಮಕ್ಕಾಗಿ ವರದಿ ಮಾಡತಕ್ಕುದು :

ಪರಂತು, ಯಾವುದೇ ದಂಡವನ್ನು ವಿಧಿಸುವ ಉಪಕುಲಪತಿಯವರ ಆದೇಶದ ವಿರುದ್ಧ ಒಂದು ಅಪೀಲನ್ನು ವ್ಯವಸ್ಥಾಪನಾ ಮಂಡಲಿಗೆ ಹೂಡತಕ್ಕುದು.

**(8) ಕುಲಸಚಿವರು -**

(i) ವ್ಯವಸ್ಥಾಪನಾ ಮಂಡಲಿಗೆ ಕಾರ್ಯದರ್ಶಿ

(ii) ವಿದ್ಯಾವಿಷಯಕ ಪರಿಷತ್ತಿನ ಸದಸ್ಯ - ಕಾರ್ಯದರ್ಶಿ ಆಗಿರತಕ್ಕದು.

**(9) ಕುಲಸಚಿವರು -**

(ಎ) ಅಭಿಲೇಖಗಳು, ಸಾಮಾನ್ಯ ಮೊಹರು ಮತ್ತು ವ್ಯವಸ್ಥಾಪನಾ ಮಂಡಲಿಯು ತಮ್ಮ ವಶಕ್ಕೆ ಒಪ್ಪಿಸಬಹುದಾದ ವಿಶ್ವವಿದ್ಯಾನಿಲಯದ ಅಂಥ ಇತರ ಸ್ವತ್ತುಗಳ ಅಭಿರಕ್ಷಕರಾಗಿರತಕ್ಕುದು ;

(ಬಿ) ವ್ಯವಸ್ಥಾಪನಾ ಮಂಡಲಿ, ವಿದ್ಯಾ ವಿಷಯಕ ಪರಿಷತ್ತು ಮತ್ತು ಅಂಥ ಪ್ರಾಧಿಕಾರಗಳಿಂದ ನೇಮಕಗೊಂಡ ಸಮಿತಿಗಳ ನೋಟೀಸುಗಳನ್ನು ಜಾರಿಗೊಳಿಸತಕ್ಕುದು ಮತ್ತು ಅವುಗಳ ಸಭೆಗಳನ್ನು ಕರೆಯತಕ್ಕುದು ;

(ಸಿ) ವ್ಯವಸ್ಥಪನಾ ಮಂಡಲಿ, ವಿದ್ಯಾ ವಿಷಯಕ ಪರಿಷತ್ತು ಮತ್ತು ಅಂಥ ಪ್ರಾಧಿಕಾರಗಳಿಂದ ನೇಮಕಗೊಂಡ ಸಮಿತಿಗಳ ಸಭೆಗಳ ನಡವಳಿಕೆಯನ್ನಿಡತಕ್ಕುದು ;

(ಡಿ) ವ್ಯವಸ್ಥಾಪನಾ ಮಂಡಲಿ, ವಿದ್ಯಾ ವಿಷಯಕ ಪರಿಷತ್ತುಗಳ ಕಛೇರಿ ವ್ಯವಹರಣೆಗಳು ಮತ್ತು ಪತ್ರ ವ್ಯವಹಾರಗಳನ್ನು ನಡೆಸತಕ್ಕುದು ;

(ಇ) ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಸಭೆಗಳ ಕಾರ್ಯಸೂಚಿಯ ಪ್ರತಿಯನ್ನು ಅವುಗಳನ್ನು ಹೊರಡಿಸಿದ ಕೂಡಲೇ ಮತ್ತು ಸಭೆಗಳ ನಡವಳಿಗಳನ್ನು ಕುಲಪತಿಯವರಿಗೆ ಒದಗಿಸಿತಕ್ಕುದು ;

(ಎಫ್) ವಿಶ್ವವಿದ್ಯಾನಿಲಯದ ಅಥವಾ ಅದರ ವಿರುದ್ಧದ ದಾವೆಗಳು ಅಥವಾ ವ್ಯವಹರಣೆಗಳಲ್ಲಿ ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸತಕ್ಕುದು, ಮುಖ್ತ್ಯಾರ ನಾಮಗಳಿಗೆ ಸಹಿ ಮಾಡತಕ್ಕುದು, ವಾದಪತ್ರಗಳ ಸತ್ಯಾಪನೆ ಮಾಡತಕ್ಕುದು ಮತ್ತು ಆ ಉದ್ದೇಶಕ್ಕಾಗಿ ತನ್ನ ಪ್ರತಿನಿಧಿಯನ್ನು, ಪ್ರತಿನಿಯೋಜನೆ ಮಾಡತಕ್ಕುದು ;

(ಜಿ) ಪರಿನಿಯಮಗಳು, ಅಧ್ಯಾದೇಶಗಳು ಅಥವಾ ವಿನಿಮಯಗಳಲ್ಲಿ ನಿರ್ದಿಷ್ಟಪಡಿಸಬಹುದಾದ ಅಥವಾ ವ್ಯವಸ್ಥಾಪನಾ ಮಂಡಲಿ ಅಥವಾ ಉಪಕುಲಪತಿಯವರು ಆಗಿಂದಾಗ್ಗೆ ಅಗತ್ಯಪಡಿಸಬಹುದಾದ ಅಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕುದು.

**4. ಡೀನರು :-**

(1) ವ್ಯವಸ್ಥಾಪನಾ ಮಂಡಲಿಯು ಪ್ರತಿಯೊಬ್ಬ ಡೀನರನ್ನು, -

(i) ನೇಮಕಗೊಳ್ಳಬೇಕಾದ ಅಭ್ಯರ್ಥಿಯು ಈಗಾಗಲೇ ವಿಶ್ವವಿದ್ಯಾನಿಲಯದಲ್ಲಿ ಉಪಾಧ್ಯಾಯನಾಗಿದ್ದರೆ, ಉಪಕುಲಪತಿಯವರ ; ಮತ್ತು

(ii) ನೇಮಕಗೊಳ್ಳಬೇಕಾದ ಅಭ್ಯರ್ಥಿಯು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಡದವನಾಗಿದ್ದರೆ ; ಈ ಉದ್ದೇಶಕ್ಕಾಗಿ ರಚಿತವಾಗಿ ಆಯ್ಕೆ ಸಮಿತಿಯ ಶಿಫಾರಸ್ಸಿನ ಮೇಲೆ ನೇಮಕ ಮಾಡತಕ್ಕುದು.

(2) ಪ್ರತಿಯೊಬ್ಬ ಡೀನರು ವಿಶ್ವವಿದ್ಯಾನಿಲಯದ ವೇತನ ಪಡೆಯುವ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕುದು ;

ಪರಂತು, ಡೀನರ ಪೈಕಿ ಒಬ್ಬರು ಉಪಾಧ್ಯಾಯರ ಆಡಳಿತಾತ್ಮಕ ವ್ಯವಹಾರಗಳ ಪ್ರಭಾರದಲ್ಲಿ ತರತಕ್ಕುದು.

3) ಡೀನರ ಉಪಲಬ್ಧಿಗಳು ಮತ್ತು ಇತರ ಸೇವಾ ಷರತ್ತುಗಳು ಅಧ್ಯಾದೇಶಗಳಿಂದ ನಿಯಮಿಸಬಹುದಾದಂತೆ ಇರತಕ್ಕುದು ;



ಪರಂತು, ಡೀನರು ಅರವತ್ತು ವರ್ಷ ವಯಸ್ಸು ಪೂರ್ಣಗೊಂಡ ಮೇಲೆ ನಿವೃತ್ತರಾಗತಕ್ಕುದು.

(4) ಡೀನರು ಅಧ್ಯಾದೇಶಗಳಿಂದ ನಿಯಮಿಸಬಹುದಾದ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕುದು ಮತ್ತು ಅಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕುದು.

**5. ಪರೀಕ್ಷಾ ಕುಲಸಚಿವರು**

(1) ಪರೀಕ್ಷಾ ಕುಲಸಚಿವರನ್ನು ಕುಲಪತಿಯವರು ಉಪಕುಲಪತಿ ಮತ್ತು ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ ನೇಮಕ ಮಾಡತಕ್ಕುದು ಮತ್ತು ಅವರು ವಿಶ್ವವಿದ್ಯಾನಿಲಯದ ವೇತನ ಪಡೆಯುವ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕುದು.

(2) ಪರೀಕ್ಷಾ ಕುಲಸಚಿವರ ಉಪಲಬ್ಧಿಗಳು ಮತ್ತು ಇತರ ಸೇವಾ ಷರತ್ತುಗಳನ್ನು ಅಧ್ಯಾದೇಶಗಳಿಂದ ನಿಯಮಿಸತಕ್ಕದ್ದು.

**6. ಹಣಕಾಸು ಅಧಿಕಾರಿ**

(1) ಹಣಕಾಸು ಅಧಿಕಾರಿಯನ್ನು ಕುಲಪತಿಯವರು ಉಪ - ಕುಲಪತಿ ಮತ್ತು ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ ನೇಮಕ ಮಾಡತಕ್ಕುದು, ಅವರು ವಿಶ್ವವಿದ್ಯಾನಿಲಯದ ವೇತನ ಪಡೆಯುವ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕುದು ಮತ್ತು ಅವರು ಉಪಕುಲಪತಿಯವರ ನಿಯಂತ್ರಣದಡಿಯಲ್ಲಿ ಕೆಲಸ ಮಾಡತಕ್ಕುದು.

(2) ಹಣಕಾಸು ಅಧಿಕಾರಿಯ ಉಪಲಬ್ಧಿಗಳು ಮತ್ತು ಇತರ ಸೇವಾ ಷರತ್ತುಗಳು ಅಧ್ಯಾದೇಶಗಳ ಮೂಲಕ ನಿಯಮಿಸಿದಂತೆ ಇರತಕ್ಕುದು.

(3) ಹಣಕಾಸು ಅಧಿಕಾರಿಯ ಹುದ್ದೆಯು ರಿಕ್ತವಿದ್ದಾಗ ಅಥವಾ ಹಣಕಾಸು ಅಧಿಕಾರಿಯು ಅಸ್ವಸ್ಥತೆ, ಗೈರು ಹಾಜರಿ ಅಥವಾ ಇತರ ಯಾವುದೇ ಕಾರಣಕ್ಕಾಗಿ ಹಣಕಾಸು ಅಧಿಕಾರಿಯಾಗಿ ತನ್ನ ಪ್ರಕಾರ್ಯಗಳನ್ನು ನೆರವೇರಿಸಲು ಅಸಮರ್ಥರಾದರೆ, ಉಪಕುಲಪತಿಯವರು ಈ ಉದ್ದೇಶಕ್ಕಾಗಿ ನೇಮಿಸಬಹುದಾದ ಅಂಥ ವ್ಯಕ್ತಿಯು, ಅವರ ಪ್ರಕಾರ್ಯಗಳನ್ನು ನೆರವೇರಿಸತಕ್ಕುದು.

**4) ಹಣಕಾಸು ಅಧಿಕಾರಿಯು,**

(ಎ) ವಿಶ್ವವಿದ್ಯಾನಿಲಯದ ನಿಧಿಗಳ ಸಾಮಾನ್ಯ ಮೇಲ್ವಿಚಾರಣೆಯನ್ನು ನಡೆಸತಕ್ಕುದು ಮತ್ತು ವಿಶ್ವವಿದ್ಯಾನಿಲಯಕ್ಕೆ, ಅದರ ಹಣಕಾಸು ನೀತಿಯ ವಿಷಯದಲ್ಲಿ ಸಲಹೆ ನೀಡತಕ್ಕುದು ;

(ಬಿ) ವ್ಯವಸ್ಥಾಪನಾ ಮಂಡಲಿಯು ಅವನಿಗೆ ವಹಿಸಿಕೊಡಬಹುದಾದ ಅಥವಾ

ಪರಿನಿಯಮಗಳು ಅಥವಾ ಅಧ್ಯಾದೇಶಗಳಿಂದ ನಿಯಮಿಸಬಹುದಾದ ಅಂಥ ಇತರ ಹಣಕಾಸು ಪ್ರಕಾರ್ಯಗಳನ್ನು ನೆರವೇರಿಸತಕ್ಕುದು ;

ಪರಂತು, ಹಣಕಾಸು ಅಧಿಕಾರಿಯು ವ್ಯವಸ್ಥಾಪನಾ ಮಂಡಲಿಯ ಪೂರ್ವಾನುಮೋದನೆ ಇಲ್ಲದೆ ಒಂದು ಲಕ್ಷ ರೂಪಾಯಿಗಳನ್ನು ಮೀರಿದ ಯಾವುದೇ ವೆಚ್ಚವನ್ನು ಭರಿಸತಕ್ಕುದಲ್ಲ ಅಥವಾ ಯಾವುದೇ ಮೊತ್ತವನ್ನು ತೊಡಗಿಸತಕ್ಕುದಲ್ಲ.

(5) ಹಣಕಾಸು ಅಧಿಕಾರಿಯು, ಉಪಕುಲಪತಿಯವರು ಮತ್ತು ವ್ಯವಸ್ಥಾಪನಾ ಮಂಡಲಿಯು ನಿಯಂತ್ರಣಕ್ಕೊಳಪಟ್ಟು ;

(ಎ) ವಿಶ್ವವಿದ್ಯಾನಿಲಯದ ಯಾವುದೇ ಉದ್ದೇಶಗಳ ಪೂರೈಕೆಗಾಗಿ, ನ್ಯಾಸ ಮತ್ತು ಸ್ಥಿರಸ್ವತ್ತುಗಳೂ ಸೇರಿದಂತೆ ವಿಶ್ವವಿದ್ಯಾನಿಲಯದ ಸ್ವತ್ತುಗಳು ಮತ್ತು ಹೂಡಿಕೆಗಳನ್ನು ಧಾರಣ ಮಾಡತಕ್ಕುದು ಮತ್ತು ನಿರ್ವಹಿಸತಕ್ಕುದು ;

(ಬಿ) ಹಣಕಾಸು ಸಮಿತಿಯು ಒಂದು ವರ್ಷದ ಆವರ್ತಕ ಮತ್ತು ಅನಾವರ್ತಕ ವೆಚ್ಚಕ್ಕಾಗಿ ನಿಗದಿಪಡಿಸಿದ ಮಿತಿಗಳನ್ನು ಮೀರಿಲ್ಲ ಮತ್ತು ಹಣವನ್ನು ನೀಡಲಾಗಿದ್ದ ಅಥವಾ ಹಂಚಿಕೆ ಮಾಡಲಾಗಿದ್ದ ಉದ್ದೇಶಗಳಿಗಾಗಿಯೇ ಅದನ್ನು ಖರ್ಚು ಮಾಡಲಾಗಿದೆ ಅಥವಾ ಬಳಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕುದು ;

(ಸಿ) ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರ ಮತ್ತು ಮುಂಗಡ ಪತ್ರವನ್ನು ಸಿದ್ಧಪಡಿಸುವ ಮತ್ತು ಅವುಗಳನ್ನು ಹಣಕಾಸು ಸಮಿತಿಯು ಪರಿಶೀಲಿಸಿದ ತರುವಾಯ ವ್ಯವಸ್ಥಾಪನಾ ಮಂಡಲಿಗೆ ಸಲ್ಲಿಸುವ ಜವಾಬ್ದಾರಿಯನ್ನು ನಿರ್ವಹಿಸತಕ್ಕುದು ;

(ಡಿ) ನಗದು ಮತ್ತು ಬ್ಯಾಂಕ್ ಖಾತೆಯಲ್ಲಿರುವ ಹಣ ಮತ್ತು ಹೂಡಿಕೆಗಳ ಮೇಲೆ ನಿರಂತರವಾಗಿ ಗಮನವಿಡತಕ್ಕುದು ;

(ಇ) ಆದಾಯ ಸಂಗ್ರಹಣೆಯ ಪ್ರಗತಿಯನ್ನು ಗಮನಿಸತಕ್ಕುದು ಮತ್ತು ಸಂಗ್ರಹಿಸಲು ಅನುಸರಿಸಲಾದ ವಿಧಾನಗಳ ಬಗ್ಗೆ ಸಲಹೆ ನೀಡತಕ್ಕುದು ;

(ಎಫ್) ವಿಶ್ವವಿದ್ಯಾನಿಲಯದ ಸ್ವತ್ತುಗಳ ರಿಜಿಸ್ಟರುಗಳನ್ನು ಸರಿಯಾಗಿ ಇಡಲಾಗಿದೆ ಎಂಬ ಬಗ್ಗೆ ಮತ್ತು ವಿಶ್ವವಿದ್ಯಾನಿಲಯದಿಂದ ನಿರ್ವಹಿಸಲಾಗುವ ಪ್ರಾದೇಶಿಕ ಕೇಂದ್ರಗಳು, ಅಧ್ಯಯನ ಕೇಂದ್ರಗಳು ಮತ್ತು ಇತರ ಸಂಸ್ಥೆಗಳೂ ಸೇರಿದಂತೆ ವಿಶ್ವವಿದ್ಯಾನಿಲಯದ ಕಛೇರಿಗಳಲ್ಲಿರುವ ಉಪಕರಣಗಳು ಮತ್ತು ಇತರ ಸಾಮಗ್ರಿಗಳ ದಾಸ್ತಾನು ತಪಾಸಣೆಯನ್ನು ನಡೆಸಲಾಗಿದೆ ಎಂಬ ಬಗ್ಗೆ ಖಚಿತಪಡಿಸಿಕೊಳ್ಳತಕ್ಕುದ್ದು ;



(ಜಿ) ಯಾವುದೇ ಅನಧಿಕೃತ ವೆಚ್ಚ ಅಥವಾ ಇತರ ಹಣಕಾಸಿಗೆ ಸಂಬಂಧಿಸಿದ ಅಕ್ರಮಗಳನ್ನು ಉಪಕುಲಪತಿಯವರ ಗಮನಕ್ಕೆ ತಂದು ತಪ್ಪಿತಸ್ಥ ವ್ಯಕ್ತಿಗಳ ವಿರುದ್ಧ ಕೈಗೊಳ್ಳಬೇಕಾದ ಸೂಕ್ತಕ್ರಮವನ್ನು ಸೂಚಿಸತಕ್ಕುದು.

(ಎಚ್) ವಿಶ್ವವಿದ್ಯಾನಿಲಯದಿಂದ ನಿರ್ವಹಿಸಲಾಗುವ ಪ್ರಾದೇಶಿಕ ಕೇಂದ್ರಗಳು, (ಎ) ಅಧ್ಯಯನ ಕೇಂದ್ರಗಳು ಮತ್ತು ಇತರ ಸಂಸ್ಥೆಗಳೂ ಸೇರಿದಂತೆ ವಿಶ್ವವಿದ್ಯಾನಿಲಯದ ಯಾವುದೇ ಕಛೇರಿಯಿಂದ ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ತಾನು ಅಗತ್ಯವೆಂದು ಪರಿಗಣಿಸಬಹುದಾದ ಯಾವುದೇ ಮಾಹಿತಿ ಅಥವಾ ವರದಿಗಳನ್ನು ತರಿಸಿಕೊಳ್ಳತಕ್ಕುದು.

(6) ಹಣಕಾಸು ಅಧಿಕಾರಿ ಅಥವಾ ವ್ಯವಸ್ಥಾಪನಾ ಮಂಡಲಿಯಿಂದ ಈ ಸಂಬಂಧದಲ್ಲಿ ಕ್ರಮಬದ್ಧವಾಗಿ ಪ್ರಾಧಿಕೃತನಾದ ವ್ಯಕ್ತಿ ಅಥವಾ ವ್ಯಕ್ತಿಗಳು ನೀಡಿದ ಯಾವುದೇ ರಸೀತಿ, ವಿಶ್ವವಿದ್ಯಾನಿಲಯಕ್ಕೆ ಹಣ ಸಂದಾಯವಾಗುವುದಕ್ಕೆ ಸಮರ್ಥ ಪುರಾವೆ ಆಗಿರತಕ್ಕುದು.

**7. ನಿರ್ದೇಶಕರು -**

(1) ವ್ಯವಸ್ಥಾಪನಾ ಮಂಡಲಿಯ ಪ್ರತಿಯೊಬ್ಬ ನಿರ್ದೇಶಕರನ್ನು

(i) ನೇಮಕಗೊಳ್ಳಬೇಕಾದ ಅಭ್ಯರ್ಥಿಯು ಈಗಾಗಲೇ ವಿಶ್ವವಿದ್ಯಾನಿಲಯದಲ್ಲಿ ಉಪಾಧ್ಯಾಯನಾಗಿರುವ ಸಂದರ್ಭದಲ್ಲಿ ಉಪಕುಲಪತಿಯವರ ; ಮತ್ತು

(ii) ನೇಮಕಗೊಳ್ಳಬೇಕಾದ ಅಭ್ಯರ್ಥಿಯು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಡದವನಾಗಿರುವ ಸಂದರ್ಭದಲ್ಲಿ, ಈ ಉದ್ದೇಶಕ್ಕಾಗಿ ರಚಿತವಾದ ಆಯ್ಕೆ ಸಮಿತಿಯ, ಶಿಫಾರಸ್ಸಿನ ಮೇಲೆ ನೇಮಕ ಮಾಡತಕ್ಕುದು.

(2) ಪ್ರತಿಯೊಬ್ಬ ನಿರ್ದೇಶಕನು, ವಿಶ್ವವಿದ್ಯಾನಿಲಯದ ವೇತನ ಪಡೆಯುವ ಪೂರ್ಣಕಾಲಿನ ಅಧಿಕಾರಿಯಾಗಿರತಕ್ಕುದು.

(3) ನಿರ್ದೇಶಕರ ಉಪಲಬ್ಧಿಗಳು ಮತ್ತು ಇತರ ಸೇವಾ ಷರತ್ತುಗಳು ಅಧ್ಯಾದೇಶಗಳಿಂದ ನಿಯಮಿಸಬಹುದಾದಂತೆ ಇರತಕ್ಕುದು ;

ಪರಂತು, ನಿರ್ದೇಶಕರು, ಅರವತ್ತು ವರ್ಷ ವಯಸ್ಸು ಪೂರ್ಣಗೊಂಡ ಮೇಲೆ ನಿವೃತ್ತರಾಗತಕ್ಕುದು.

(4) ನಿರ್ದೇಶಕರು, ಅಧ್ಯಾದೇಶಗಳಿಂದ ನಿಯಮಿಸಬಹುದಾದ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕುದು ಮತ್ತು ಅಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕುದು.

**8. ವ್ಯವಸ್ಥಾಪನಾ ಮಂಡಳಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು :-**

(1) ವ್ಯವಸ್ಥಾಪನಾ ಮಂಡಲಿಯು, ವಿಶ್ವವಿದ್ಯಾನಿಲಯದ ಆದಾಯ ಮತ್ತು ಸ್ವತ್ತಿನ ವ್ಯವಸ್ಥಾಪನೆ ಮತ್ತು ಆಡಳಿತ ಮತ್ತು ವಿಶ್ವವಿದ್ಯಾನಿಲಯದ ಎಲ್ಲ ಆಡಳಿತಾತ್ಮಕ ವ್ಯವಹಾರಗಳ ಬಗ್ಗೆ ಅನ್ಯಥಾ ಉಪಬಂಧಿಸಿರದ ಅಧಿಕಾರವನ್ನು ಹೊಂದಿರತಕ್ಕುದು.

(2) ಅಧಿನಿಯಮದ ಉಪಬಂಧಗಳು, ಪರಿನಿಯಮಗಳು ಮತ್ತು ಅಧ್ಯಾದೇಶಗಳಿಗೆ ಒಳಪಟ್ಟು, ವ್ಯವಸ್ಥಾಪನಾ ಮಂಡಲಿಯು, ಪರಿನಿಯಮಗಳ ಅಡಿಯಲ್ಲಿ ತನ್ನಲ್ಲಿ ನಿಹಿತವಾದ ಇತರ ಅಧಿಕಾರಗಳ ಜೊತೆಯಲ್ಲಿ ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕುದು, ಎಂದರೆ :

ವಿಶ್ವವಿದ್ಯಾನಿಲಯದಿಂದ ನಿಯೋಜಿತರಾದ ಪ್ರಾಧ್ಯಾಪಕರು, ರೀಡರುಗಳು, ಅಧ್ಯಾಪಕರು ಮತ್ತು ಇತರ ಉಪಾಧ್ಯಾಯರು ಮತ್ತು ಇತರ ವಿದ್ಯಾವಿಷಯಕ ಸಿಬ್ಬಂದಿಯ ಸೇವಾ ಷರತ್ತುಗಳು ಮತ್ತು ಪ್ರಕಾರ್ಯಗಳನ್ನು ಪರಿಭಾಷಿಸುವುದು.

(ಬಿ) ಉಪಾಧ್ಯಾಯರು ಮತ್ತು ಇತರ ವಿದ್ಯಾವಿಷಯಕ ಸಿಬ್ಬಂದಿಗೆ ವಿದ್ಯಾರ್ಹತೆಯನ್ನು ನಿಯಮಿಸುವುದು ;

(ಸಿ) ಆ ಉದ್ದೇಶಕ್ಕಾಗಿ ರಚಿಸಲಾದ ಆಯ್ಕೆ ಸಮಿತಿಯ ಶಿಫಾರಸ್ಸಿನ ಮೇಲೆ, ಅವಶ್ಯಕವಾಗಬಹುದಾದಂಥ ಪ್ರಾಧ್ಯಾಪಕರು ರೀಡರುಗಳು, ಅಧ್ಯಾಪಕರು ಮತ್ತು ಇತರ ಉಪಾಧ್ಯಾಯರು ಮತ್ತು ವಿದ್ಯಾವಿಷಯಕ ಸಿಬ್ಬಂದಿಯ ನೇಮಕಾತಿಯನ್ನು ಅನುಮೋದಿಸುವುದು* ;

(ಡಿ) ಯಾವುದೇ ವಿದ್ಯಾವಿಷಯಕ ಸಿಬ್ಬಂದಿಯ ತಾತ್ಕಾಲಿಕ ರಿಕ್ತಸ್ಥಾನಗಳಿಗೆ ಆದ ನೇಮಕಾತಿಗಳನ್ನು ಅನುಮೋದಿಸುವುದು ;

(ಇ) ವಿದ್ಯಾವಿಷಯಕ ಸಿಬ್ಬಂದಿಯ ತಾತ್ಕಾಲಿಕ ರಿಕ್ತ ಸ್ಥಾನಗಳಿಗೆ ಮಾಡಬೇಕಾದ ನೇಮಕಾತಿ ವಿಧಾನವನ್ನು ನಿರ್ದಿಷ್ಟಪಡಿಸುವುದು ;

(ಎಫ್) ಸಂದರ್ಶಕ ಪ್ರಾಧ್ಯಾಪಕರು, ವಿಶ್ರಾಂತ ಪ್ರಾಧ್ಯಾಪಕರು, ಅಧಿ ಸದಸ್ಯರು ಕಲಾವಿದರು ಮತ್ತು ಬರಹಗಾರರ ನೇಮಕಾತಿಗೆ ಏರ್ಪಾಡು ಮಾಡುವುದು ಮತ್ತು ಅಂಥ ನೇಮಕಾತಿಗಳ ನಿಬಂಧನೆಗಳು ಮತ್ತು ಷರತ್ತುಗಳನ್ನು ನಿರ್ಧರಿಸುವುದು ;

(ಜಿ) ವಿಶ್ವವಿದ್ಯಾನಿಲಯದ ಹಣಕಾಸು, ಲೆಕ್ಕಪತ್ರಗಳು, ಹೂಡಿಕೆಗಳು ಸ್ವತ್ತುಗಳನ್ನು

* Govt. Notification No. ED 37 UOV 2002 dated 5-10-2002 "To create teaching and other academic posts and" shall & shall always be deemed to have been omitted.



ಮತ್ತು ವಿಶ್ವವಿದ್ಯಾನಿಲಯದ ಎಲ್ಲ ಇತರ ವ್ಯವಹಾರಗಳನ್ನು ನಿರ್ವಹಿಸುವುದು ಮತ್ತು ಕ್ರಮಬದ್ಧಗೊಳಿಸುವುದು ಮತ್ತು ಸೂಕ್ತವೆಂದು ಪರಿಗಣಿಸಬಹುದಾದ ಅಂಥ ಏಜೆಂಟರನ್ನು ನೇಮಿಸುವುದು.

(ಹೆಚ್) ಯಾವುದೇ ವಿನಿಯೋಗಿಸದ ವರಮಾನವೂ ಸೇರಿದಂತೆ, ವಿಶ್ವವಿದ್ಯಾನಿಲಯಕ್ಕೆ ಸೇರಿದ ಯಾವುದೇ ಹಣವನ್ನು ಸ್ಟಾಕುಗಳು, ನಿಧಿಗಳು, ಭದ್ರತಾ ಷೇರುಗಳಲ್ಲಿ ತಾವು ಉಚಿತವೆಂದು ಭಾವಿಸುವಂಥ ರೀತಿಯಲ್ಲಿ ಅಥವಾ ಭಾರತದಲ್ಲಿರುವ ಸ್ಥಿರ ಸ್ವತ್ತಿನ ಖರೀದಿಯಲ್ಲಿ ಆಗಿಂದಾಗ್ಗೆ ಅಂಥ ಹೂಡುವಿಕೆಯನ್ನು ಬದಲಿಸುವ ಅಂಥದೇ ಅಧಿಕಾರದೊಂದಿಗೆ ಹೂಡುವುದು ;

ಪರಂತು, ಹಣಕಾಸು ಸಮಿತಿಯೊಂದಿಗೆ ಸಮಾಲೋಚಿಸದೆ ಈ ಖಂಡದ ಅಡಿಯಲ್ಲಿ ಯಾವುದೇ ಕ್ರಮವನ್ನು ಕೈಗೊಳ್ಳತಕ್ಕುದಲ್ಲ.

(ಐ) ಹಣಕಾಸು ಸಮಿತಿಯ ಶಿಫಾರಸ್ಸುಗಳನ್ನು ಪರಿಗಣಿಸಿದ ತರುವಾಯ, ಆಡಳಿತಾತ್ಮಕ, ಲಿಪಿಕ ಮತ್ತು ಇತರ ಅವಶ್ಯಕ ಹುದ್ದೆಗಳನ್ನು ಸೃಜಿಸುವುದು ಮತ್ತು ಅದರ ನೇಮಕಾತಿ ರೀತಿಯನ್ನು ನಿರ್ದಿಷ್ಟಪಡಿಸುವುದು ;

(ಜೆ) ಪರಿನಿಯಮಗಳು ಮತ್ತು ಅಧ್ಯಾದೇಶಗಳಿಗನುಸಾರವಾಗಿ ಉದ್ಯೋಗಿಗಳಲ್ಲಿ ಶಿಸ್ತು ಮೂಡುವಂತೆ ಮಾಡುವುದು ;

(ಕೆ) ವಿಶ್ವವಿದ್ಯಾನಿಲಯದ ಪರವಾಗಿ ಯಾವುದೇ ಸ್ಥಿರ ಅಥವಾ ಚರ ಸ್ವತ್ತನ್ನು ವರ್ಗಾಯಿಸುವುದು ಅಥವಾ ವರ್ಗಾವಣೆಗಳಿಗೆ ಒಪ್ಪಿಗೆ ನೀಡುವುದು ;

(ಎಲ್) ಯಾವುದೇ ಕಾರಣಕ್ಕಾಗಿ ಬಾಧಿತರಾಗಿರುವುದಾಗಿ ಭಾವಿಸುವ ವಿಶ್ವವಿದ್ಯಾನಿಲಯದ ಉದ್ಯೋಗಿಗಳು ಮತ್ತು ವಿದ್ಯಾರ್ಥಿಗಳ ಕುಂದು ಕೊರತೆಗಳನ್ನು ಕೇಳುವುದು, ನ್ಯಾಯನಿರ್ಣಯ ನೀಡುವುದು ಅಥವಾ ಪರಿಗಣಿಸುವುದು ;

(ಎಂ) ಹಣಕಾಸು ಸಮಿತಿಯೊಂದಿಗೆ ಸಮಾಲೋಚಿಸಿದ ತರುವಾಯ ಪತ್ರ ಬರಹಗಾರರು, ಸಲಹೆಗಾರರು, ಪರೀಕ್ಷಕರು ಮತ್ತು ಪರಿವೀಕ್ಷಕರಿಗೆ ಸಂದಾಯವಾಗಬೇಕಾದ ಸಂಭಾವನೆ, ಪ್ರವಾಸಭತ್ಯ ಮತ್ತು ಇತರ ಭತ್ಯಗಳನ್ನು ನಿಗದಿಪಡಿಸುವುದು ;

(ಎನ್) ವಿಶ್ವವಿದ್ಯಾನಿಲಯಕ್ಕೆ ಸಾಮಾನ್ಯ ಮೊಹರನ್ನು ಆಯ್ಕೆ ಮಾಡುವುದು ಮತ್ತು ಅಂಥ ಮೊಹರಿನ ಬಳಕೆಗಾಗಿ ಏರ್ಪಾಡು ಮಾಡುವುದು ;

(ಒ) ತನ್ನ ಯಾವುದೇ ಅಧಿಕಾರಗಳನ್ನು ಉಪಕುಲಪತಿ, ಕುಲಸಚಿವರು, ಪರೀಕ್ಷಾ ಕುಲಸಚಿವರು ಮತ್ತು ಹಣಕಾಸು ಅಧಿಕಾರಿ ಅಥವಾ ವಿಶ್ವವಿದ್ಯಾನಿಲಯದ

ಯಾವೊಬ್ಬ ಅಧಿಕಾರಿ, ಉದ್ಯೋಗಿ ಅಥವಾ ಪ್ರಾಧಿಕಾರ ಅಥವಾ ವಿಶ್ವವಿದ್ಯಾನಿಲಯವು ನೇಮಿಸಿದ ಒಂದು ಸಮಿತಿಗೆ ಪ್ರತ್ಯಾಯೋಜಿಸುವುದು;

(ಪಿ) ಸಂಶೋಧನಾ ವೇತನಗಳು, ವಿದ್ಯಾರ್ಥಿವೇತನಗಳು, ಶಿಷ್ಯವೇತನಗಳನ್ನು ಪ್ರಾರಂಭಿಸುವುದು ; ಮತ್ತು

(ಕ್ಯೂ) ಅಧಿನಿಯಮ ಅಥವಾ ಪರಿನಿಯಮಗಳಿಂದ ಪ್ರದತ್ತವಾದ ಅಥವಾ ವಿಧಿಸಲಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಅಂಥ ಇತರ ಪ್ರಕಾರ್ಯಗಳನ್ನು ನೆರವೇರಿಸುವುದು,

(3) ವ್ಯವಸ್ಥಾಪನಾ ಮಂಡಲಿಯು, ವಿಶ್ವವಿದ್ಯಾನಿಲಯದ ಉದ್ದೇಶಗಳ ಪೂರೈಕೆಗಾಗಿ, ಅಧಿನಿಯಮ, ಪರಿನಿಯಮಗಳು, ಅಧ್ಯಾದೇಶಗಳು ಮತ್ತು ವಿನಿಯಮಗಳ ಮೂಲಕ ಅನ್ಯಥಾ ಉಪಬಂಧಿಸಿರದ ವಿಶ್ವವಿದ್ಯಾನಿಲಯದ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕುದು.

**9. ವ್ಯವಸ್ಥಾಪನಾ ಮಂಡಲಿಯ ಸಭೆಗೆ ಗಣಪೂರ್ತಿ, -**

ಮಂಡಲಿಯ ಸಭೆಗೆ ವ್ಯವಸ್ಥಾಪನಾ ಮಂಡಲಿಯ ಒಟ್ಟು ಸದಸ್ಯರ ಮೂರನೇ ಒಂದು ಭಾಗವು ಗಣಪೂರ್ತಿಯಾಗತಕ್ಕದು.

**10. ವಿದ್ಯಾವಿಷಯಕ ಪರಿಷತ್ತಿನ ಅಧಿಕಾರಗಳು, -**

ಈ ಅಧಿನಿಯಮದ ಉಪ ಬಂಧಗಳು ಪರಿನಿಯಮಗಳು ಮತ್ತು ಅಧ್ಯಾದೇಶಗಳಿಗೊಳಪಟ್ಟು, ವಿದ್ಯಾವಿಷಯಕ ಪರಿಷತ್ತು, ಪರಿನಿಯಮಗಳ ಅಡಿಯಲ್ಲಿ ತನ್ನಲ್ಲಿ ನಿಹಿತವಾದ ಅಧಿಕಾರಗಳ ಜೊತೆಗೆ ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕುದು, ಎಂದರೆ -

(ಎ) ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ನೀತಿಯ ಸಾಮಾನ್ಯ ಮೇಲ್ವಿಚಾರಣೆ ನಡೆಸುವುದು ಮತ್ತು ಬೋಧನೆಯ ಮೌಲ್ಯಮಾಪನ ಅಥವಾ ಸಂಶೋಧನೆಯ ವಿಧಾನಗಳು ಅಥವಾ ವಿದ್ಯಾವಿಷಯಕ ಮಟ್ಟಗಳಲ್ಲಿ ಸುಧಾರಣೆಯ ಬಗ್ಗೆ ನಿರ್ದೇಶನಗಳನ್ನು ನೀಡುವುದು ;

(ಬಿ) ತಾನೇ ಸ್ವಯಂಪ್ರೇರಣೆಯಿಂದ ಅಥವಾ ಯೋಜನಾ ಮಂಡಲಿಯ ಅಥವಾ ಒಂದು ಅಧ್ಯಯನ ಕೇಂದ್ರದ ಅಥವಾ ವ್ಯವಸ್ಥಾಪನಾ ಮಂಡಲಿಯ ಅಭಿಪ್ರಾಯದ ಮೇಲೆ ಸಾಮಾನ್ಯ ವಿದ್ಯಾವಿಷಯಕ ಆಸಕ್ತಿಯ ವಿಷಯಗಳನ್ನು ಪರಿಗಣಿಸುವುದು ಮತ್ತು ಆ ಬಗ್ಗೆ ಸರಿಯಾದ ಕ್ರಮಕೈಗೊಳ್ಳುವುದು ; ಮತ್ತು



(ಸಿ) ಶಿಸ್ತು, ಪ್ರವೇಶಾವಕಾಶಗಳು, ಸಂಶೋಧನಾ ವೇತನಗಳು, ಮತ್ತು ವಿದ್ಯಾರ್ಥಿ ವೇತನಗಳ ನೀಡಿಕೆ, ಶುಲ್ಕಗಳು ಮತ್ತು ಇತರ ವಿದ್ಯಾವಿಷಯಕ ಅಗತ್ಯಗಳೂ ಸೇರಿದಂತೆ ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಕಾರ್ಯಾಚರಣೆಗೆ ಸಂಬಂಧಪಟ್ಟ, ಪರಿನಿಯಮಗಳು ಮತ್ತು ಅಧ್ಯಾದೇಶಗಳಿಗೆ ಸಂಗತವಾದ ಅಂಥ ವಿನಿಯಮಗಳನ್ನು ರಚಿಸುವುದು.

**11. ಹಣಕಾಸು ಸಮಿತಿಯ ಅಧಿಕಾರಗಳು**

(1) ಹಣಕಾಸು ಸಮಿತಿಯ ಲೆಕ್ಕಪತ್ರಗಳ ಪರೀಕ್ಷೆ ಹಾಗೂ ವೆಚ್ಚದ ಪರಿಶೀಲನೆಗಾಗಿ ಒಂದು ವರ್ಷದಲ್ಲಿ ಕಡೇ ಪಕ್ಷ ಮೂರು ಭಾರಿ ಸಭೆ ಸೇರತಕ್ಕುದು.

(2) ಹಣಕಾಸು ಸಮಿತಿಯ, ದರ್ಜೆಯ ಪರಿಷ್ಕರಣೆ, ಶ್ರೇಣಿಗಳ ಮೇಲ್ದರ್ಜೆ ಮತ್ತು ಆಯವ್ಯಯ ಪತ್ರದಲ್ಲಿ ಸೇರಿಸದ ಬಾಬುಗಳನ್ನು ವ್ಯವಸ್ಥಾಪನಾ ಮಂಡಲಿಯು ಪರಿಶೀಲಿಸುವುದಕ್ಕೆ ಮುಂಚೆ ತಾನು ಪರೀಕ್ಷಿಸತಕ್ಕುದು.

**12. ಉಪನ್ಯಾಸಕರ ನೇಮಕಾತಿ, ಇತ್ಯಾದಿ**

**(1)** ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರು, ಗ್ರಂಥಪಾಲಕರು, ಸಹ ಪ್ರಾಧ್ಯಾಪಕರು ಮತ್ತು ಸಹಾಯಕ ಪ್ರಾಧ್ಯಾಪಕರ ನೇಮಕಾತಿಗೆ ಸಂಬಂಧಿಸಿದಂತೆ ಒಂದು ನೇಮಕಾತಿ ಮಂಡಲಿ ಇರತಕ್ಕುದು.

**(2) ಅಂಥ ಪ್ರತಿಯೊಂದು ಮಂಡಲಿಯು,**

**(ಎ) ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಮತ್ತು ಗ್ರಂಥಪಾಲಕರ ಹುದ್ದೆಗಳಿಗೆ ಆಯ್ಕೆ ಮಾಡುವುದಕ್ಕಾಗಿ,**

(i) ಕುಲಪತಿಗಳು ಅಧ್ಯಕ್ಷರಾಗಿರುವರು.

(ii) ಕುಲಾಧಿಪತಿಗಳಿಂದ ನಾಮನಿರ್ದೇಶಿತರಾದ ಶಿಕ್ಷಣ ತಜ್ಞರು (ಪ್ರಾಧ್ಯಾಪಕರ ದರ್ಜೆ) ಒಬ್ಬರು.

(iii) ಕುಲಪತಿಗಳಿಂದ ಶಿಫಾರಸ್ಸುಗೊಂಡು ವ್ಯವಸ್ಥಾಪನಾ ಮಂಡಲಿಯಿಂದ ಅನುಮೋದನೆಗೊಂಡಿರುವ ಪ್ಯಾನಲ್‌ನಲ್ಲಿರುವವರಲ್ಲಿ ಮೂವರು ಸಂಬಂಧಿಸಿದ ಕ್ಷೇತ್ರ/ವಿಷಯ ತಜ್ಞರು : ಇವರಲ್ಲಿ ಒಬ್ಬರು ಯು.ಜಿ.ಸಿ.ಯವರು ಸಿದ್ಧಪಡಿಸಿ ಮತ್ತು ಅದರ ಅಂತರ್ಜಾಲದಲ್ಲಿ ಇದು ಪ್ರಕಟಗೊಂಡಿರುವ ಸಮಿತಿಯ ಪಟ್ಟಿಯಲ್ಲಿರುವ ವಿಷಯ ತಜ್ಞರಾಗಿರಬೇಕು.

(iv) ಅನ್ವಯವಾಗುವ ಕಡೆ ಶೈಕ್ಷಣಿಕ ವಿಭಾಗದ ಡೀನ್

(v) ಪ್ರಾಧ್ಯಾಪಕರಾಗಿದ್ದರೆ ವಿಭಾಗದ ಮುಖ್ಯಸ್ಥರು / ಅಧ್ಯಕ್ಷರು.

(vi) ಪ.ಜಾ /ಪ.ಪಂ./ ಇತರೆ ಹಿಂದುಳಿದ ವರ್ಗ / ಅಲ್ಪ ಸಂಖ್ಯಾತರು / ಮಹಿಳೆ/ ವಿಕಲಚೇತನರ ವರ್ಗಗಳನ್ನು ಪ್ರತಿನಿಧಿಸಲು, ಈ ವರ್ಗಗಳನ್ನು ಪ್ರತಿನಿಧಿಸುವ ಯಾವುದೇ ಅಭ್ಯರ್ಥಿ ಅರ್ಜಿದಾರನಾಗಿದ್ದಲ್ಲಿ ಮತ್ತು ಮೇಲಿನ ಆಯ್ಕೆ ಸಮಿತಿಯ ಸದಸ್ಯರಲ್ಲಿ ಯಾರೂ ಈ ವರ್ಗಕ್ಕೆ ಸೇರದೆ ಇದ್ದಲ್ಲಿ, ಕುಲಪತಿಗಳಿಂದ ನಾಮನಿರ್ದೇಶನಗೊಂಡ ಒಬ್ಬರು ಶಿಕ್ಷಣ ತಜ್ಞರು.

**(ಬಿ) ಸಹಾಯಕ ಪ್ರಾಧ್ಯಾಪಕರುಗಳ ಹುದ್ದೆಗಳ ಆಯ್ಕೆಗೆ.**

(i) ಕುಲಪತಿಗಳು ಅಧ್ಯಕ್ಷರಾಗಿರುವರು.

(ii) ಕುಲಪತಿಗಳಿಂದ ಶಿಫಾರಸ್ಸುಗೊಂಡು ವ್ಯವಸ್ಥಾಪನಾ ಮಂಡಲಿಯಿಂದ ಅನುಮೋದನೆಗೊಂಡಿರುವ ಪ್ಯಾನಲ್‌ನಲ್ಲಿರುವವರಲ್ಲಿ ಮೂವರು ಸಂಬಂಧಿಸಿದ ವಿಷಯ ತಜ್ಞರು : ಇವರಲ್ಲಿ ಒಬ್ಬರು ಯು.ಜಿ.ಸಿ.ಯವರು ಸಿದ್ಧಪಡಿಸಿ ಮತ್ತು ಅದರ ಅಂತರ್ಜಾಲದಲ್ಲಿ ಇದು ಪ್ರಕಟಗೊಂಡಿರುವ ಸಮಿತಿಯ ಪಟ್ಟಿಯಲ್ಲಿರುವ ವಿಷಯ ತಜ್ಞರಾಗಿರಬೇಕು.

(iii) ಅನ್ವಯವಾಗುವ ಕಡೆ ಶೈಕ್ಷಣಿಕ ವಿಭಾಗದ ಡೀನ್.

(iv) ಪ್ರಾಧ್ಯಾಪಕರಾಗಿದ್ದರೆ ವಿಭಾಗದ ಮುಖ್ಯಸ್ಥರು / ಅಧ್ಯಕ್ಷರು

(v) ಕುಲಾಧಿಪತಿಗಳಿಂದ ನಾಮನಿರ್ದೇಶನಗೊಂಡ ಒಬ್ಬರ ಶಿಕ್ಷಣತಜ್ಞರು.

(vi) ಪ.ಜಾ. / ಪ.ಪಂ. / ಇತರೆ ಹಿಂದುಳಿದ ವರ್ಗ / ಅಲ್ಪಸಂಖ್ಯಾತರು / ಮಹಿಳೆ / ವಿಕಲಚೇತನರ ವರ್ಗಗಳನ್ನು ಪ್ರತಿನಿಧಿಸಲು, ಈ ವರ್ಗಗಳನ್ನು ಪ್ರತಿನಿಧಿಸುವ ಯಾವುದೇ ಅಭ್ಯರ್ಥಿ ಅರ್ಜಿದಾರನಾಗಿದ್ದಲ್ಲಿ ಮತ್ತು ಮೇಲಿನ ಆಯ್ಕೆ ಸಮಿತಿಯ ಸದಸ್ಯರಲ್ಲಿ ಯಾರೂ ಈ ವರ್ಗಕ್ಕೆ ಸೇರದೆ ಇದ್ದಲ್ಲಿ, ಕುಲಪತಿಗಳಿಂದ ನಾಮನಿರ್ದೇಶನಗೊಂಡ ಒಬ್ಬರು ಶಿಕ್ಷಣ ತಜ್ಞರು (ಪ್ರಾಧ್ಯಾಪಕ ದರ್ಜೆ).

*(3) ಕುಲಸಚಿವರು ನೇಮಕಾತಿ ಮಂಡಲಿಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸತಕ್ಕದ್ದು.

(4) ಆಯ್ಕೆಯ ಮೂಲಕ ಭರ್ತಿ ಮಾಡಬೇಕಾದ ಪ್ರಾಧ್ಯಾಪಕ, ಗ್ರಂಥಪಾಲಕ, ಸಹ ಪ್ರಾಧ್ಯಾಪಕ ಅಥವಾ ಸಹಾಯಕ ಪ್ರಾಧ್ಯಾಪಕರ ಪ್ರತಿಯೊಂದು ಹುದ್ದೆಗೆ

* **Note : Chancellor apporal, No. GS 24 KOM 2012 Dt : 18.05.2012**



ಅಗತ್ಯವಿರುವ ಕನಿಷ್ಠ ಮತ್ತು ಇತರ ವಿದ್ಯಾರ್ಹತೆ, ಯಾವುದಾದರೂ ಇದ್ದರೆ, ಅದು ಉಪಲಬ್ಧಗಳು ಮತ್ತು ಭರ್ತಿಮಾಡಬೇಕಾದ ಹುದ್ದೆಗಳ ಸಂಖ್ಯೆ, ವೇತನ ಶ್ರೇಣಿ, ಮೀಸಲಾತಿಗನುಗುಣವಾಗಿ ಹುದ್ದೆಗಳ ವರ್ಗೀಕರಣದೊಂದಿಗೆ ಯಥೋಚಿತ ಮತ್ತು ವ್ಯಾಪಕ ಜಾಹೀರಾತು ನೀಡತಕ್ಕದ್ದು ಮತ್ತು ಯುಕ್ತ ಕಾಲಾವಕಾಶದೊಳಗೆ ಅರ್ಜಿದಾರರು ಅರ್ಜಿಸಲ್ಲಿಸಲು ಅವಕಾಶ ನೀಡತಕ್ಕುದು.

(5) ಇಬ್ಬರು ಹೊರಗಿನ ವಿಷಯ ತಜ್ಞರು ಸೇರಿದಂತೆ ಕನಿಷ್ಠ ಪಕ್ಷ ನಾಲ್ಕು ಸದಸ್ಯರ ಕೋರಂ ಇರತಕ್ಕದ್ದು.

(6) ಮಂಡಳಿಯು ಸಂದರ್ಶನ ನಡೆಸುವುದು ಮತ್ತು ಜಾಹೀರಾತಿನಲ್ಲಿ ಕೇಳಲಾದ ವಿದ್ಯಾರ್ಹತೆಗನುಗುಣವಾಗಿ ಪ್ರತಿಯೊಬ್ಬ ಅಭ್ಯರ್ಥಿಯ ವಿದ್ಯಾರ್ಹತೆಯನ್ನು ನ್ಯಾಯಯುತವಾಗಿ ನಿರ್ಧರಿಸತಕ್ಕುದು ಹಾಗೂ ಅಂಕ ನಿಗಧಿಪಡಿಸಲಾದ ಪಟ್ಟಿಯ ವ್ಯವಸ್ಥೆಗನುಸಾರವಾಗಿ ಅಂಕಗಳನ್ನು ನೀಡುವುದು. ಮೆರಿಟ್ ಆಧಾರದ ಮೇಲೆ ಆಯ್ಕೆಯಾದ ವ್ಯಕ್ತಿಗಳ ಪಟ್ಟಿಯನ್ನು ಯಥಾವತ್ತಾಗಿ ವ್ಯವಸ್ಥಾಪನಾ ಮಂಡಲಿಗೆ ನೇಮಕಾತಿಗಾಗಿ ಕಳುಹಿಸುವುದು. ಅದು ಸದರಿ ಪಟ್ಟಿಗನುಸಾರವಾಗಿಯೇ ನೇಮಕಾತಿಗಳನ್ನು ಮಾಡತಕ್ಕದು.

<u>ವಿವರಣೆ :</u>

ಈ ಉಪ-ಖಂಡದಲ್ಲಿರುವುದಾವುದೂ ಆಯ್ಕೆ ಪಟ್ಟಿಯಲ್ಲಿ ಅಂಥ ನೇಮಕಾತಿಗಳಿಗೆ ಸಂಬಂಧಪಟ್ಟ ಅಧಿನಿಯಮದ ಉಪಬಂಧಗಳು ಅಥವಾ ಪರಿನಿಯಮಗಳನ್ನು ಪಾಲಿಸಿಲ್ಲವೆಂದು ವ್ಯವಸ್ಥಾಪನಾ ಮಂಡಲಿಯು ಅಭಿಪ್ರಾಯಪಟ್ಟಲ್ಲಿ, ಅದನ್ನು ಪಟ್ಟಿಗನುಸಾರವಾಗಿ ನೇಮಕಾತಿಗಳನ್ನು ಮಾಡಲು ಅಗತ್ಯ ಪಡಿಸುವುದೆಂದು ಅರ್ಥೈಸತಕ್ಕುದಲ್ಲ.

(7) (6)ನೇ ಉಪ ಖಂಡದ ಅಡಿಯಲ್ಲಿ ಪಟ್ಟಿಯನ್ನು ಸಿದ್ಧಪಡಿಸುವಾಗ ಮಂಡಲಿಯು ರಾಜ್ಯ ಸರ್ಕಾರವು ಆಗಿಂದಾಗ್ಗೆ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ ನಾಗರೀಕರಿಗಾಗಿ ಹುದ್ದೆಗಳನ್ನು ಮೀಸಲಿಡುವ ಬಗ್ಗೆ ಹೊರಡಿಸಿದ ಆದೇಶಗಳನ್ನು ಅನುಸರಿಸತಕ್ಕದು.

(8) ಅಕಸ್ಮಾತ್ ವ್ಯವಸ್ಥಾಪನ ಮಂಡಲಿ ಮತ್ತು ನೇಮಕಾತಿ ಮಂಡಲಿಯ ನಡುವೆ ಭಿನ್ನಾಭಿಪ್ರಾಯಗಳು ಉಂಟಾದಲ್ಲಿ ವಿಷಯವನ್ನು ಕುಲಾಧಿಪತಿಗಳಿಗೆ ಪರಾಮರ್ಶೆಗೆ ಸಲ್ಲಿಸುವುದು. ಇಲ್ಲಿ ಅವರ ತೀರ್ಮಾನವೇ ಅಂತಿಮವಾಗುವುದು.

(9) ಯಾವುದೇ ಹೊಸ ವಿಷಯವನ್ನು ಪ್ರಾರಂಭಿಸಿದಾಗ ಈ ವಿಷಯಕ್ಕೆ ಸಂಬಂಧಿಸಿದ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಮತ್ತು ಸಹಾಯಕ ಪ್ರಾಧ್ಯಾಪಕರುಗಳ

ನೇಮಕಾತಿ ಮಾಡಿಕೊಳ್ಳುವುದಕ್ಕೆ. ಅದರದೆ ಆದ ಪರಿನಿಯಮವನ್ನು ಮಾಡಿಕೊಳ್ಳತಕ್ಕದ್ದು.

(10) ಹಿಂದಿನ ಉಪ ಖಂಡಗಳಲ್ಲಿ ಏನೇ ಒಳಗೊಂಡಿದ್ದರೂ ವ್ಯವಸ್ಥಾಪನಾ ಮಂಡಲಿಯು, ಕುಲಪತಿಯವರ ಶಿಫಾರಸ್ಸಿನ ಮೇಲೆ ವಿಶ್ವವಿದ್ಯಾನಿಲಯದಲ್ಲಿಯ ಸಂದರ್ಶಕ ಪ್ರಾಧ್ಯಾಪಕ ಹುದ್ದೆಯನ್ನು ಸ್ವೀಕರಿಸಲು, ಉನ್ನತ ಶೈಕ್ಷಣಿಕ ಪ್ರಶಸ್ತಿ ಮತ್ತು ವೃತ್ತಿ ಸಂಬಂಧಿ ಸಾಧನೆಗಳನ್ನುಳ್ಳ ಒಬ್ಬ ವ್ಯಕ್ತಿಯನ್ನು, ಪರಸ್ಪರ ಒಪ್ಪುವಿಕೆಯ ಮೇರೆಗಿನ ಅಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಆಮಂತ್ರಿಸಲು ಸಕ್ಷಮವಾಗಿರತಕ್ಕುದು.

ಪರಂತು, ಒಂದು ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಗೊತ್ತುಪಡಿಸಿದ ಅವಧಿಯಲ್ಲಿ ನಾಲ್ಕಕ್ಕಿಂತ ಹೆಚ್ಚು ಸಂಖ್ಯೆಯ ಅಂಥ ಸಂದರ್ಶಕ ಪ್ರಾಧ್ಯಾಪಕರಿರತಕ್ಕುದಲ್ಲ.

**13. ಬಡ್ತಿ ಯೋಜನೆಗಳಿಗನುಸಾರವಾಗಿ ನೇಮಕಾತಿಗಳು :-**

11ನೇ ಖಂಡದಲ್ಲಿ ಏನೇ ಒಳಗೊಂಡಿದ್ದರೂ, ಆದರೆ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದವರಿಗೆ ಹುದ್ದೆಗಳು ಮತ್ತು ನೇಮಕಾತಿಯ ಮೀಸಲಾತಿಗಾಗಿ ಆಗಿಂದಾಗ್ಗೆ ರಾಜ್ಯ ಸರ್ಕಾರವು ಹೊರಡಿಸಿದ ನಿಯಮಗಳು ಮತ್ತು ಆದೇಶಗಳಿಗೆ ಒಳಪಟ್ಟು, ಬಡ್ತಿಯೋಜನೆ, ಯಾವುದಾದರೂ ಇದ್ದರೆ, ಅದಕ್ಕನುಸಾರವಾಗಿ, ಈ ಬಗ್ಗೆ ಪರಿನಿಯಮಗಳ ಮೂಲಕ ನಿಯಮಿಸಲಾದಂತೆ, ವಿಶ್ವವಿದ್ಯಾನಿಲಯ ಸಂಸ್ಥೆ ಅಥವಾ ಇಲಾಖೆಯಲ್ಲಿ ಪದವಿಪೂರ್ವ ಮತ್ತು ಸ್ನಾತಕೋತ್ತರ ವ್ಯಾಸಂಗ ಕ್ರಮಗಳೆರಡೂ ಇದ್ದರೆ, ವಿಶ್ವವಿದ್ಯಾನಿಲಯದ ಸಂಸ್ಥೆಗಳು ಮತ್ತು ಇಲಾಖೆಗಳಲ್ಲಿ ರೀಡರುಗಳು ಮತ್ತು ಪ್ರಾಧ್ಯಾಪಕರ ಹುದ್ದೆಗಳಿಗೆ ನೇಮಕಾತಿಯನ್ನು ವ್ಯವಸ್ಥಾಪನಾ ಮಂಡಲಿಯಿಂದ ಮಾಡಬಹುದು.

**14. ಬೋಧಕೇತರ ಮತ್ತು ಲಿಪಿಕ ಸಿಬ್ಬಂದಿಯ ನೇಮಕಾತಿ :-**

(1) ವಿಶ್ವವಿದ್ಯಾನಿಲಯದಲ್ಲಿ ಲಿಪಿಕ ಹುದ್ದೆಗಳಲ್ಲದ ಇತರ ಬೋಧಕೇತರ ಹುದ್ದೆಗಳಿಗೆ ನೇಮಕಾತಿಗಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಒಂದು ನೇಮಕಾತಿ ಮಂಡಲಿ (ಇದರಲ್ಲಿ ಇನ್ನು ಮುಂದೆ ಮಂಡಲಿಯೆಂದು ಉಲ್ಲಿಖಿತವಾದ)ಯನ್ನು ರಚಿಸತಕ್ಕುದು.

(2) ಮಂಡಲಿಯಲ್ಲಿ,

(i) ಉಪಕುಲಪತಿ - ಪದನಿಮಿತ್ತ ಅಧ್ಯಕ್ಷ ;



(ii) ಕುಲಸಚಿವ ;

(iii) ನೌಕರಿ ಭರ್ತಿಯಾಗುತ್ತಿರುವ ಶಾಖೆಯ ಕೆಲಸದ ಮೇಲ್ವಿಚಾರಣೆಗಾಗಿ, ಕುಲಪತಿಯವರಿಂದ ನಾಮ ನಿರ್ದೇಶಿತನಾದ ಒಬ್ಬ ವ್ಯಕ್ತಿ ಮತ್ತು ಅಂಥ ವ್ಯಕ್ತಿ ಇಲ್ಲದಿದ್ದಲ್ಲಿ ಸಂಬಂಧಪಟ್ಟ ಶಾಖೆಯ ಇಲಾಖಾ ಮುಖ್ಯಸ್ಥ ;

(iv) ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ, ಕುಲಪತಿಯವರಿಂದ ನಾಮ ನಿರ್ದೇಶಿತರಾದ ಮೂವರು ವ್ಯಕ್ತಿಗಳು ಅವರಲ್ಲಿ ಒಬ್ಬರು ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳಿಗೆ ಸೇರಿದವರಾಗಿರತಕ್ಕುದು ಮತ್ತು ಇನ್ನೊಬ್ಬರು, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ಮತ್ತು ಹಾಗೆಂದು ರಾಜ್ಯ ಸರ್ಕಾರದಿಂದ ಘೋಷಿತವಾದ ಯಾವುದೇ ನಾಗರಿಕ ವರ್ಗಗಳಿಗೆ ಅಥವಾ ಯಾವುದೇ ಮತೀಯ ಅಥವಾ ಭಾಷಾ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವರಾಗಿತಕ್ಕುದು, ಮತ್ತು ಮತ್ತೊಬ್ಬರು ಮಹಿಳೆಯಾಗಿರತಕ್ಕುದು.

(3) ಮಂಡಲಿಯ ಸಭೆಯ ಗಣಪೂರ್ತಿಯು, ಒಟ್ಟು ಸದಸ್ಯರ ಮೂರನೇ ಒಂದರಷ್ಟು ಸದಸ್ಯರಿಂದ ಆಗತಕ್ಕುದು.

(4) ನೇರ ನೇಮಕ ಭರ್ತಿಯ ಮೂಲಕ ತುಂಬಬೇಕಾದ ಪರಿನಿಯಮಗಳ ಮೇರೆಗಿನ ಅಂಥ ಹುದ್ದೆಗಳನ್ನು ಮಂಡಲಿಯು ಸಿದ್ಧಪಡಿಸಿದ ಪಟ್ಟಿಯಲ್ಲಿಯ ಹೆಸರುಗಳಿರುವ ಕ್ರಮದಲ್ಲಿ ಅವರಿಂದ ಆಯ್ಕೆಯಾದ ವ್ಯಕ್ತಿಗಳ ಪೈಕಿಯಿಂದ ತುಂಬತಕ್ಕುದು. ಹುದ್ದೆಗಳಿಗೆ ನೇಮಕಾತಿಯನ್ನು, ಮಂಡಲಿಯೊಂದಿಗೆ ಸಮಾಲೋಚಿಸಿದ ತರುವಾಯ, ಹುದ್ದೆಗಳ ಯಾವುದೇ ಪ್ರವರ್ಗದ ಸಂಬಂಧದಲ್ಲಿರುವ ಪರಿನಿಯಮಗಳಲ್ಲಿ ನಿಯಮಿಸಬಹುದಾದಂತೆ ಬಡ್ತಿ, ಪ್ರತಿಯೋಜನೆ ಅಥವಾ ವರ್ಗಾವಣೆ ಅಥವಾ ಕರಾರಿನ ಮೂಲಕ ಮಾಡತಕ್ಕುದು.

(5) ನೇರ ನೇಮಕ ಭರ್ತಿಯ ರಿಕ್ತ ಸ್ಥಾನಗಳಿಗೆ ನೇಮಕಾತಿಗಾಗಿ ಆಯ್ಕೆ ಮಾಡಿದ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸುವಾಗ, ಮಂಡಲಿಯು, ರಾಜ್ಯ ಸರ್ಕಾರವು ಆಗಿಂದಾಗ್ಗೆ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ ನಾಗರೀಕರಿಗಾಗಿ ಹುದ್ದೆಗಳನ್ನು ಮೀಸಲಿರಿಸುವುದಕ್ಕಾಗಿ ಹೊರಡಿಸಿದ ಆದೇಶಗಳನ್ನು ಪಾಲಿಸತಕ್ಕುದು.

(6) ಎಲ್ಲ ನೇಮಕಾತಿಗಳನ್ನು ವ್ಯವಸ್ಥಾಪನಾ ಮಂಡಲಿಯು ಮಾಡತಕ್ಕುದು ಮಂಡಲಿ ಮತ್ತು ವ್ಯವಸ್ಥಾಪನಾ ಮಂಡಲಿಯ ಮಧ್ಯೆ ಭಿನ್ನಾಭಿಪ್ರಾಯ ಉಂಟಾದ ಸಂದರ್ಭದಲ್ಲಿ, ವಿಷಯವನ್ನು ಕುಲಪತಿಯವರಿಗೆ ಕಳಿಸತಕ್ಕುದು ಮತ್ತು ಅವರ ತೀರ್ಮಾನವು ಅಂತಿಮವಾಗಿರತಕ್ಕುದು ;

ಪರಂತು, ವೇತನ ಶ್ರೇಣಿಯ ಗರಿಷ್ಠ ಮಿತಿಯ ಎರಡು ಸಾವಿರದ ಇಪ್ಪತ್ತನಾಲ್ಕು ರೂಪಾಯಿಗಳನ್ನು ಮೀರಿದ ಹುದ್ದೆಗಳಿಗೆ ಕುಲಪತಿಯವರು ನೇಮಕಾತಿ ಮಾಡತಕ್ಕುದು.

(7) ಹಿಂದಿನ ಉಪ-ಖಂಡಗಳಲ್ಲಿ ಏನೇ ಇದ್ದರೂ, ರಾಜ್ಯ ಸಿವಿಲ್ ಸೇವೆಗಳ 'ಸಿ' ಮತ್ತು 'ಡಿ' ಗುಂಪುಗಳ ಹುದ್ದೆಗಳಿಗೆ ಸಮನಾದ, ವಿಶ್ವವಿದ್ಯಾನಿಲಯದಲ್ಲಿಯ ಹುದ್ದೆಗಳಿಗೆ ನೇಮಕಾತಿಯನ್ನು ಈ ಉದ್ದೇಶಕ್ಕಾಗಿ ರೂಪಿಸಬೇಕಾದ ಪರಿನಿಯಮಗಳಿಗೆ ಅನುಸಾರವಾಗಿ ಮತ್ತು ರಾಜ್ಯ ಸರ್ಕಾರವು ಆಗಿಂದಾಗ್ಗೆ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳಿಗಾಗಿ ಹುದ್ದೆಗಳನ್ನು ಮೀಸಲಿರಿಸುವ ಬಗ್ಗೆ ಹೊರಡಿಸಿದ ಆದೇಶಕ್ಕನುಸಾರವಾಗಿ ಕುಲಪತಿಯವರು ಮಾಡತಕ್ಕುದು.

**15. ಮಾನ್ಯತೆ ಪಡೆದ ಉಪಾಧ್ಯಾಯರು :-**

(1) ಇತರ ವಿಶ್ವವಿದ್ಯಾನಿಲಯಗಳು, ಸಂಸ್ಥೆಗಳು, ಅಥವಾ ಸಂಘಟನೆಗಳಲ್ಲಿ ಉಪಾಧ್ಯಾಯರಾಗಿ ಕೆಲಸ ಮಾಡುತ್ತಿರುವ ವ್ಯಕ್ತಿಗಳ ಮಾನ್ಯತೆ ಪಡೆಯುವುದಕ್ಕೆ ವಿದ್ಯಾರ್ಹತೆಗಳು ಅಧ್ಯಾದೇಶದಲ್ಲಿ ನಿಯಮಿಸಲಾದಂತೆ ಇರತಕ್ಕುದು.

(2) ಶಿಕ್ಷಕರಾಗಿ ಮಾನ್ಯತೆ ನೀಡುವ ಬಗ್ಗೆ ಮಾನ್ಯತೆಯ ಅವಧಿ ಮತ್ತು ಮಾನ್ಯತೆಯನ್ನು ಹಿಂತೆಗೆದುಕೊಳ್ಳುವ ರೀತಿಯನ್ನು ಅಧ್ಯಾದೇಶಗಳಲ್ಲಿ ನಿಯಮಿಸತಕ್ಕುದು.

**16. ಸಮಿತಿಗಳು :-**

(1) ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರವು ತಾನು ಉಚಿತವೆಂದು ಭಾವಿಸಬಹುದಾದಷ್ಟು ಸಂಖ್ಯೆ ಸ್ಥಾಯಿ ಅಥವಾ ವಿಶೇಷ ಸಮಿತಿಗಳನ್ನು ನೇಮಿಸಬಹುದು ಮತ್ತು ಅಂಥ ಸಮಿತಿಗಳಿಗೆ, ಅಂಥ ಪ್ರಾಧಿಕಾರದ ಸದಸ್ಯರಲ್ಲದ ವ್ಯಕ್ತಿಗಳನ್ನು ನೇಮಿಸಬಹುದು.

(2) (1)ನೇ ಉಪ - ಖಂಡದ ಅಡಿಯಲ್ಲಿ ನೇಮಕಗೊಂಡ ಯಾವುದೇ ಸಮಿತಿಯು, ತನ್ನನ್ನು ನೇಮಕ ಮಾಡಿದ ಪ್ರಾಧಿಕಾರದಿಂದ ಉತ್ತರಾನುಮೋದನೆ ಪಡೆಯುವುದಕ್ಕೆ



ಒಳಪಟ್ಟು ತನಗೆ ಪ್ರತ್ಯಾಯೋಜಿಸಲಾದ ಯಾವುದೇ ವಿಷಯದ ಬಗ್ಗೆ ವ್ಯವಹರಿಸಬಹುದು.

**17. ವಿಶ್ವವಿದ್ಯಾನಿಲಯದ ಉಪಾಧ್ಯಾಯರು ಮತ್ತು ಇತರ ವಿದ್ಯಾವಿಷಯಕ ಸಿಬ್ಬಂದಿಯ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ನಡಾವಳಿ ಸಂಹಿತೆ :-**

(1) ವಿಶ್ವವಿದ್ಯಾನಿಲಯದ ಎಲ್ಲ ಉಪಾಧ್ಯಾಯರು ಮತ್ತು ಇತರ ವಿದ್ಯಾವಿಷಯಕ ಸಿಬ್ಬಂದಿಯು ತದ್ವಿರುದ್ಧವಾಗಿ ಯಾವುದೇ ಕರಾರು ಇರದಿದ್ದಲ್ಲಿ ಪರಿನಿಯಮಗಳು ಮತ್ತು ಅಧ್ಯಾದೇಶಗಳಲ್ಲಿ ನಿರ್ದಿಷ್ಟಪಡಿಸಲಾದಂತೆ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ನಡಾವಳಿ ಸಂಹಿತೆಗೆ ಬದ್ಧರಾಗಿರತಕ್ಕುದು.

(2) ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಸಿಬ್ಬಂದಿಯ ಪ್ರತಿಯೊಬ್ಬ ಉಪಾಧ್ಯಾಯ ಮತ್ತು ಸದಸ್ಯನು ಲಿಖಿತ ಕರಾರಿನ ಮೇಲೆ ನೇಮಕಗೊಳ್ಳತಕ್ಕುದು ಮತ್ತು ಅದರ ಪ್ರಪತ್ರವನ್ನು ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸತಕ್ಕುದು.

(3) (2)ನೇ ಉಪ-ಖಂಡದಲ್ಲಿ ಉಲ್ಲೇಖಿಸಲಾದ ಪ್ರತಿಯೊಂದು ಕರಾರಿನ ಒಂದು ಪ್ರತಿಯನ್ನು ಕುಲಸಚಿವರ ಬಳಿ ಇಡತಕ್ಕುದು.

**18. ವಿಶ್ವವಿದ್ಯಾನಿಲಯದ ಇತರ ಉದ್ಯೋಗಿಗಳ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ನಡಾವಳಿ ಸಂಹಿತೆ.**

(1) ವಿಶ್ವವಿದ್ಯಾನಿಲಯದ ಉಪಾಧ್ಯಾಯರು ಮತ್ತು ಇತರ ವಿದ್ಯಾವಿಷಯಕ ಸಿಬ್ಬಂದಿಯಲ್ಲದೆ ಎಲ್ಲ ಉದ್ಯೋಗಿಗಳು ತದ್ವಿರುದ್ಧವಾದ ಯಾವುದೇ ಕರಾರು ಇಲ್ಲದಿದ್ದಲ್ಲಿ ಪರಿನಿಯಮಗಳು ಮತ್ತು ಅಧ್ಯಾದೇಶಗಳಲ್ಲಿ ನಿರ್ದಿಷ್ಟಪಡಿಸಲಾದಂತೆ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ನಡಾವಳಿ ಸಂಹಿತೆಗೆ ಬದ್ಧರಾಗಿರತಕ್ಕುದು.

**19. ವಿಶ್ವ ವಿದ್ಯಾನಿಲಯದ ಉದ್ಯೋಗಿಗಳನ್ನು ತೆಗೆದುಹಾಕುವುದು -**

(1) ವಿಶ್ವವಿದ್ಯಾನಿಲಯದ ಒಬ್ಬ ಉಪಾಧ್ಯಾಯ, ವಿದ್ಯಾವಿಷಯಕ ಸಿಬ್ಬಂದಿಯ ಒಬ್ಬ ಸದಸ್ಯ ಅಥವಾ ವಿಶ್ವವಿದ್ಯಾನಿಲಯದ ಇತರ ಉದ್ಯೋಗಿಯ ವಿರುದ್ಧ ದುರ್ವರ್ತನೆಯ ಆರೋಪವಿದ್ದಲ್ಲಿ, ಉಪಾಧ್ಯಾಯ ಅಥವಾ ವಿದ್ಯಾವಿಷಯಕ ಸಿಬ್ಬಂದಿಯ ಸಂದರ್ಭದಲ್ಲಿ ಉಪಕುಲಪತಿಯವರು ಮತ್ತು ಇತರ ಉದ್ಯೋಗಿಯ ಸಂದರ್ಭದಲ್ಲಿ ನೇಮಕಾತಿ ಮಾಡಲು ಸಕ್ಷಮವಿರುವ ಪ್ರಾಧಿಕಾರವು (ಇದರಲ್ಲಿ ಇನ್ನು ಮುಂದೆ ನೇಮಕಾತಿ ಪ್ರಾಧಿಕಾರವೆಂದು ಉಲ್ಲಿಖಿತವಾದ) ಲಿಖಿತ ಆದೇಶದ

ಮೂಲಕ, ಅಂಥ ಉಪಾಧ್ಯಾಯ, ವಿದ್ಯಾವಿಷಯಕ ಸಿಬ್ಬಂದಿಯ ಸದಸ್ಯ ಅಥವಾ ಇತರ ಉದ್ಯೋಗಿಯನ್ನು ಅಮಾನತ್ತಿನಲ್ಲಿಡತಕ್ಕುದು ಮತ್ತು ಹಾಗೆ ಆದೇಶ ಮಾಡಬೇಕಾಗಿ ಬಂದ ಸನ್ನಿವೇಶದ ಬಗ್ಗೆ ವ್ಯವಸ್ಥಾಪನಾ ಮಂಡಲಿಗೆ ಕೂಡಲೇ ವರದಿ ಸಲ್ಲಿಸತಕ್ಕುದು.

(2) ನೇಮಕಾತಿ ಕರಾರಿನ ನಿಬಂಧನೆಗಳಲ್ಲಿ ಅಥವಾ ಉದ್ಯೋಗಿಯ ಇತರ ಯಾವುದೇ ಸೇವಾ ನಿಬಂಧನೆಗಳು ಮತ್ತು ಷರತ್ತುಗಳಲ್ಲಿ ಏನೇ ಒಳಗೊಂಡಿದ್ದರೂ ಉಪಾಧ್ಯಾಯರು ಮತ್ತು ಇತರ ವಿದ್ಯಾವಿಷಯಕ ಸಿಬ್ಬಂದಿಯ ಸಂಬಂಧದಲ್ಲಿ ವ್ಯವಸ್ಥಾಪನಾ ಮಂಡಲಿಯು ಮತ್ತು ಇತರ ಉದ್ಯೋಗಿಗಳ ಸಂಬಂಧದಲ್ಲಿ ನೇಮಕಾತಿ ಪ್ರಾಧಿಕಾರವು, ಸಂದರ್ಭಾನುಸಾರ ಒಬ್ಬ ಉಪಾಧ್ಯಾಯ ಅಥವಾ ವಿದ್ಯಾವಿಷಯಕ ಸಿಬ್ಬಂದಿಯ ಒಬ್ಬ ಸದಸ್ಯ ಅಥವಾ ಉದ್ಯೋಗಿಯನ್ನು ದುರ್ವರ್ತನೆಯ ಕಾರಣಗಳಿಗಾಗಿ ಸೇವೆಯಿಂದ ತೆಗೆದುಹಾಕಲು ಅಧಿಕಾರ ಹೊಂದಿರತಕ್ಕುದು.

(3) ಹಿಂದೆ ಹೇಳಿರುವುದನ್ನುಳಿದು, ಸಂದರ್ಭಾನುಸಾರ, ವ್ಯವಸ್ಥಾಪನಾ ಮಂಡಲಿ ಅಥವಾ ನೇಮಕಾತಿ ಪ್ರಾಧಿಕಾರವು ಸೂಕ್ತ ಕಾರಣವಿದ್ದ ಹೊರತು ಮತ್ತು ಮೂರು ತಿಂಗಳ ನೋಟೀಸು ನೀಡಿದ ಅಥವಾ ಅದರ ಬದಲಾಗಿ ಮೂರು ತಿಂಗಳ ವೇತನವನ್ನು ಸಂದಾಯ ಮಾಡಿದ ಹೊರತು ಯಾವೊಬ್ಬ ಉಪಾಧ್ಯಾಯ, ವಿದ್ಯಾವಿಷಯಕ ಸಿಬ್ಬಂದಿಯ ಸದಸ್ಯ ಅಥವಾ ಇತರ ಉದ್ಯೋಗಿಯನ್ನು ತೆಗೆದುಹಾಕಲು ಹಕ್ಕುಳ್ಳದ್ದಾಗಿರತಕ್ಕುದಲ್ಲ.

(4) ಯಾವೊಬ್ಬ ಉಪಾಧ್ಯಾಯ, ವಿದ್ಯಾವಿಷಯಕ ಸಿಬ್ಬಂದಿಯ ಸದಸ್ಯ ಅಥವಾ ಇತರ ಉದ್ಯೋಗಿಯನ್ನು ಅವನಿಗೆ ಸಂಬಂಧಿಸಿದಂತೆ ಕೈಗೊಳ್ಳಲು ಉದ್ದೇಶಿಸಲಾದ ಕ್ರಮದ ವಿರುದ್ಧ ಕ್ರಮವನ್ನು ಏಕೆ ಕೈಗೊಳ್ಳಬಾರದೆಂಬುದಕ್ಕೆ ಕಾರಣ ತೋರಿಸಲು ಯುಕ್ತ ಅವಕಾಶ ನೀಡಿದ ಹೊರತು (2)ನೇ ಉಪ-ಖಂಡ ಅಥವಾ (3)ನೇ ಉಪ-ಖಂಡದ ಅಡಿಯಲ್ಲಿ ತೆಗೆದುಹಾಕತಕ್ಕುದಲ್ಲ.

(5) ಒಬ್ಬ ಉಪಾಧ್ಯಾಯ, ವಿದ್ಯಾವಿಷಯಕ, ಸಿಬ್ಬಂದಿಯ ಸದಸ್ಯ ಅಥವಾ ಇತರ ಉದ್ಯೋಗಿಯನ್ನು ಸೇವೆಯಿಂದ ತೆಗೆದುಹಾಕುವಿಕೆಯ, ತೆಗೆದು ಹಾಕುವಿಕೆಯ ಆದೇಶವನ್ನು ಹೊರಡಿಸಲಾದ ದಿನಾಂಕದಿಂದ ಪರಿಣಾಮಕಾರಿಯಾಗತಕ್ಕುದು ;

ಪರಂತು, ಉಪಾಧ್ಯಾಯ, ವಿದ್ಯಾವಿಷಯಕ, ಸಿಬ್ಬಂದಿಯ ಸದಸ್ಯ ಅಥವಾ ಇತರ ಉದ್ಯೋಗಿಯನ್ನು ಸೇವೆಯಿಂದ ತೆಗೆದುಹಾಕಿದ ಕಾಲದಲ್ಲಿ ಅಮಾನತ್ತಿನಲ್ಲಿರಿಸಿದ್ದರೆ, ಅಂಥ ತೆಗೆದುಹಾಕುವಿಕೆಯು, ಹಾಗೆ ಅವನನ್ನು ಅಮಾನತ್ತಿನಲ್ಲಿಡಲಾದ ದಿನಾಂಕದಿಂದ ಪರಿಣಾಮಕಾರಿಯಾಗತಕ್ಕುದು.



(6) ಈ ಪರಿನಿಯಮಗಳ ಪೂರ್ವೋಕ್ತ ಉಪಬಂಧಗಳಲ್ಲಿ ಏನೇ ಒಳಗೊಂಡಿದ್ದರೂ, ಒಬ್ಬ ಉಪಾಧ್ಯಾಯ ವಿದ್ಯಾವಿಷಯಕ ಸಿಬ್ಬಂದಿಯ ಸದಸ್ಯ ಅಥವಾ ಇತರ ಉದ್ಯೋಗಿಯು,

(ಎ) ಅವನು ಖಾಯಂ ಉದ್ಯೋಗಿಯಾಗಿದ್ದರೆ, ಸಂದರ್ಭಾನುಸಾರ, ವ್ಯವಸ್ಥಾಪನಾ ಮಂಡಲಿಗೆ ಅಥವಾ ನೇಮಕಾತಿ ಪ್ರಾಧಿಕಾರಕ್ಕೆ ಲಿಖಿತದಲ್ಲಿ ಮೂರು ತಿಂಗಳ ನೋಟೀಸು ನೀಡಿದ ತರುವಾಯ ಅಥವಾ ಮೂರು ತಿಂಗಳ ವೇತನವನ್ನು ಸಂದಾಯ ಮಾಡಿದ ತರುವಾಯ, ಮಾತ್ರ

(ಬಿ) ಅವನು ಖಾಯಂ ಉದ್ಯೋಗಿಯಾಗಿರದಿದ್ದರೆ, ಸಂದರ್ಭಾನುಸಾರ ವ್ಯವಸ್ಥಾಪನಾ ಮಂಡಲಿಗೆ ಅಥವಾ ನೇಮಕಾತಿ ಪ್ರಾಧಿಕಾರಕ್ಕೆ ಲಿಖಿತದಲ್ಲಿ ಒಂದು ತಿಂಗಳ ನೋಟೀಸು ನೀಡಿದ ತರುವಾಯ ಮಾತ್ರವೇ ಅಥವಾ ಅದಕ್ಕೆ ಬದಲಾಗಿ ಒಂದು ತಿಂಗಳ ವೇತನವನ್ನು ಸಂದಾಯ ಮಾಡಿದರೆ ಮಾತ್ರ.

-ರಾಜೀನಾಮೆ ಸಲ್ಲಿಸಬಹುದು :

ಪರಂತು, ಅಂಥ ರಾಜೀನಾಮೆಯು, ಸಂದರ್ಭಾನುಸಾರ, ವ್ಯವಸ್ಥಾಪನಾ ಮಂಡಲಿ ಅಥವಾ ನೇಮಕಾತಿ ಪ್ರಾಧಿಕಾರವು ರಾಜೀನಾಮೆಯನ್ನು ಅಂಗೀಕರಿಸಿದ ದಿನಾಂಕದಿಂದ ಮಾತ್ರ ಪರಿಣಾಮಕಾರಿಯಾಗತಕ್ಕುದು.

**20. ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ಕಾಪಾಡುವುದು.**

(1) ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟಂತೆ, ಶಿಸ್ತು ಮೂಡಿಸುವ ಮತ್ತು ಅವರ ಮೇಲೆ ಶಿಸ್ತು ಕ್ರಮ ಕೈಗೊಳ್ಳುವುದಕ್ಕೆ ಸಂಬಂಧಪಟ್ಟ ಅಧಿಕಾರಗಳು ಉಪಕುಲಪತಿಯವರಲ್ಲಿ ನಿಹಿತವಾಗಿರತಕ್ಕುದು, ಉಪಕುಲಪತಿಯವರು ತಾವು ಉಚಿತವೆಂದು ಭಾವಿಸಬಹುದಾದಂತೆ ತಮ್ಮ ಎಲ್ಲ ಅಥವಾ ಯಾವುದೇ ಅಧಿಕಾರಗಳನ್ನು ಪ್ರತ್ಯಾಯೋಜಿಸಬಹುದು.

(2) ಉಪಕುಲಪತಿಯವರು, ಶಿಸ್ತು ಕಾಪಾಡಲು ಮತ್ತು ಶಿಸ್ತು ಕ್ರಮ ಕೈಗೊಳ್ಳಲು ತಾವು ಸೂಕ್ತವೆಂದು ಭಾವಿಸುವ ಅಂಥ ಕ್ರಮಕ್ಕೆ ಸಂಬಂಧಪಟ್ಟ ತಮ್ಮ ಅಧಿಕಾರಿಗಳ ಸಾಮಾನ್ಯತೆಗೆ ಪ್ರತಿಕೂಲವಾಗದಂತೆ, ತಮ್ಮ ಅಧಿಕಾರವನ್ನು ಚಲಾಯಿಸಿ, ಆದೇಶದ ಮೂಲಕ, ಯಾವೊಬ್ಬ ವಿದ್ಯಾರ್ಥಿಯನ್ನು ಅಥವಾ ವಿದ್ಯಾರ್ಥಿಗಳನ್ನು ಒಂದು ನಿರ್ದಿಷ್ಟ ಅವಧಿಯವರೆಗೆ ಕಾಲೇಜಿನಿಂದ ಹೊರದೂಡಬೇಕೆಂದು ಮತ್ತು ಒಂದು ನಿರ್ದಿಷ್ಟ ಅವಧಿಯವರೆಗೆ ಉಚ್ಚಾಟಿಸಬೇಕೆಂದು ಮತ್ತು ಒಂದು ವ್ಯಾಸಂಗ ಕ್ರಮ ಅಥವಾ ಅವಧಿಗೆ ಪ್ರವೇಶ ನೀಡಬಾರದೆಂದು ಅಥವಾ ಆದೇಶದಲ್ಲಿ ನಿರ್ದಿಷ್ಟ

ಪಡಿಸುವ ಮೊತ್ತದಷ್ಟು ಜುಲ್ಮಾನೆ ವಿಧಿಸಿ ದಂಡಿಸಬೇಕೆಂದು ಅಥವಾ ವಿಶ್ವವಿದ್ಯಾನಿಲಯ ಅಥವಾ ಒಂದು ಮಾನ್ಯತೆ ಪಡೆದ ಸಂಸ್ಥೆಯು ನಡೆಸುವ ಪರೀಕ್ಷೆಗೆ ಅಥವಾ ಪರೀಕ್ಷೆಗಳಿಗೆ ಅವನನ್ನು ಒಂದು ಅಥವಾ ಹೆಚ್ಚು ವರ್ಷ ನಿಷೇಧಿಸಬೇಕೆಂದು ಅಥವಾ ಸಂಬಂಧಪಟ್ಟ ವಿದ್ಯಾರ್ಥಿ ಅಥವಾ ವಿದ್ಯಾರ್ಥಿಗಳು ಹಾಜರಾದ ಪರೀಕ್ಷೆ ಅಥವಾ ಪರೀಕ್ಷೆಗಳ ಫಲಿತಾಂಶಗಳನ್ನು ರದ್ದುಪಡಿಸಬೇಕೆಂದು ನಿರ್ದೇಶನ ನೀಡಬಹುದು.

(3) ಮಾನ್ಯತೆ ಪಡೆದ ಸಂಸ್ಥೆಗಳ ಮುಖ್ಯಸ್ಥರು, ಅಂಥ ಸಂಸ್ಥೆಯನ್ನು ಸರಿಯಾಗಿ ನಡೆಸಲು ಅವಶ್ಯಕವೆನಿಸಬಹುದಾದಂತೆ ತಮ್ಮ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಮೇಲೆ ಅಂಥ ಎಲ್ಲ ಶಿಸ್ತು ಕ್ರಮದ ಅಧಿಕಾರಗಳನ್ನು ಚಲಾಯಿಸುವ ಅಧಿಕಾರವನ್ನು ಹೊಂದಿರತಕ್ಕದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಸಹಿ

**ಶಿಕ್ಷಣ ಸಚಿವಾಲಯ**

**ಅಧಿಸೂಚನೆ ಸಂಖ್ಯೆ ಇಡಿ ೧ಯು ಒವಿ ೯೫**

**ಬೆಂಗಳೂರು ದಿನಾಂಕ ೧೩ನೆ ಫೆಬ್ರವರಿ ೧೯೯೬**

೧೯೯೨ರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಅಧಿನಿಯಮ (೧೯೯೪ರ ಕರ್ನಾಟಕ ಅಧಿನಿಯಮ ಸಂಖ್ಯೆ ೪೮) ೧ನೇ ಪ್ರಕರಣದ (೩)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಸದರಿ ಅಧಿನಿಯಮ ಜಾರಿಗೆ ಬರುವ ದಿನಾಂಕವನ್ನು ೧೯೯೬ರ ಜೂನ್ ಒಂದನೆ ದಿನಾಂಕವೆಂದು ಕರ್ನಾಟಕ ಸರ್ಕಾರವು ಈ ಮೂಲಕ ಗೊತ್ತುಪಡಿಸಿದೆ.

---

(ಮೈ.ವಿ.ಮು - ಕೆ. ಸಂ. - ೪೧೮೭ - ೫೦೦ ಪ್ರತಿಗಳು - ತಾ ೨೨.೫.೧೯೯೬)

(ಕರಾಮುವಿ ಕಾಯ್ದೆ - ೧೦೦೦ ಪ್ರತಿಗಳು - ತಾ )

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ**

**(ಸಹಿ)**

**ಸರ್ಕಾರದ ಅಧೀನ ಕಾರ್ಯದರ್ಶಿ**

**ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ)**